THE

# Karnataka Granthamala

SERIES NO 37

# ಪ್ರಬಂಧಾವಳಿ,

ಕರ್ಣಾಟಕ ಕಾವ್ಯಕಲಾನಿಧಿಯ ಸಹ ಪ್ರವರ್ತಕ-

ಎಂ. ಎ. ರಾಮಾನುಜಯ್ಯಂಗಾರ್ಯರಿಂದ

ರಚಿತವಾದುದು.

" ಅಮಲೀಮಸಮಚ್ಛಿದ್ರ ।
ಮಚೌರ್ಯ ಮತಿಸುಂದರಂ ॥
ಅದೇಯಮಪ್ರತಿಗ್ರಾಹ್ಯ ।
ಮಹೋಜ್ಞಾನಂ ಮಹಾಧನಂ ॥ "

ಮೈಸೂರು

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ

ಮುದ್ರಿತವಾಯಿತು.

( All Rights reserved )

[ಕ್ರಯ: [illegible] ]

೧೯೦೪.

THE

**Karnataka Granthamala**

SERIES NO 37

# ಪ್ರಬಂಧಾವಳಿ,

ಕರ್ಣಾಟಕ ಕಾವ್ಯಕಲಾನಿಧಿಯ ಸಹ ಪ್ರವರ್ತಕ—

ಎಂ. ಎ. ರಾಮಾನುಜಯ್ಯಂಗಾರ್ಯರಿಂದ

ರಚಿತವಾದುದು.

387/K

“ಅಮಲೀಮಸಮಚ್ಛಿದ್ರ ।
ಮಚೌರ್ಯ ಮತಿಸುಂದರಂ ॥
ಆದೇಯಮಪ್ರತಿಗ್ರಾಹ್ಯ ।
ಮಹೋಜ್ಞಾನಂ ಮಹಾಧನಂ ॥”

ವೇದಾದ್ರಿ
VEDADRI

ಮೈಸೂರು

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ

ಮುದ್ರಿತವಾಯಿತು.

( *All Rights reserved* )

[ಕ್ರಯ [illegible] ]

೧೯೦೪.

# ಪೀಠಿಕೆ.

ಕನ್ನಡಭಾಷೆಯಲ್ಲಿ ಪ್ರಬಂಧಗಳ ರಚನೆಯೇ ಇಲ್ಲವೆಂಬ ಕೊರತೆಯನ್ನು ನಿವಾರಣ ಮಾಡುವುದೇ ಈ ನನ್ನ ಪ್ರಯತ್ನೋದ್ದೇಶವು. ಪ್ರಬಂಧ ರಚನೆಯು ಕನ್ನಡಿಗರಲ್ಲಿ ವಾಡಿಕೆಯಲ್ಲಿಲ್ಲದುದರಿಂದ ಪ್ರಬಂಧರಚನಾಕ್ರಮವನ್ನು ಉದ್ದೇಶಿಸಿ ಪ್ರಥಮಪ್ರಬಂಧವನ್ನು ಬರೆದಿರುವೆನು. ಸಿಕ್ಕಿದ ವಿಷಯಗಳನ್ನು ಕುರಿತು ಪ್ರಬಂಧಗಳನ್ನು ರಚಿಸುವುದರಲ್ಲಿ ಔಚಿತ್ಯ ಕಾಣಬರದೆ ಇದ್ದುದರಿಂದ "ಸುಖಸಾಧನಂ" ಎಂದರೆ, ಈ ಲೋಕದಲ್ಲಿ ಮನುಷ್ಯನು ಸುಖಪಡುವುದಕ್ಕೆ ಏನೇನು ಪ್ರಬಲ ಸಾಮಗ್ರಿಗಳು ಬೇಕಾಗಿರುವುವು ? ಎಂಬ ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ ವಿಷಯಕ್ಕೆ ಅಂಗಗಳಂತಿರುವ ತಕ್ಕ ವಿಷಯಗಳನ್ನು ನಿರ್ದೇಶಿಸಿ, ಪ್ರಬಂಧಗಳನ್ನು ಬರೆದಿರುವೆನು. ಗ್ರಂಥೋದ್ದೇಶವಾದ "ಸುಖಸಾಧನ" ವನ್ನೇ ಕೊನೆಯ ಪ್ರಬಂಧವನ್ನಾಗಿ ತೆಗೆದುಕೊಂಡು, ಅದರ ವಿಭಾಗಗಳಂತಿರುವ ಹಿಂದಣ ಪ್ರಬಂಧಗಳಿಗೆ ಅಲ್ಲಲ್ಲೆ ಸೂಚನೆ ಕೊಟ್ಟಿರುವೆನು.

ಆಂಗ್ಲದ ಶಾಸ್ತ್ರಜ್ಞರು ಮನುಷ್ಯನ ಉತ್ಕೃಷ್ಟತೆಗೆ ಅವಶ್ಯಕವಾಗಿ ಬೇಕೆಂದು ನಿರೂಪಿಸುವ ಜ್ಞಾನವ್ಯವಸಾಯ, ಧರ್ಮವ್ಯವಸಾಯ, ಆರೋಗ್ಯ ವ್ಯವಸಾಯಗಳಿಗೆ ಅನುಸಾರವಾಗಿಯೂ ಈ ಪ್ರಬಂಧಗಳು ರಚಿತವಾಗಿವೆ. ಆರೋಗ್ಯವಿಷಯದಲ್ಲಿ ಮಾತ್ರ ಬೇರೆ ಬೇರೆ ಪ್ರಬಂಧಗಳನ್ನು ರಚಿಸದಿದ್ದರೂ ಅದರ ಪ್ರಾಮುಖ್ಯತೆಯನ್ನು ಅಲ್ಲಲ್ಲಿ ದಿಕ್ಪ್ರದರ್ಶನ ಮಾಡಿರುವೆನು. ಉಳಿದ ಎರಡು ವ್ಯವಸಾಯಗಳ ವಿಷಯದಲ್ಲಿ ಆವಶ್ಯಕವಾಗಿ ಹೇಳಬೇಕಾಗಿರುವ ಪ್ರಬಂಧಗಳನ್ನು ರಚಿಸಿರುವೆನು.

ಪ್ರಬಂಧಗಳ ನಿರ್ವಾಹವು ವಿಷಯಸೂಚಿಯಿಂದ ವ್ಯಕ್ತವಾಗುತ್ತದೆ.

ಈ ಗ್ರಂಥವು ಪೂರ್ತಿಯಾಗುವುದಕ್ಕೆ ಮುಂದಾಗಿಯೇ ಪ್ರಬಂಧಗಳನ್ನು ಬರೆಯುತ್ತಿದ್ದಹಾಗೆಯೇ ಗ್ರಂಥಮಾಲೆಯಲ್ಲಿ ಮುದ್ರಣಕ್ಕೆ ಕೊಡುತ್ತ ಬಂದುದರಿಂದ, ಈ ಗ್ರಂಥದಲ್ಲಿ ಪ್ರಬಂಧಗಳು ಸರಿಯಾದ ಕ್ರಮದಲ್ಲಿ ಬಂದಿಲ್ಲ; ಇದಕ್ಕಾಗಿಯೂ; ಪ್ರಬಂಧರಚನೆಗೆ ಕನ್ನಡಭಾಷೆಯಲ್ಲಿ ಇದೇ ಮೊದಲಾದುದರಿಂದ ಅನೇಕ ಪ್ರಮಾದಗಳು ಬಂದಿರಬಹುದು : ಅದಕ್ಕಾಗಿಯೂ ವಾಚಕರ ಮನ್ನಣೆಯನ್ನು ಬೇಡಿಕೊಳ್ಳುತ್ತೇನೆ.

ಪ್ರಬಂಧರಚನೆಯಲ್ಲಿ ವಿಶೇಷ ಪ್ರೋತ್ಸಾಹವನ್ನು ಕೊಟ್ಟು ಸಹಾಯ ಮಾಡಿದುದಕ್ಕಾಗಿ ನನ್ನ ಮಿತ್ರರಾದ ಮ॥ ರಾ॥ ಎಸ ಜಿ. ನರಸಿಂಹಾಚಾರ್ಯರಲ್ಲಿ ಬಹಳ ಕೃತಜ್ಞನಾಗಿರುತ್ತೇನೆ. ಮತ್ತು, ಗ್ರಂಥಮಾಲೆಯಲ್ಲಿ ಪ್ರಬಂಧಗಳ ಮುದ್ರಣಕ್ಕೆ ಅವಕಾಶವನ್ನು ಒದಗಿಸಿಕೊಟ್ಟು, ಅವುಗಳನ್ನು ಪ್ರಚಾರಕ್ಕೆ ತಂದ ಮ॥ ರಾ॥ ಬಿ. ಸುಬ್ಬರಾವು, ಬಿ. ಏ. ಮತ್ತು ಎಂ. ಶಾಮರಾವ್, ಎಂ ಏ ಇವರುಗಳ ಸಹಾಯವು ಚಿರಸ್ಮರಣೀಯವಾಗಿದೆ.

1—3—94.

ಗ್ರಂಥಕರ್ತ.

ಶ್ರೀಃ.

# ವಿಷಯಸೂಚಿ


### ೧. ಪ್ರಬಂಧರಚನೆ. ಪುಟ ಸಂಖ್ಯೆ. ೧—೪

ಪ್ರಬಂಧರಚನೆಯಲ್ಲಿ ಆಸೆಯುಳ್ಳವನು ಮೊದಲು ಮಾಡಬೇಕಾದ ಕಾರ್ಯಗಳು :—
ಗ್ರಂಥಾವಲೋಕನ. ಮನನ, ಪರಿಚ್ಛೇದ.
ರಚನಾಕ್ರಮ; ದೋಷಗಳು — ಪ್ರಕ್ರಮಭಂಗ, ಪದದೋಷ, ವಾಕ್ಯದೋಷ, ಪೌನರುಕ್ತ್ಯ.
ವಿಷಯ ವಿಭಾಗ ಕ್ರಮ.
ಉಪಸಂಹಾರ.

### ೨. ಸಾಲ. ಪು. ಸಂ. ೫—೯

ಸಾಲವೆಂದರೇನು ?
ಮುಂದಣ ಆಲೋಚನೆಯಿಲ್ಲದೆ ಇರುವಿಕೆಯೂ, ದೋರಣೆಯೂ ಕಡ ಮಾಡುವುದರಲ್ಲಿ ಮುಖ್ಯಕಾರಣಗಳು.
ಕಡಮಾಡಿದ ರೈತರೇ ಮೊದಲಾದವರ ಪಾಡು.
ಅವಿವೇಕದ ಸಾಲದಿಂದ ಉಂಟಾಗುವ ಕೇಡುಗಳು :— ನಷ್ಟ, ಊರು ಬಿಡಬೇಕಾಗುವುದು, ಪುತ್ರದ್ರೋಹ, ಆತ್ಮದ್ರೋಹ, ನಾನಾವಿಧವಾದ ಅವಮಾನ.
ಪಾಪಸಂಭವ.
ಅನುಭವಶಾಲಿಗಳ ಮಾತು.
ಕಡಮಾಡದಿರುವುದು ಸಾಧ್ಯ.

### ೩. ಪ್ರಾಮಾಣಿಕತೆ. ಪು. ಸಂ. ೯—೧೪

ಪ್ರಾಮಾಣಿಕತೆ ಎಂದರೇನು ? ಲಕ್ಷಣಪರಿಷ್ಕಾರ.
ಮಾನಸಿಕ, ವಾಚಿಕ, ಕಾಯಿಕ.
ಸಮಗ್ರಪ್ರಾಮಾಣಿಕತೆ.
ವಾಚಿಕ ಪ್ರಾಮಾಣಿಕತೆ, ಅಪ್ರಾಮಾಣಿಕತೆ; ಕಾಯಿಕಪ್ರಾಮಾಣಿಕತೆ, ಅಪ್ರಾಮಾಣಿಕತೆ; ಲಕ್ಷಣೋದಾಹರಣೆಗಳು.
ಮಾನಸಿಕಪ್ರಾಮಾಣಿಕತೆ, ಅಪ್ರಾಮಾಣಿಕತೆ; ಲಕ್ಷಣೋದಾಹರಣೆ
ತ್ರಿಕರಣಶುದ್ಧಿ.
ಮಹಾಭಾರತ ಪ್ರಮಾಣಾನುವಾದ.
ಉಪಸಂಹಾರ.

### ೪. ದುಷ್ಕೃತ್ಯತ್ರಯ    ಪು. ಸಂ. ೧೪—೧೮.

ಪ್ರವೇಶ

ದುರಾಲೋಚನೆ—ಸ್ವರೂಪ, ನಿವಾರಣೋಪಾಯ.

ದುರ್ವಾಕ್ಯ—ಉತ್ಪತ್ತಿ, ಪರಿಣಾಮ, ನಿವಾರಣೆ.

ದುಷ್ಕೃತ್ಯ—ಉತ್ಪತ್ತಿ, ನಿವಾರಣೋಪಾಯ.

ದುಷ್ಕೃತ್ಯತ್ರಯಗಳನ್ನು ಆರಂಭದಲ್ಲಿಯೇ ನಾಶಿಸಬೇಕು.

ಅವುಗಳನ್ನು ನಿರ್ಮೂಲಗೊಳಿಸಲು ಆಗದಿದ್ದರೆ ಏನುಮಾಡಬೇಕು ?

### ೫. ಕಾಲದ ಬೆಲೆ.    ಪು.ಸಂ. ೧೯—೨೨

ಪ್ರವೇಶ.

ಕಾಲಸ್ವರೂಪ.

ವಿಷ್ಣುಶರ್ಮನ ಸೂಕ್ತಿ.

ಕಾಲವೇ ಮಹಾಧನ.

ಕಾಲವು ಸರ್ವರಿಗೂ ಸಾಮಾನ್ಯವಾದ ಸಂಪತ್ತು. ಕಳೆದುಕೊಂಡಮೇಲೆಯೇ ಕಳೆದುಹೋಯಿತೆಂದು ತಿಳಿದುಬರುವುದು. ಕಾಲವನ್ನು ವ್ಯರ್ಥವಾಗಿ ಕಳೆವುದು ಒಂದು ವಿಧವಾದ ಆತ್ಮಹತ್ಯೆ. ಕಾಲವನ್ನು ಸರಿಯಾಗಿ ಉಪಯೋಗಿಸಿದವನೇ ವಿವೇಕಿ, ಧನ್ಯ, ಸುಖಿ.

ಉಪಸಂಹಾರ.

### ೬. ಪುಸ್ತಕ.    ಪು. ಸಂ. ೨೩—೨೬

ಕವಿಲೇಖನಿಯ ಮಹಿಮೆ; ಅದು ಪ್ರಪಂಚಕ್ಕೆ ಮಾಡಿದ ಉಪಕಾರ: ಕಷ್ಟನಿವಾರಣೆ, ಹಿತೈಷಿಗಳಿಗೆ ಧೈರ್ಯ.

ಅಚ್ಚಿನ ಮಹಿಮೆ: ಗ್ರಂಥವನ್ನು ಶಾಶ್ವತವಾಗಿ ನಿಲ್ಲುವಂತೆಯೂ ಅನೇಕರಿಗೆ ಏಕಕಾಲದಲ್ಲಿ ಸುಲಭವಾಗಿ ಸಿಕ್ಕುವಂತೆಯೂ ಮಾಡಿತು.

ಪುಸ್ತಕವೆಂದರೇನು ? ಅದರ ಮಹಮೆ. ಅದರ ಸಹಾಯದಿಂದ ಎಲ್ಲಾ ಕಾಲದಲ್ಲಿಯೂ, ಎಲ್ಲಾ ಅವಸ್ಥೆಯಲ್ಲಿಯೂ ಎಲ್ಲಾ ಕಡೆಯಲ್ಲಿಯೂ ಇರಬಹುದು.

### ೭. ಸರಸ್ವತೀಭಂಡಾರ.    ಪು. ಸಂ. ೨೬—೩೧

ಜೀವಂತರಾಗಿದ್ದ ಕವಿಗಳಿಗೂ, ಅವರ ಅಪರಶರೀರವಾದ ಪುಸ್ತಕಗಳಿಗೂ ಇರುವ ಭೇದ.

ಪುಸ್ತಕರೂಪದಲ್ಲಿದ್ದಾಗ ಕವಿಗಳ ಸೌಲಭ್ಯ.
ಪುಸ್ತಕಗಳಿಗೂ ತಂದೆತಾಯಿಗಳಿಗೂ ಹೋಲಿಕೆ.
ಪುಸ್ತಕಗಳಿಗೂ ಉಪಾಧ್ಯಾಯರಿಗೂ ಹೋಲಿಕೆ.
ಪುಸ್ತಕಗಳಿಗೂ ಸ್ನೇಹಿತರಿಗೂ ಹೋಲಿಕೆ.
ಪುಸ್ತಕಭಂಡಾರದಲ್ಲಿ ಕುಳಿತುಕೊಂಡು ಗ್ರಂಥವ್ಯಾಸಂಗ ಮಾಡುವವನಿಗೆ ದೇಶಕಾಲಾವಸ್ಥೆಗಳಲ್ಲಿ ತಡೆಯೇ ಇಲ್ಲ. ಪುಸ್ತಕಗಳ ವರ್ಗ.
" ಪರೋಪಕಾರಾರ್ಥಮಿದಂಶರೀರಂ " ಎಂಬುದಕ್ಕೆ ಪುಸ್ತಕಗಳಲ್ಲಿಯೇ ಸಾರ್ಥಕತೆ.
ಕವಿಮಹಿಮಾ ಪ್ರಶಂಸೆ.

೮. ಪುಸ್ತಕಗಳ ಉಪಯೋಗಕ್ರಮ. ಪು. ಸಂ. ೩೦—೩೬

ಬುದ್ಧಿವಿಕಾಸಕ್ಕೆ ಸಾಧಕವಾದ ಪುಸ್ತಕಗಳನ್ನೇ ಓದಬೇಕು.
ಸಿಕ್ಕಿದ ಪುಸ್ತಕಗಳನ್ನು ಓದುವುದರಿಂದ ಪ್ರಯೋಜನ ಕಡಮೆ.
ಆವ ಪುಸ್ತಕಗಳನ್ನು ಓದಬೇಕು ; ಹೇಗೆ ಓದಬೇಕು ? ಒಳ್ಳೆಯ ಪುಸ್ತಕ, ಕೆಟ್ಟಪುಸ್ತಕ
ಒಂದೇ ಶಾಸ್ತ್ರದಲ್ಲಿ ಪಾಂಡಿತ್ಯ ಹೊಂದುವುದು ಸಾಲದೆ ? ಎಂಬ ಆಕ್ಷೇಪಣೆಗೆ ಸಮಾಧಾನ.
ಆವುದರಲ್ಲಿ ವಿಶೇಷಜ್ಞಾನ, ಆವುದರಲ್ಲಿ ಸಾಮಾನ್ಯಜ್ಞಾನ ಬೇಕು ?
ಪಠನದಲ್ಲಿ ಅನುಸರಿಸಬೇಕಾದ ನಿಯಮಗಳು,

೯. ಸಂಭಾಷಣೆಯ ದೋಷಗಳು. ಪು. ಸಂ. ೩೭—೪೩

ಪ್ರವೇಶ. ವಿಷಯವಿಭಾಗ.
ಕೆಲವು ಹಿತೋಕ್ತಿಗಳು.
ಸಂಭಾಷಣೆಯ ವಿಷಯದಲ್ಲಿ ಒಬ್ಬ ಸಂಸ್ಕೃತಕವಿಯ ಹಿತೋಕ್ತಿ.
ಗಾದೆಗಳು.

೧೦. ಗ್ರಂಥವ್ಯಾಸಂಗಕ್ರಮ. ಪು. ಸಂ ೪೩—೪೯.

ಗ್ರಂಥವ್ಯಾಸಂಗದಲ್ಲಿ ಬೇಕಾದ ನಿಯಮಗಳ ವಿವರಣೆ. ಆ ನಿಯಮಗಳ ಸಾರಾಂಶ.
ಗ್ರಂಥ ವಿಭಾಗ—ವರ್ಣನಾಪ್ರಧಾನ, ಕಥಾಪ್ರಧಾನ, ಉಪದೇಶ ಪ್ರಧಾನ, ವಿಚಾರಪ್ರಧಾನ.
ವರ್ಣನಾಪ್ರಧಾನವಾದ ಕಾದಂಬರ್ಯಾದಿಗ್ರಂಥಗಳ ವ್ಯಾಸಂಗಕ್ರಮ.

ಕಥಾಪ್ರಧಾನ ಗ್ರಂಥ ಪಠನಕ್ರಮ.
ಉಪದೇಶಪ್ರಧಾನ ಗ್ರಂಥಪಠನ ಕ್ರಮ.
ವಿಚಾರಪ್ರಧಾನ ಗ್ರಂಥಪಠನ ಕ್ರಮ.
ಗ್ರಂಥಸ್ಥವಿಷಯಗಳ ದೃಢೀಕರಣೋಪಾಯಗಳು.

**೧೧. ಜ್ಞಾನಸಂಪಾದನಕ್ರಮ. ಪು. ಸಂ. ೪೯—೫೩**

ಮನುಷ್ಯತ್ವಕ್ಕೆ ಜ್ಞಾನವಿಕಾಸಾವಶ್ಯಕತೆ.
ಜ್ಞಾನವಿಕಾಸಕ್ಕಿರುವ ಮಾರ್ಗಗಳು :— ಹಿರಿಯರ ಉಪದೇಶ, ಪುಸ್ತಕ ಸ್ವಾನುಭವ; ಇವೆರಡಕ್ಕೂ ಸ್ವಾನುಭವಕ್ಕೂ ಇರುವ ವ್ಯತ್ಯಾಸ.
ಸ್ವಾನುಭವವೆಂಬುದೇ ಲೋಕಪರಿಚಯ.
ಸ್ವವಿಷಯಜ್ಞಾನ.
ಪರವಿಷಯಜ್ಞಾನ.
ಲೋಕಜ್ಞಾನ.
ಭೌತಿಕಾದಿ ಶಾಸ್ತ್ರಜ್ಞಾನ.
ಕಲಾಮುಹೂರ್ತಾದಿಗಳ ಸ್ವರೂಪಜ್ಞಾನ.
ಈಶ್ವರವಿಷಯಜ್ಞಾನ.

**೧೨. ಕಾಲವಿನಿಯೋಗ. ಪು. ಸಂ. ೫೩—೬೦**

ಪ್ರವೇಶ.
ಅವಸ್ಥಾಭೇದ: ಬಾಲ್ಯ, ಯೌವನ, ವೃದ್ಧಾಪ್ಯ.
ಬಾಲ್ಯವನ್ನು ವ್ಯರ್ಥವಾಗಿ ಕಳೆವುದರ ಪರಿಣಾಮ.
ಬಾಲ್ಯವೇ ಸಕಲಕ್ಕೂ ಬೀಜಾವಾಪಕಾಲ.
ಯೌವನ ವೃದ್ಧಾಪ್ಯಗಳ ವಿನಿಯೋಗ.
ಆಕ್ಷೇಪ ಸಮಾಧಾನ.
ಕಾಲವಿನಿಯೋಗದಲ್ಲಿ ಪ್ರವೃತ್ತವಾದ ಸೂತ್ರ—
"ಶತಾಯುರ್ವೈ ಪುರುಷಃ" ಇತ್ಯಾದಿ.
ಸೂತ್ರಟೀಕೆ.
ವ್ಯಾಖ್ಯಾನ.
ತಾತ್ಪರ್ಯ.
ಉಪಸಂಹಾರ.

## ೧೩. ಮೈತ್ರಿ. ಪು. ಸಂ. ಒ೩—೬V

ಪ್ರವೇಶ. "ಕೇನಾಮೃತಮಿದಂ ಸೃಷ್ಟಂ"
ವಿಷಯವಿಭಾಗ.
ಮೈತ್ರಿಯ ಲಕ್ಷಣ, ಲಕ್ಷಣವಿವರಣ.
ಮೈತ್ರಿಯ ಫಲ :—
"ಕರಾವಿವಶರೀರಸ್ಯ"—ಈ ಶ್ಲೋಕದ ವ್ಯಾಖ್ಯಾನ.
"ಪಾಪಾನ್ನಿವಾರಯತಿ"—ವ್ಯಾಖ್ಯಾನ.
"ಮೈತ್ರಿಯು ಸಂತೋಷವನ್ನು ಹೆಚ್ಚಿಸಿ, ದುಃಖವನ್ನು ತಗ್ಗಿಸಿ, ಮನುಷ್ಯನನ್ನು ಧರಿಸುತ್ತದೆ."—ತಾತ್ಪರ್ಯ.
ಒಬ್ಬ ಕವಿಯ ಅಭಿಪ್ರಾಯಾನುವಾದ.
"ಮಿತ್ರನೇ ಕೋಟಿಮೂ ನಿಧಿಯೂ" "ಸನ್ಮಿತ್ರಂಜೀವನಾಷಧಂ"
ಕೃತ್ರಿಮ ಮಿತ್ರರ ಸ್ವರೂಪ.
ಅಂಥವರನ್ನು ಕಂಡುಹಿಡಿಯುವ ಉಪಾಯ.
ಭರ್ತೃಹರಿಯು ಹೇಳುವ ದೃಷ್ಟಾಂತ.
ಮೈತ್ರಿಗೆ ಅವಶ್ಯಕವಾಗಿರುವ ಗುಣಗಳು
ಮಹಾಭಾರತ ಪ್ರಮಾಣಾನುವಾದ.
ಸೋಮದೇವನ ಹೇಳಿಕೆಯ ಪ್ರಕಾರ ಸನ್ಮಿತ್ರರಲ್ಲಿರಬೇಕಾದ ಗುಣಗಳು, ಮಿತ್ರರಲ್ಲಿ ಉಂಟಾಗುವ ದೋಷಗಳು, ಇದ್ದ ಮೈತ್ರಿಯು ಕೆಡುವುದಕ್ಕೆ ಕಾರಣಗಳು.
ಕ್ಷೀರನೀರ ದೃಷ್ಟಾಂತ.
ಮನುಷ್ಯರಲ್ಲಿ ಕೃತಘ್ನತಾಪಾದನೆಗೆ ಹಿತೈಷಿಗಳ ತಾತ್ಪರ್ಯ.
ಉತ್ತಮ ಮೈತ್ರಿಗೆ ನಿದರ್ಶನಗಳು.

## ೧೪. ತುಷ್ಟಿ. ಪು ಸಂ. ೬F—V೩

ಪ್ರವೇಶ.
ಅದರ ಲಕ್ಷಣ.
ಪರಾಶರ ಮಹರ್ಷಿಗಳ ಉಕ್ತಿ, ಅದರ ವ್ಯಾಖ್ಯಾನ.
ಆಶೆಯ ಸ್ವರೂಪ; ಅದರ ನಿರೋಧವೇ ತುಷ್ಟಿಕಾರಣ.
ತುಷ್ಟಿಯನ್ನು ಸಂಪಾದಿಸುವ ಕ್ರಮ.
ಅದಕ್ಕೆ ಸುಲಭವಿವರಣ :—
"ಅಧೋಽಧಃ ಪಶ್ಯತಃಕಸ್ಯ" ವ್ಯಾಖ್ಯಾನ.
ಆಕ್ಷೇಪ ಸಮಾಧಾನ.

## ೧೫. ಧರ್ಮಸರ್ವಸ್ವ. ಪು. ಸಂ. ೮೩—೯೫

ಧರ್ಮಶಬ್ದದ ಅರ್ಥನಿರ್ಣಯ. ಧರ್ಮಸರ್ವಸ್ವವೆಂದರೇನು ?
ವೈಲಕ್ಷಣ್ಯತ್ರಯ.
ನಮ್ಮ ವಿಚಾರಕ್ಕೆ ಸಾಧ್ಯವಾದ ವಿಷಯವಲ್ಲ.
ವ್ಯಾಸಮಹರ್ಷಿಮತಾನುವಾದ :— ' ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ '' ಎಂಬುದೇ ಧರ್ಮಸರ್ವಸ್ವ.
ಅದರ ವ್ಯಾಖ್ಯಾನ.
ಸಮಸ್ತ ಸನಾತನಧರ್ಮಗಳೂ ಇದರಲ್ಲೇ ಚರಿತಾರ್ಥ.

## ೧೬. ಸುಖಸಾಧನ. ಪು. ಸಂ. ೯೬—೧೧೦

ಪ್ರವೇಶ.
ಆರೋಗ್ಯ.
ಐಶ್ವರ್ಯ.
ಜ್ಞಾನವ್ಯವಸಾಯ.
ಕಲಾವ್ಯವಸಾಯ
ಪುಸ್ತಕಭಂಡಾರ.
ಸಂಸಾರ.
ಎಲ್ಲರಿಗೂ ಬೇಕಾದವನಾಗಿ, ಎಲ್ಲರ ಆದರಕ್ಕೂ ಪಾತ್ರನಾಗಿರುವಿಕೆ.
ಸನ್ಮಿತ್ರ.
ತುಷ್ಟಿ.
ಕಾಲಯಾಪನ.
ಧರ್ಮಾನುಷ್ಠಾನ.
ಈಶ್ವರಭಕ್ತಿ.

# ಪ್ರಬಂಧಾವಳಿ.

## ೧. "ಪ್ರಬಂಧರಚನೆ."

ಹುಡುಗರಾ! ನಿಮಗೆ ಒಂದು ಒಳ್ಳೆಯ ಪ್ರಬಂಧವನ್ನು ಬರೆಯಬೇಕೆಂಬ ಆಶೆ ಹುಟ್ಟಿತೆಂದು ಇಟ್ಟುಕೊಳ್ಳಿ. ಆಗ, ನಿಮಗೆ—ನಾವು ಏನುಮಾಡಬೇಕು? ಎಂಬ ಆಲೋಚನೆಯು ಹುಟ್ಟುವುದು ಸಹಜ. ಮೊದಲು ನೀವು ವಿಶೇಷವಾಗಿ ಗ್ರಂಥಗಳನ್ನು ಓದಿರಬೇಕು. ಗ್ರಂಥಾವಲೋಕನದಿಂದ ವಿಷಯಜ್ಞಾನವುಂಟಾಗುವುದು; ವಿಷಯಜ್ಞಾನವಿಲ್ಲದಿದ್ದರೆ ಏತಕ್ಕೂ ಪ್ರಯೋಜನವಿಲ್ಲದಂತೆ ಆಗುವಿರಿ. ಬಳಿಕ ನೀವು ಓದಿದುವುಗಳನ್ನು ಬಿಡದೆ ಮನನ ಮಾಡಬೇಕು. ಮನನ ಮಾಡುವುದರಿಂದ ವಿಷಯಕ್ಕೆ ಪರಿಚ್ಛೇದವು—ಎಂದರೆ, ಈ ವಿಷಯವು ಇಷ್ಟೇ ಸರಿ, ಇದು ಹೀಗೆಯೇ ಸರಿ ಎಂಬ ನಿಷ್ಕರ್ಷೆಯು ಉಂಟಾಗುವುದು. ವಿಷಯಕ್ಕೆ ಪರಿಚ್ಛೇದವಿಲ್ಲದಿದ್ದರೆ ಮನಸ್ಸಿನಲ್ಲಿ ನೀವು ತಿಳಿದುಕೊಂಡುದು ಒಂದೂ ಸ್ಥಿರವಾಗಿ ನಿಲ್ಲುವುದಿಲ್ಲ. ಹೆಚ್ಚಾಗಿ ಓದದೆಯೂ, ಓದಿದುವುಗಳನ್ನು ಮನನ ಮಾಡದೆಯೂ ಇರುವವನು ಉಳದೆಯೂ, ಬಿತ್ತ ಹಾಕದೆಯೂ ಇರುವ ಗದ್ದೆಯು ಹೇಗೆ ಪೈರು ಕೊಡಲಾರದೋ, ಹಾಗೆಯೇ ಪ್ರಬಂಧವನ್ನು ಬರೆಯಲಾರನು. ಓದಿದ ಪುಸ್ತಕಗಳಿಂದಲೇ ಆಗಲಿ, ಇತರ ವಿಧದಿಂದಲೇ ಆಗಲಿ, ತಿಳಿದುಕೊಂಡ ವಿಷಯಗಳನ್ನು ವಿಂಗಡಿಸುವುದರ ಮೂಲಕ ನಿಮ್ಮ ಮನಸ್ಸನ್ನು ಒಳ್ಳೊಳ್ಳೆಯ ಅಭಿಪ್ರಾಯಗಳಿಂದ ತುಂಬುತ್ತಿರಬೇಕು. ಹೀಗೆ ತುಂಬುತ್ತಿರುವುದಾದರೆ ಅನೇಕ ವಿಷಯಗಳಲ್ಲಿ ಸಮಂಜಸವಾಗಿ ನಾಲ್ಕಾರು ಮಾತುಹೇಳುವುದಕ್ಕೆ ಬಾಯಿ ಬರುವುದು. ಅಭಿಪ್ರಾಯಗಳಿಂದ ಮನಸ್ಸನ್ನು ತುಂಬಿಡುವುದು

ಸ್ವಲ್ಪ ಕಾಲದಲ್ಲಿ ಆಗುವ ಕೆಲಸವಲ್ಲ ; ಚಿರಕಾಲಸಾಧ್ಯ. ಈ ಸಂದರ್ಭದಲ್ಲಿ ಒಬ್ಬ ಶಾಸ್ತ್ರಕಾರನ ಮಾತು ಜ್ಞಾಪಕಕ್ಕೆ ಬರುವುದು. ಅದೇನೆಂದರೆ— ಮನುಷ್ಯನಿಗೆ ಪಠನದಿಂದ ಜ್ಞಾನಾಭಿವೃದ್ಧಿಯೂ, ಸಂಭಾಷಣೆಯಿಂದ ವಿಷಯಸಿದ್ಧಿಯೂ, ಲೇಖನದಿಂದ ವಿಷಯಪರಿಚ್ಛೇದವೂ ಉಂಟಾಗುವುವು.

ಈಗ ಒಂದು ಪ್ರಬಂಧವನ್ನು ರಚಿಸಬೇಕಾಗಿದೆ ಎಂದು ಇಟ್ಟುಕೊಳ್ಳಿರಿ. ಈವಾಗ ಏನು ಮಾಡುತ್ತೀರಿ ? ಏನು ಬರೆಯಬೇಕು, ಹೇಗೆ ಬರೆಯಬೇಕು, ಎಂದು ಆಲೋಚಿಸುತ್ತಾ ಕಾಲವನ್ನು ಸುಮ್ಮನೆ ಕಳೆಯುತ್ತೀರಿ. ಹಾಗೆ ಮಾಡಬೇಡಿ. ಒಡನೆಯೇ ಬರೆವುದಕ್ಕೆ ಆರಂಭಮಾಡಿಬಿಡಿ. ಇದೇನು ! ಹೀಗೆ ಹೇಳುತ್ತೀರಿ, ಆಲೋಚಿಸದೆ ಬರೆದರೆ ಹುಚ್ಚಾಬಟ್ಟೆಯಾಗುವುದಿಲ್ಲವೆ, ಎಂದು ನೀವು ಕೇಳಬಹುದು. ಎಂದಿಗೂ ಹಾಗೆ ಆಗುವುದಿಲ್ಲ. ಅದಕ್ಕೆ ಕಾರಣವನ್ನು ಹೇಳುವುದೂ ಕಷ್ಟ, ಹೇಳತಕ್ಕ ಆವಶ್ಯಕವೂ ಇಲ್ಲ. ಬರೆವುದಕ್ಕೆ ಕುಳಿತರೆ, ಮನಸ್ಸು ತಾನೇ ದಾರಿಯನ್ನು ಕೊಡುವುದು. ಲೇಖನಿಯು ಕಾಗದದ ಮೇಲೆ ಆಡತೊಡಗಿದರೆ, ನಿಮ್ಮಲ್ಲಿರುವ ಅಭಿಪ್ರಾಯಗಳು ತಮಗೆತಾವೇ ಒಂದೊಂದಾಗಿ ಹೊರಕ್ಕೆ ಬರುವುವು. ನಿಮಗೆ ತೋರಿದ ಅಭಿಪ್ರಾಯಗಳನ್ನೆಲ್ಲಾ ಬರೆದಾದಮೇಲೆ, ಅಲ್ಲಿಗೆ ಪ್ರಬಂಧರಚನೆಯ ಕೆಲಸವು ಮುಗಿಯಿತೆಂದು ತಿಳಿಯಬೇಡಿ ; ನೀವು ಮಾಡತಕ್ಕ ಕೆಲಸಗಳು ಇನ್ನೂ ಅನೇಕ ಉಳಿದಿರುವುವು :—ಮೊದಲನೆಯದು, ನೀವು ಬರೆದ ಪ್ರಬಂಧವನ್ನು ಬಹುಜಾಗರೂಕತೆಯಿಂದ ಎರಡಾವೃತ್ತಿ ಇಲ್ಲವೆ ಮೂರಾವೃತ್ತಿ ಓದಿನೋಡಬೇಕು, ಹಾಗೆ ನೋಡುವುದರಿಂದ ತಿದ್ದುಪಾಟು ಮಾಡಬಹುದಾದ ಅನೇಕ ವಿಷಯಗಳು ಕಣ್ಣಿಗೆ ಬೀಳುವುವು. ಮತ್ತು ಹೇಳಿದ ಸಂಗತಿಗಳನ್ನು ಇನ್ನೂ ಸೊಗಸಾಗಿಯೂ, ಸ್ಪಷ್ಟವಾಗಿಯೂ ಹೇಳಬಹುದೆಂಬ ಆಶೆಯು ಹುಟ್ಟುವುದು ; ಅಲ್ಲದೆ ಹಾಗೆ ಮಾಡುವುದರಲ್ಲಿ

ನಿಮಗೆ ಶಕ್ತಿಯು ಉಂಟೆಂದೂ ತಿಳಿಯಬರುವುದು. ಇಲ್ಲವೂ ಅದೆ, ಆ ಸಂದರ್ಭದಲ್ಲಿ ಇನ್ನೇನಾದರೂ ಆಶಯಗಳು ಅಲ್ಪಸ್ವಲ್ಪ ಉಳಿದಿದ್ದರೆ ಅವೂ ಕೂಡ ಹೊರಪಡುವುವು. ನಿಮ್ಮ ಅಭಿಪ್ರಾಯಗಳನ್ನು ಕ್ರಮಪಡಿಸುವುದು ಮುಂದಣ ಕೆಲಸವಾಗಿರುವುದು. ನಿಮ್ಮ ಅಭಿಪ್ರಾಯಗಳು ಸರಪಣಿಗಳಲ್ಲಿ ಬಳೆಗಳು ಒಂದಕ್ಕೊಂದು ಎಡೆಬಿಡದೆ ಸೇರಿಕೊಂಡಿರುವಂತೆ ಹೊಂದಿಕೊಂಡಿರಬೇಕು. ಇದಾದಮೇಲೆ, ನೀವು ಪ್ರಯೋಗಿಸಿದ ಪದಗಳು ಶುದ್ಧವೋ, ಉಚಿತವೋ; ವಾಕ್ಯರಚನೆಯು ನಿಮ್ಮ ಅಭಿಪ್ರಾಯಕ್ಕೆ ತಕ್ಕುದೋ ಅಲ್ಲವೋ ಎಂಬುದನ್ನು ವಿಚಾರ ಮಾಡಬೇಕು. ಬರೆವಾಗ ಅನೇಕ ತಪ್ಪುಗಳು ಬೀಳುವುದು ಸಹಜ. ಕೆಲವುವೇಳೆ ಮನಸ್ಸಿನಲ್ಲಿ ಇರುವುದೇ ಒಂದು, ಬರೆವುದೇ ಒಂದು ಆಗುವುದು. ಇಂಥವುಗಳು ಅಲ್ಪಸ್ಖಾಲಿತ್ಯಗಳೆಂದೆನಿಸಿಕೊಂಡರೂ, ನಿಮ್ಮ ಅಜಾಗರೂಕತೆಗೆ ಕನ್ನಡಿಯಾಗಿರುವುವು. ಬರೆವಣಿಗೆಯಲ್ಲಿ ಹೇಳಿದುದನ್ನೇ ಹೇಳುವುದು ಜನಗಳಲ್ಲಿ ವಾಡಿಕೆಯಾದ ಮತ್ತೊಂದು ತಪ್ಪು. ಅಂಥವುಗಳು ಬಾರದಂತೆ ನೋಡಿಕೊಳ್ಳಬೇಕು. ಹೀಗೆ ಮಾಡುತ್ತಾ ಬಂದರೆ, ಪ್ರಬಂಧವು ಚಿಕ್ಕದಾಗಿ ಹೋಗುವುದು, ಸೊಗಸಾಗಲಾರದು ಎಂದು ಹೆದರಬೇಡಿ. ಪ್ರಬಂಧವು ಮನೋಹರವಾಗಿರಬೇಕಾದರೆ, ಯಾವ ವಿಧವಾದ ತಪ್ಪೂ ಇಲ್ಲದೆ, ಮನೋಹರವಾದ ಅಭಿಪ್ರಾಯಗಳನ್ನು ಯಥಾಕ್ರಮವಾಗಿ ಒಳಕೊಂಡು, ಓದಿದ ಕೂಡಲೆ ಅರ್ಥವು ಸ್ಪಷ್ಟವಾಗುವ ವಾಕ್ಯಸರಣಿಯಲ್ಲಿ ಬರೆದುದಾಗಿರಬೇಕು. ಹೀಗಿದ್ದರೇ ಅದು ಒಳ್ಳೆಯ ಪ್ರಬಂಧವೆನಿಸಿಕೊಳ್ಳುವುದು. ಮುಖ್ಯವಾಗಿ ಪ್ರಬಂಧವನ್ನು ಬರೆವಾಗ ಜ್ಞಾಪಕದಲ್ಲಿಡಬೇಕಾದ ಮತ್ತೊಂದಂಶ ಉಂಟು. ಕೆಲವರಿಗೆ ಕೆಲವು ಅಭಿಪ್ರಾಯಗಳಲ್ಲಿ ಬಹಳ ಇಷ್ಟ. ಅಂಥವುಗಳಿದ್ದರೇ ಸೊಗಸೆಂದು ಭಾವಿಸಿ ಅವುಗಳಿಗೆ ಅವಕಾಶವನ್ನು ಹೇಗಾದರೂ ಕಲ್ಪಿಸಿ ಸೇರಿಸುವರು. ಪ್ರಕೃತ ಪ್ರಬಂಧಕ್ಕೆ ಸ್ವಲ್ಪವೂ ಸಂಬಂಧ

ಪಡದಿದ್ದರೆ ಅಂಥವುಗಳನ್ನು ಎಂದಿಗೂ ಸೇರಿಸಬಾರದು. ಅಸಂಬದ್ಧಪ್ರಲಾಪಕ್ಕಿಂತ ದೊಡ್ಡತಪ್ಪು ಆವುದೂ ಇಲ್ಲ.

ಪ್ರಬಂಧದಲ್ಲಿ ಪ್ರಕರಣಗಳಿರಬೇಕು. ಇಂಥ ಪ್ರಬಂಧಕ್ಕೆ ಇಷ್ಟೇ ಪ್ರಕರಣಗಳೆಂದು ಹೇಳುವುದು ಅಸಾಧ್ಯ. ಅವುಗಳು ವಿಷಯಗೌರವದ ಮೇಲೆ ಉಂಟಾಗುವುವು. ಅವುಗಳಲ್ಲಿ ಒಂದು ಕ್ರಮವಿರಬೇಕು. ಆ ಕ್ರಮವು ಅಭಿಪ್ರಾಯಕ್ಕೆ ಅನುಸಾರವಾಗಿರಬೇಕು. ಈ ಪ್ರಬಂಧದಲ್ಲಿ ಮಾಡಿರುವ ಪ್ರಕರಣವಿಭಾಗಗಳನ್ನು ನೋಡಿರಿ. ಪ್ರಬಂಧರಚನೆಯನ್ನು ಮಾಡಲು ಆಶೆಯುಳ್ಳ ಹುಡುಗನು ಮೊದಲು ಮಾಡತಕ್ಕ ಕಾರ್ಯಗಳು ಮೊದಲನೆಯ ಪ್ರಕರಣದಲ್ಲಿಯೂ ; ಹೇಗೆ ಅದನ್ನು ಬರೆಯಬೇಕು ಎಂಬುದು ಎರಡನೆಯ ಪ್ರಕರಣದಲ್ಲಿಯೂ ; ಪ್ರಕರಣಗಳ ವಿಭಾಗಕ್ರಮವು ಮೂರನೆಯ ಪ್ರಕರಣದಲ್ಲಿಯೂ ; ಉಪಸಂಹಾರವು ಕೊನೆಯದರಲ್ಲಿಯೂ ಹೇಳಿವೆ.

ಪ್ರಬಂಧರಚನೆಯಿಂದ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದೇ ಮುಖ್ಯ ಪ್ರಯೋಜನವಲ್ಲ; ಇದರಿಂದ, ಓದಿ ತಿಳಿದುಕೊಂಡ ವಿಷಯಕ್ಕೆ ಶಾಸ್ತ್ರಜ್ಞರು ಹೇಳುವಂತೆ ಪರಿಚ್ಛೇದವುಂಟಾಗುವುದು. ಹೀಗೆ ಉಂಟಾಗುವ ಜ್ಞಾನವನ್ನೇ ನಮ್ಮ ಹಿರಿಯರು "ಪರಿಚ್ಛೇದೋ ಹಿ ಪಾಂಡಿತ್ಯಂ" ಎಂಬಂತೆ ಪಾಂಡಿತ್ಯವೆಂದು ಕರೆವರು. ಪಂಡಿತನೆನಿಸಿಕೊಳ್ಳಬೇಕಾದರೆ, ಓದಿದ ವಿಷಯಗಳನ್ನು ಮನನಮಾಡಿ ತಿಳಿದುಕೊಂಡು, ತಿಳಿದುಕೊಂಡ ವಿಷಯಗಳನ್ನು ಸುಲಭವಾಗಿ ಬೋಧೆಗೆ ಬರುವ ರೀತಿಯಲ್ಲಿ ಬರೆಯಲೂ, ಹೇಳಲೂ ಸಮರ್ಥನಾಗಬೇಕು.

## ೨. "ಸಾಲ ಅಥವಾ ಕಡ."

ನಮ್ಮಲ್ಲಿ ಕಡ ಮಾಡುವ ಪದ್ಧತಿಯು ನೀರು ಕುಡಿವಹಾಗೆ ಸಾಧಾರಣವಾಗಿದೆ. ಒಂದು ವಸ್ತುವನ್ನು ಅಡವಿಟ್ಟು ಮತ್ತೊಂದನ್ನು ಅನುಭವಕ್ಕೆ ತೆಗೆದುಕೊಳ್ಳುವುದೇ * ಕಡ ಅಥವಾ ಸಾಲ ಎಂಬುದು. ಕೆಲವರು ತೋಟ, ಗದ್ದೆ, ಮನೆ ಮೊದಲಾದ ಸ್ಥಿರಸ್ವತ್ತುಗಳನ್ನೂ, ಕೆಲವರು ಒಡವೆ ಬಟ್ಟೆ ಮುಂತಾದ ಚರಸ್ವತ್ತುಗಳನ್ನೂ, ಕೆಲವರು ತಮ್ಮಲ್ಲಿರುವ ನಂಬಿಕೆಯನ್ನೂ ಒತ್ತೆಯಿಟ್ಟು, ಪ್ರತಿಯಾಗಿ ಹಣವನ್ನು ಸಾಲವಾಗಿ ತೆಗೆದುಕೊಳ್ಳುವರು.

ಆವಶ್ಯಕ ಬಿದ್ದಾಗ ತಮ್ಮ ಯೋಗ್ಯತೆಗೆ ಮೀರದಂತೆ ಕಡ ತೆಗೆದುಕೊಂಡು ಸದ್ವಿನಿಯೋಗದಿಂದ ಕಡ ಕೊಟ್ಟವನಿಗೂ ತಮಗೂ ಲಾಭವಾಗುವಂತೆ ಉಪಯೋಗಿಸಿಕೊಳ್ಳುವುದೇನೋ ಉಚಿತ. ಆದರೆ ಬುದ್ಧಿಯಿಲ್ಲದ ಕೆಲವರು ಮುಂದೆ ಬರಬಹುದಾದ ಅನರ್ಥಗಳನ್ನು ಆಲೋಚನೆ ಮಾಡದೆ ಕಡ ಮಾಡುವರು. ಇದೊಂದು ದೊಡ್ಡ ತಪ್ಪು. ಆಲೋಚಿಸದೆ ಇರುವುದೇ ಕಡಮಾಡುವುದಕ್ಕೆ ಒಂದು ಮುಖ್ಯವಾದ ಕಾರಣ. ಮದುವೆ ಮುಂತಾದ ಸಂತೋಷ ಕಾಲಗಳಲ್ಲಿ ತಮ್ಮ ಯೋಗ್ಯತೆಗೆ ಮೀರಿದಷ್ಟು ಕಡಮಾಡಿ ವೆಚ್ಚಮಾಡುವುದುಂಟು ; ಕೇಳದಾಗ, "ತಮಗೇನು ! ಹೇಗಾದರೂ ತೀರಿಸಬಲ್ಲೆವು" ಎಂದು ದೋರಣೆಯಿಂದ ಪ್ರತಿ ಹೇಳುವರು. ಅವರು ಗಡುವಿನೊಳಗೆ ತಮ್ಮ ಕೈಲಿ ಅಷ್ಟು ಹಣ ಒದಗಿಸುವುದಕ್ಕಾದೀತೇ, ಎಂದು ನಿದಾನವಾಗಿ ಆಲೋಚಿಸಿದಲ್ಲಿ, ಅಷ್ಟು ಕಡ ತೆಗೆವುದಕ್ಕೆ ಹಿಂಜರಿಯದೆ ಇರಲಾರರೆಂದು ತೋರುತ್ತದೆ. ಕೆಲವುವೇಳೆ ಒಬ್ಬನಲ್ಲಿ ಮಾಡಿದ ಕಡ

* ಪ್ರಾಯಶಃ ನಮ್ಮಲ್ಲಿ ಹಣವನ್ನೇ ಸಾಲವಾಗಿ ತೆಗೆದುಕೊಳ್ಳುವುದು ಹೆಚ್ಚು, ಇತರ ಪದಾರ್ಥಗಳನ್ನು ತೆಗೆದುಕೊಳ್ಳುವುದೂ ಉಂಟು.

ವನ್ನು ತೀರಿಸುವುದಕ್ಕೆ ಮತ್ತೊಬ್ಬನ ಹತ್ತಿರ ಕಡಕ್ಕೆ ಹೋಗುವರು. ಇದ ರಿಂದ ಕಡವೂ ಹೆಚ್ಚಾಗಿ ಕಷ್ಟವೂ ಮತ್ತಷ್ಟು ಹೆಚ್ಚುವುದು.

ಶರೀರವನ್ನು ಬಿಸಿಲಲ್ಲಿ ಬಾಡಿಸಿ, ನೀರಲ್ಲಿ ನನೆಯಿಸಿ, ಹಗಲೂ ಇರುಳೂ ಶ್ರಮಪಟ್ಟು ವ್ಯವಸಾಯ ಮಾಡಿ ಬೆಳೆದ ದವಸಗಳನ್ನೂ ಕೂಡ ರೈತರು ಹಿಂದೆ ಮಾಡಿದ ಸಾಲಕ್ಕಾಗಿ ಕಳೆದುಕೊಳ್ಳುವುದು ಏನೂ ಅಪರೂಪವಲ್ಲ. ತಾವುತಾವು ಶ್ರಮಪಟ್ಟ ವಿಷಯಗಳಲ್ಲಿ ತನುತಮಗೆ ಅಭಿಮಾನವು ಹೆಚ್ಚಾಗಿರುವುದೇನೋ ಸಹಜ. ಆದರೂ ರೈತರು ತಮ್ಮ ಸರ್ವಸ್ವವನ್ನೂ ಅಡವಿಟ್ಟು, ತಾವು ಬಿತ್ತುವ ಬೀಜಕ್ಕೂ, ತಾವು ಉಡುವ ಬಟ್ಟೆಗೂ, ತಾವು ತಿನ್ನುವ ಅನ್ನಕ್ಕೂ ಕೂಡ ಕಡ ಕೊಡುವವರನ್ನೇ ನೋಡುತ್ತಿರ ಬೇಕು! ಅವರು ದಾರಿದ್ರ್ಯವೆಂಬ ಬಾವಿಯಲ್ಲಿ ಮುಳುಗುತ್ತಾ, ಕಡವೆಂಬ ಹಗ್ಗ ವನ್ನು ಬಿಟ್ಟು ಮೇಲಕ್ಕೆ ಎತ್ತಿ—ತಮ್ಮನ್ನು ಬದುಕಿಸುವ ಧರ್ಮಾತ್ಮರೂ ಉಂಟೇ! ಎಂದು ಕೈಯೆತ್ತಿ ಕೂಗುತ್ತಿದ್ದು, ಕಡ ಕೊಟ್ಟವರನ್ನು ತಮ್ಮ ನ್ನು ಕಾಪಾಡುವುದಕ್ಕೆ ಬಂಧುವರೆಂದೇ ಭಾವಿಸುವರು. ನಿಜವಾಗಿಯೂ ಅವರು ಮತ್ತಷ್ಟು ಭಾರವನ್ನು ಹೊರಿಸಿ ಇನ್ನೂ ಕೆಳಕ್ಕೆ ನೂಕುವುದಕ್ಕೆ ಬಂಧಂಥವರೇ ಆಗುವರು. ಸುಗ್ಗಿಯ ಕಾಲವು ಬಂದಾಗ, ತಮ್ಮ ಶ್ರಮವೇ ಆಕೃತಿಗೊಂಡಂತೆ ನಿಂತಿರುವ ಬೆಳೆಯೆಲ್ಲವೂ ಅವರ ಪಾಲಾಗುವುದನ್ನು ಅಳು ತ್ತಾ ನೋಡುವರು. ರೈತರು ಮಾತ್ರವೇ ಅಲ್ಲ, ಶ್ಯಾನುಭೋಗ, ಕರಣೀಕ, ಗುಮಾಸ್ತೆ ಮೊದಲಾಗಿ ಜೀವನಕ್ಕಾಗಿ ಬಹಳ ಶ್ರಮಪಡುವ ಚಿಕ್ಕ ಚಿಕ್ಕ ನೌಕರರೂ ಕೂಡ ಹೀಗೆ ಕಡಮಾಡುವುದುಂಟು. ತಮ್ಮತಮ್ಮ ಸಂಬಳ ಗಳಲ್ಲಿ ಕೇಲುವೇಳೆ ಅರ್ಧಭಾಗದಷ್ಟು ಕೂಡ ಕಡ ಕೊಟ್ಟವರಿಗೆ ಕೊಡ ಬೇಕಾಗಿ ಬಂದು ಅರೆ ಹೊಟ್ಟೆಗೇ ಊಟಮಾಡುತ್ತಿರುವರು. ಹೀಗೆಯೇ ಮನೆವಾರ್ತೆಯ ಕೆಲಸದಲ್ಲಿ ಸೇರಿರುವ ಊಳಿಗದವರೂ ಕೂಡ ಹೆಚ್ಚು ಹೆಚ್ಚಾದ ಬಡ್ಡಿಯನ್ನು ತೆತ್ತು ಕಡಮಾಡುವುದನ್ನು ನೋಡುತ್ತೇವೆ.

ಅವಿವೇಕವಾದ ಸಾಲದಿಂದ ದುಃಖವಲ್ಲದೆ ಸುಖವೆಂಬುದೂ ಇರುವುದಿಲ್ಲ. ಸಾಮಾನುಗಳನ್ನು ಮುಂಗಡವಾಗಿ ತೆಗೆದುಕೊಂಡರೆ ಯಾವಾಗಲೂ ಹೆಚ್ಚು ಕ್ರಯ ಕೊಡಬೇಕಾಗುತ್ತದೆ. ಪ್ರಾಯಶಃ ಒಳ್ಳೆಯ ಸಾಮಾನುಗಳನ್ನು ಕಡ ಕೊಡುವುದೇ ಇಲ್ಲ; ಅಂಥವುಗಳನ್ನೇ ಕೆಲವುವೇಳೆ ತೆಗೆದುಕೊಂಡು ಬರಬೇಕಾಗುತ್ತದೆ. ಇದೂ ಅಲ್ಲದೆ ಸಾಲ ಕೊಟ್ಟವನ ಎದುರಿಗೆ ಹೋಗುವುದಕ್ಕೆ ಅಂಜಿ, ಅವನು ಎಲ್ಲಿ ಕಾಣುವನೋ ಎಂಬ ಹೆದರಿಕೆಯಿಂದ ತಲೆಯನ್ನು ಮರೆಸಿಕೊಂಡು ಓಣಿಯಲ್ಲಿ ತಿರುಗಬೇಕಾಗುತ್ತದೆ. ಸಾಲ ಕೊಟ್ಟವನ ಕಾಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅನೇಕವೇಳೆ ಊರನ್ನೇ ಬಿಟ್ಟು ಹೋಗಬೇಕಾಗುವುದು; ಅಂಥ ಕಾಲದಲ್ಲಿ ಅವರ ಹೆಂಡರುಮಕ್ಕಳ ಪಾಡು ಏನಾಗಬೇಕು, ನೀವೇ ಆಲೋಚನೆ ಮಾಡಿ. ಕೆಲವು ಸಮಯದಲ್ಲಿ ತಮ್ಮ ಸ್ವಂತ ಸುಖಕ್ಕಾಗಿಯೇ ತಾವು ಮಾಡಿದ ಸಾಲವನ್ನು ತೀರಿಸುವುದಕ್ಕೆ ಸ್ವಲ್ಪವೂ ಯತ್ನಪಡದೆ ಬತ್ತಿಯಿಟ್ಟು ಪಿತ್ರಾರ್ಜಿತವಾದ ಆಸ್ತಿಯನ್ನು ಮಾರಿಬಿಡುವರು; ಇದು ತಮ್ಮ ಕೈಯಾರ ತಾವೇ ಮಾಡಿದ ಪುತ್ರದ್ರೋಹವಲ್ಲವೆ? ಕೆಲವು ಸಂದರ್ಭದಲ್ಲಿ ತಾವು ಮಾಡಿದ ಸಾಲಕ್ಕೆ ತಾವು ಜೀತಗಾರರಾಗಿಯೂ ಹೋಗುವರು; ಇದು ತಮಗೆ ತಾವೇ ಮಾಡಿಕೊಂಡ ಆತ್ಮದ್ರೋಹವಲ್ಲವೆ? ಎಲ್ಲರಂತೆ ಕೈಕಾಲುಗಳನ್ನು ಹೊಂದಿ ತಮ್ಮ ಶರೀರಭರಣಕ್ಕಾಗಿ ದ್ರವ್ಯಾರ್ಜನೆಯಲ್ಲಿ ಸ್ವಲ್ಪವೂ ಯತ್ನಿಸದೆ ಪಿತ್ರಾರ್ಜಿತ ಸ್ವತ್ತಿನಮೇಲೆ 'ಸಾಲ ತೆಗೆವುದು,' ಎಂದರೇನು— ತಮ್ಮ ಸೋಮಾರಿತನದಿಂದ ತಮ್ಮ ಮಕ್ಕಳ ಮೇಲೆ ಅನ್ಯಾಯವಾಗಿ ಹಾಕಿದ ಒಂದು ಹೊರೆಯಲ್ಲವೆ? ಆ ಹೊರೆಯನ್ನು ಹೊರುವುದಕ್ಕೆ ಮಕ್ಕಳು ಮಾಡಿದ ಪಾಪವೇನು! ಇಷ್ಟರಲ್ಲೇ ಮುಗಿವುದಿಲ್ಲ. ಕೆಲವುವೇಳೆ ನ್ಯಾಯಸ್ಥಾನದಲ್ಲಿ ಸಮಾನಸ್ಕಂದರ ಮುಂದೆ ನಿಂತು, ನಾನಾ ವಿಧವಾದ ಅವಮಾನವನ್ನೂ ನಷ್ಟವನ್ನೂ ಸಹಿಸಿ ಕೊನೆಗೆ ಸೆರೆಮನೆಯಲ್ಲಿಯೂ ನರಳುವರು.

ಈ ರೀತಿಯಾದ ಮನಃಕ್ಲೇಶ ದೇಹಶ್ರಮಗಳಲ್ಲದೆ ಅನೇಕ ವಿಧವಾದ ಪಾಪಗಳೂ ಸಂಭವಿಸುವುವು. ಸುಳ್ಳು ಸಾಲದ ಜತೆಯಲ್ಲಿಯೇ ಬರುವುದು. ಕಡ ಹುಟ್ಟುತ್ತದೆಯೆಂದು ಸ್ವಲ್ಪವೂ ಪರ್ಯಾಲೋಚನೆಯಿಲ್ಲದೆ ಕಡಮಾಡುವವನು ಸುಳ್ಳುಗಾರನೇ ಆಗಬೇಕು. ಹಣ ತೆಗೆದುಕೊಳ್ಳುವಾಗ ಇಷ್ಟು ದಿನಗಳಲ್ಲಿ ಕೊಡುತ್ತೇನೆಂದು ಪ್ರಮಾಣ ಮಾಡುವನು. ಪ್ರಾಯಶಃ, ಆ ದಿನ ಬಂದರೆ, ಕೊಡುವುದೇ ಇಲ್ಲ. ಕಂಡು ಕೇಳಿದರೆ, ಏನಾದರೂ ಒಂದು ನೆಪವನ್ನು ಕಲ್ಪಿಸುವನು. ಕೆಲವು ವೇಳೆ ಮನೆಯಲ್ಲಿ ಅವಿತುಕೊಂಡು, ಮನೆಯಲ್ಲಿ ಇಲ್ಲವೆಂದು ಹೆಂಡರುಮಕ್ಕಳ ಮೂಲಕ ಹೇಳಿಸುವನು. "ಸತ್ಯಂ ವದ, ಧರ್ಮಂ ಚರ" ಸತ್ಯವನ್ನೇ ಹೇಳು, ಧರ್ಮವನ್ನೇ ಆಚರಿಸು, ಎಂದಲ್ಲವೆ ಭಗವಂತನ ಆಜ್ಞೆ ಇರುವುದು ?

"ಅಹೇರಿವ ಋಣಾದ್ಭೀತಿಃ"—ಹಾವನ್ನು ಕಂಡರೆ ಹೇಗೋ ಹಾಗೆ ಋಣಕ್ಕೆ ಭಯಪಡಬೇಕು ; "ಸಾಲ ಹುಟ್ಟಿದ ಹಾಗೆಲ್ಲಾ ದುಃಖ ಹೆಚ್ಚುವುದು" ; "ಸಾಲಗಾರನು ಹಣಕೊಟ್ಟವನ ಜೀತಗಾರನು" ; "ದಾರಿದ್ರ್ಯವನ್ನಾದರೂ ಸಹಿಸಬಹುದು, ಹಾವಿನ ವಿಷವನ್ನಾದರೂ ಕುಡಿಯಬಹುದು, ಕಡ ಕೊಟ್ಟವನ ಮುಖದ ಉರಿಯನ್ನು ಸಹಿಸಲಾಗದು." ; "ಸಾಲವೆಂಬುದು ಇಹಕ್ಕೂ ಪರಕ್ಕೂ ಭಯಕಾರಣವಾಗಿದೆ. ಅದರ ಪರಿಣಾಮವು ಎಷ್ಟು ಘೋರವು ! ಕೋಪದಿಂದ ಕೂಡಿರುವ ಧನಿಕನ ಮುಖವನ್ನು ಆವನು ನೋಡುವುದಿಲ್ಲವೋ ಅವನೀಗ ಶ್ರೇಷ್ಠನು."—"ಕಡಹುಟ್ಟಿ ಬಡವ ಕೆಟ್ಟ" ; "ಸಾಲವೋ, ಶೂಲವೋ"

"ಸಾಲವನು ಕೊಂಬಾಗ ಹಾಲೋಗರುಂಡಂತೆ |
ಸಾಲಿಗರು ಬಂದು ಎಳೆವಾಗ ಕಿಬ್ಬದಿಯ |
ಕೀಲುಮುರಿದಂತೆ ಸರ್ವಜ್ಞ ||"

ಈ ಪ್ರಕಾರದಲ್ಲಿ ಅಲ್ಲವೇ ವಿವೇಕಿಗಳ ಮಾತು ಪ್ರಚಾರದಲ್ಲಿರುವುದು.

ಹೀಗಿರಲು ಸಾಲಮಾಡದೆ ಇರುವುದಕ್ಕೆ ಯತ್ನಪಡಬೇಕು. ಸಾಲಮಾಡದಿರುವುದಕ್ಕಾದೀತೇ, ಎಲ್ಲರೂ ಮಾಡಲೇ ಬೇಕು! ಎಂದು ಹೇಳುವವರೂ ಉಂಟು. ಏಕೆ! ಸಾಲಮಾಡದಿರುವುದಕ್ಕೆ ಆಗದೇ! ಅದು ನಮ್ಮ ಕೈಯಲ್ಲಿಯೇ ಇದೆ. ಎಷ್ಟೇ ವಿದ್ಯವಿರಲಿ, ಎಷ್ಟೇ ದೊಡ್ಡವಂಶದಲ್ಲಿ ಹುಟ್ಟಿರಲಿ, ಬಂದುವೇಳೆ ಗುರುವೇ ಆಗಿರಲಿ, ಅನೇಕರ ಆದರಣೆಗೆ ಪಾತ್ರನಾಗಿಯೇ ಇರಲಿ, ಸಾಲಗಾರನಾದ ಕೂಡಲೇ ಹುಲ್ಲುಕಡ್ಡಿಗೂ ಕಡೆಯಾಗಿ ಹೋಗುವನು. ಹಲವುದಿನ ಕಷ್ಟಪಟ್ಟರೂ ಸರಿ, ಸಾಲಮಾತ್ರ ಮಾಡಬಾರದು. ಅದು ಹಾವಿನಂತೆ ಇದೆ, ಎಂದು ಆಗಲೇ ಹೇಳಿದೆವು. ಅದರ ವಿಷವು ನಮ್ಮಲ್ಲಿ ವ್ಯಾಪಿಸಿದರೆ, ಅದಕ್ಕೆ ಪರಿಹಾರವೇ ಇಲ್ಲ; ಕೆಲವು ವೇಳೆ ಪ್ರಾಣಾಂತಿಕವಾಗಿಯೂ ಹೋಗುವುದು. ಆದುದರಿಂದ ಆರೂ ಮುಂದಣ ಪರಿಣಾಮವನ್ನು ಆಲೋಚನೆಮಾಡದೆ ಅವಿವೇಕವಾಗಿ ಸಾಲಮಾಡಬಾರದು.

## ೩. "ಪ್ರಾಮಾಣಿಕತೆ."

ಪ್ರಾಮಾಣಿಕತೆ ಎಂಬ ಪದವು "ಪ್ರ" ಎಂಬ ಉಪಸರ್ಗದೊಡನೆ ಕೂಡಿದ "ಮಾನ" ಎಂಬ ಶಬ್ದದಿಂದ ಹುಟ್ಟಿದೆ. "ಮಾನ" ಎಂಬುದು "ಮಾಙ್—ಮಾನೇ" ಎಂದರೆ, ಅಳೆ ಎಂಬ ಅರ್ಥವುಳ್ಳ ಧಾತುವಿನಿಂದ ನಿಷ್ಪನ್ನವಾಗಿದೆ. ಆದುದರಿಂದ ಪ್ರಮಾಣ ಎಂದರೆ ಸರಿಯಾದ ಅಳತೆ ಎಂದರ್ಥ. ಈಗ ಈ ಶಬ್ದವು ಕೇವಲ ಅಳತೆಯಲ್ಲಿಯೇ ವ್ಯವಹಾರದಲ್ಲಿಲ್ಲ; ಯಥಾವಸ್ಥಿತಿ ನಿರೂಪಣ, ಎಂದರೆ—ಇದ್ದುದನ್ನು ಸ್ವಲ್ಪವೂ ಹೆಚ್ಚುಕಡಮೆ ಮಾಡದೆ ಇದ್ದಂತೆಯೆ ತೋರಿಸುವುದು, ಎಂಬ ಅರ್ಥದಲ್ಲಿ ವಿಶೇಷವಾಗಿ ಉಪಯೋಗದಲ್ಲಿದೆ. ಆದುದರಿಂದ ಪ್ರಾಮಾಣಿಕನು ಎಂದರೆ—ಈ ಪ್ರಮಾಣಗುಣವುಳ್ಳವನು; ಎಂದರೆ—ಇದ್ದ ಸಂಗತಿಯನ್ನು ಹೆಚ್ಚುಕಡಮೆ ಮಾಡದೆ ಯಥಾವ

ಸ್ಥಿತವಾಗಿ ಹೇಳುವವನು ಎಂಬರ್ಥ. ಇವನಲ್ಲಿರುವ ಈ ವಿಧವಾದ ಗುಣಕ್ಕೆ ಪ್ರಾಮಾಣಿಕತೆ ಎಂದು ಹೆಸರು.

ಈ ಪ್ರಾಮಾಣಿಕತೆಯು ವಾಚಿಕವೆಂದೂ, ಕಾಯಿಕವೆಂದೂ, ಮಾನಸಿಕವೆಂದೂ ಮೂರು ರೀತಿಯಾಗಿರುವುದು. ವಚನಕ್ಕೆ ಎಂದರೆ ಮಾತಿಗೆ, ಸಂಬಂಧಪಟ್ಟುದು ವಾಚಿಕ; ಕಾಯಕ್ಕೆ ಎಂದರೆ, ದೇಹದ ವ್ಯಾಪಾರಕ್ಕೆ ಸಂಬಂಧಪಟ್ಟುದು ಕಾಯಿಕ; ಮನಸ್ಸಿಗೆ ಸಂಬಂಧಪಟ್ಟುದು ಮಾನಸಿಕ ಎಂದೆನಿಸಿಕೊಳ್ಳುವುದು.

ಆವುದನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾನೆಯೋ ಅದನ್ನೇ ಮಾತಿನಲ್ಲಿ ಹೇಳುತ್ತಾನೆ; ಅದನ್ನೇ ಕ್ರಿಯೆಯಲ್ಲಿ ತೋರಿಸುತ್ತಾನೆ. ಮನಸ್ಸಿನಲ್ಲಿ ಅಭಿಪ್ರಾಯ ಹುಟ್ಟದ ಹೊರತು ಬಾಯಲ್ಲಿ ಮಾತೂ ಹೊರಡುವುದಿಲ್ಲ, ದೇಹದಲ್ಲಿ ಕ್ರಿಯೆಯೂ ಹುಟ್ಟುವುದಿಲ್ಲ. ಮಾತಿಗೂ ಕ್ರಿಯೆಗೂ ಮನಸ್ಸಿನೊಡನೆ ಸೇರಿದರೆ ಪ್ರವೃತ್ತಿಯೇ ಹೊರತು ಮನಸ್ಸಿನಂತೆ ಸ್ವತಃ ಪ್ರವೃತ್ತಿಯಿಲ್ಲ. ಮಾತೂ ಇಲ್ಲದೆ ಅಂಗಗಳಲ್ಲಿ ಚಲನೆಗಳು ಏನೂ ಇಲ್ಲದೆ ಮನಸ್ಸಿನಲ್ಲಿ ಆಲೋಚಿಸುವುದಕ್ಕಾಗುತ್ತದೆ. ಮಾತಿಗೂ ಕ್ರಿಯೆಗೂ ಮನಸ್ಸೇ ಮುಖ್ಯ ಆಶ್ರಯವಾಗಿರುವುದು. ಹೀಗಿರುವುದರಿಂದ ಮನೋವಾಕ್ಕಾಯಗಳೆಂಬ ತ್ರಿಕರಣಗಳಿಗೆ ಸ್ವಭಾವವಾಗಿ ಐಕ್ಯವಿರಬೇಕು. ಎಂದರೆ—ಮನಸ್ಸಿನಲ್ಲಿರುವ ಅಭಿಪ್ರಾಯಕ್ಕೆ ಸರಿಯಾದ ನಡೆಯೂ, ನುಡಿಯೂ; ನಡೆಗೆ ತಕ್ಕ ಅಭಿಪ್ರಾಯವೂ ನುಡಿಯೂ; ನುಡಿಗೆ ಸಮವಾದ ಅಭಿಪ್ರಾಯವೂ, ನಡೆಯೂ ಇರಬೇಕು, ಎಂದಾಯಿತು. ಹೀಗಿದ್ದರೆ, ಸಮಗ್ರವಾದ ಪ್ರಾಮಾಣಿಕತೆ ಇದೆ, ಎಂದು ಹೇಳುವರು.

ಮನಸ್ಸಿನ ಅಭಿಪ್ರಾಯಕ್ಕೂ ಮಾತಿಗೂ ಆಗಲಿ, ಅಥವಾ ಮಾತಿಗೂ ಕ್ರಿಯೆಗೂ ಆಗಲಿ, ವ್ಯತ್ಯಾಸ ಬಂದು ವಾಚಿಕ ಪ್ರಾಮಾಣಿಕತೆಗೆ ಲೋಪ ಬಂದರೆ, ಅದಕ್ಕೆ "ಸುಳ್ಳು" "ಸಟೆ" "ಹುಸಿ" ಎಂದು ಹೇಳುವರು.

ಮನಸ್ಸಿನ ಅಭಿಪ್ರಾಯಕ್ಕೂ ಕ್ರಿಯೆಗೂ ಆಗಲಿ, ಅಥವಾ ಕ್ರಿಯೆಗೂ ಮಾತಿಗೂ ಆಗಲಿ, ವ್ಯತ್ಯಾಸ ಬಂದು ಕಾಯಿಕ ಪ್ರಾಮಾಣಿಕತೆಗೆ ಲೋಪ ಬಂದರೆ, ಅದಕ್ಕೆ "ಮೋಸ," "ಕಪಟ" ಎಂದು ಹೇಳುವರು. ಕಂಡುದನ್ನು ಕಾಣಲಿಲ್ಲವೆಂದೂ, ಕಾಣದುದನ್ನು ಕಂಡುದಾಗಿಯೂ ; ತಿಳಿದ ಸಂಗತಿಯನ್ನು ತಿಳಿಯದ ಹಾಗೂ ತಿಳಿಯದುದನ್ನು ತಿಳಿದ ಹಾಗೂ ; ತನ್ನಲ್ಲಿದ್ದರೂ ಇಲ್ಲವೆಂದೂ, ಇಲ್ಲದಿದ್ದರೂ ಇದೆ ಎಂದೂ ; ಮಾಡಿದ ಕೆಲಸವನ್ನು ಮಾಡಲಿಲ್ಲವೆಂದೂ, ಮಾಡದ ಕೆಲಸವನ್ನು ಮಾಡಿದಂತೆಯೂ ಹೇಳಿದರೆ, "ಸುಳ್ಳು" ಹೇಳಿದನೆಂದು ಹೇಳುವರು. ಈ ಕಡೆಗಳಲ್ಲಿ ಮೊದಲು ಮೂರರಲ್ಲಿ ಮನಸ್ಸಿನಲ್ಲಿದ್ದ ಅಭಿಪ್ರಾಯಕ್ಕೂ ಮಾತಿಗೂ, ಕೊನೆಯದರಲ್ಲಿ ಮಾತಿಗೂ ಕ್ರಿಯೆಗೂ ಆನುರೂಪ್ಯ ಕೆಟ್ಟಿರುವುದು. ಒಬ್ಬ ಮನುಷ್ಯನು ಹೇಳಿದುದು ಸುಳ್ಳು, ಎಂದರೆ—ಅವನು ಮನಸ್ಸಿನಲ್ಲಿಟ್ಟುಕೊಂಡಿದ್ದುದೇ ಬೇರೆ; ಬಾಯಲ್ಲಿ ಆಡಿದುದೇ ಬೇರೆ ಎಂದರ್ಥ. ಒಬ್ಬ ಮನುಷ್ಯನಿಗೆ ಒಬ್ಬನಲ್ಲಿ ದ್ವೇಷವಿದ್ದು ಅದನ್ನು ಮರೆಯಿಸಿಕೊಂಡು ಸ್ನೇಹಿತನಂತೆ ಅವನೊಡನೆ ಕೂಡಿಕೊಂಡಿದ್ದರೆ, ಅವನನ್ನು "ಕಪಟಿ" ಎಂದು ಕರೆವರು. ಇಲ್ಲಿ ಮನಸ್ಸಿನ ಅಭಿಪ್ರಾಯಕ್ಕೂ ಕ್ರಿಯೆಗೂ ಆನುರೂಪ್ಯ ಕೆಟ್ಟಿರುವುದು. ಒಬ್ಬನಿಗೆ ಒಬ್ಬನು ಅಂತರಂಗದಲ್ಲಿ ಅಪಕಾರ ಮಾಡಿ ಬಹಿರಂಗದಲ್ಲಿ ಉಪಕಾರ ಮಾಡಿದೆನೆಂದು ಹೇಳಿದರೆ, ಮೋಸಗಾರನೆಂದು ಹೇಳುವರು. ಸಾಲವನ್ನು ತೆಗೆದುಕೊಂಡು ತೆಗೆದುಕೊಳ್ಳಲಿಲ್ಲವೆಂದು ಹೇಳಿದರೆ ಮೋಸಮಾಡಿದನೆಂದು ಹೇಳುವರು. ಈ ಎರಡು ಕಡೆಗಳಲ್ಲಿ ಕ್ರಿಯೆಗೂ ಮಾತಿಗೂ ವಿರೋಧವು ಚೆನ್ನಾಗಿ ಕಾಣಬರುವುದು.

ಹೀಗೆ ಮನೋವ್ಯಾಪಾರ ವಾಚಿಕವ್ಯಾಪಾರ ಕಾಯಿಕವ್ಯಾಪಾರಗಳಲ್ಲಿ ಎರಡೆರಡಕ್ಕೆ ಆನುರೂಪ್ಯವಿದ್ದಾಗ, ಪ್ರಾಮಾಣಿಕತೆ ಇದೆ ಎಂದೂ; ಆನುರೂಪ್ಯ ಕೆಟ್ಟಾಗ ಪ್ರಾಮಾಣಿಕತೆ ಹೋಯಿತೆಂದೂ ಹೇಳಿದೆವು. ಇವುಗ

ಳಲ್ಲದೆ ಕೇವಲ ಮನೋವ್ಯಾಪಾರದಲ್ಲಿಯೇ ಒಂದು ವಿಧವಾದ ಪ್ರಾಮಾಣಿಕ ತೆಯೂ, ಅಪ್ರಾಮಾಣಿಕತೆಯೂ ಉಂಟು. ಅದೇನೆಂದರೆ—ಅನುಭವ, ಹಿರಿಯರ ಉಪದೇಶ, ಶಾಸ್ತ್ರಜ್ಞಾನ ಇವುಗಳ ಮೂಲಕ ಇದು ಸಾಧು ಇದು ಅಸಾಧು, ಇದು ಸರಿ ಇದು ತಪ್ಪು ಎಂದು ದೃಢವಾಗಿ ಹುಟ್ಟಿದ ನಿಶ್ಚಯ ಜ್ಞಾನಕ್ಕೆ ಅನುಕೂಲವಾಗಿ ಮನಸ್ಸು ಪ್ರವರ್ತಿಸಿದರೆ, ಅದಕ್ಕೆ ಕೇವಲ ಮಾನಸಿಕ ಪ್ರಾಮಾಣಿಕತೆಯೆಂದೂ; ವಿರೋಧವಾಗಿ ಪ್ರವರ್ತಿಸಿದರೆ ಕೇವಲ ಮಾನಸಿಕ ಅಪ್ರಾಮಾಣಿಕತೆಯೆಂದೂ ಹೇಳುವರು. ಇದು ಸಂಪೂರ್ಣವಾದ ಒಂದು ವಿಧವಾದ ಮನೋಗತಧರ್ಮ. ಕರುಬುವುದು, ಹಗೆಮಾಡುವುದು, ದುರಾಶೆ, ಹೇಡಿತನ ಮುಂತಾದುವು ಕೆಟ್ಟವೆಂದೂ, ಅವುಗಳನ್ನು ಅವಶ್ಯವಾಗಿ ಬಿಡಬೇಕೆಂದೂ ತಿಳಿದಿದ್ದರೂ, ಕೆಲವರು ಇತರರ ಉಚ್ಚಾಯಸ್ಥಿತಿಯನ್ನು ನೋಡಿ ಕರುಬುವರು; ಕೆಲವರು ಒಬ್ಬನಿಗೆ ಐಶ್ವರ್ಯ ಬಂದರೆ ಸಹಿಸರು; ಒಬ್ಬನಿಗೆ ಕೀರ್ತಿ ಬಂದರೆ ಹೊಟ್ಟೆಗಿಚ್ಚು ಪಡುವರು; ಒಬ್ಬನಿಗೆ ಅಧಿಕಾರ ಬಂದಿತೆಂದು ಸಂಕಟಪಡುವರು; ಅನ್ಯರಲ್ಲಿರುವ ವಸ್ತುವನ್ನು ಹೇಗಾದರೂ ಅಪಹರಿಸಬೇಕೆಂದು ಬಯಸುವರು. ಇಂಥ ಆಲೋಚನೆಗಳೆಲ್ಲವೂ ಕೆಟ್ಟ ವುಗಳೆಂದು ನಿಶ್ಚಯವಾಗಿ ತಿಳಿದಿದ್ದರೂ ಆ ಆಲೋಚನೆಗಳನ್ನು ಬಿಡರು. ಇದೊಂದು ಜಾತಿಯಾದ ಮಾನಸಿಕ ಅಪ್ರಾಮಾಣಿಕತೆಯಾಗಿರುವುದು. ನಮ್ಮ ಸ್ನೇಹಿತನೊಬ್ಬನು ಕಳವು ಮಾಡಿದಾನೆಂದು ಬಲ್ಲೆವು. ಅದನ್ನು ಬಹಿರಂಗ ಪಡಿಸಿ ಅವನನ್ನು ತಿದ್ದುವುದು ನಮ್ಮ ಧರ್ಮವೆಂದೂ ಬಲ್ಲೆವು. ಇದರಿಂದ ನಮಗೇನು! ಎಂದು ಕೆಲವುವೇಳೆ ಉದಾಸೀನ ಮಾಡುವೆವು. ಇದೂ ಮನೋನಿಶ್ಚಯಕ್ಕೆ ವಿರೋಧವಾದ ಒಂದು ಮಾನಸಿಕ ಪ್ರವೃತ್ತಿಯಲ್ಲವೆ? ನಾವು ಒಂದು ಕೆಟ್ಟಕೆಲಸ ಮಾಡಿರುವುದನ್ನು ನಮ್ಮ ಹಿರಿಯರು ಸಮಾಚಾರ ಕೇಳಿ—ಇಂಥ ಕೆಲಸವನ್ನು ಮಾಡಿದೆಯಾ? ಹೀಗೆ ಮಾಡಬಹುದೇ? ಎಂದು ಕೇಳಿದಾಗ, ಮಾಡಿದ್ದರೂ ಮಾಡಲಿಲ್ಲವೆಂದು ಹೆದರಿಕೆಯಿಂದ ಆಡು

ವುದೂ ಉಂಟು. ಇದು ತಪ್ಪೆಂದು ಬಲ್ಲೆವು. ನಮ್ಮ ಹೇಡಿತನವು ನಮ್ಮಿಂದ ಈ ಸುಳ್ಳನ್ನು ಹೇಳಿಸುವುದು. ಇಲ್ಲಿಯೂ ಕೂಡ ನಮ್ಮ ಮನೋನಿಶ್ಚಯಕ್ಕೆ ವಿರೋಧವಾದ ಅಭಿಪ್ರಾಯ ಹುಟ್ಟಿ, ಆದರಿಂದ ಸುಳ್ಳು ಹುಟ್ಟಿರುವುದು. ಹೀಗೆಯೇ ಮಾನಸಿಕ ಅಪ್ರಾಮಾಣಿಕತೆಗೆ ಅನೇಕ ನಿದರ್ಶನಗಳನ್ನು ಊಹಿಸಿಕೊಳ್ಳಬಹುದು.

ಈ ಮೂರು ತೆರದ ಪ್ರಾಮಾಣಿಕತೆಯು ‘ ಸತ್ಯ ’ ‘ ನಿಜ ’ ಎಂಬ ಇವೇ ಮೊದಲಾದ ಪದಗಳಿಂದ ವ್ಯವಹರಿಸಲ್ಪಡುವುದು. ಈ ಮೂರುವಿಧವಾದ ಪ್ರಾಮಾಣಿಕತೆಯು ಮನುಷ್ಯನಿಗೆ ಆವಶ್ಯಕವಾಗಿರಬೇಕಾದ ಗುಣವು. ಇದನ್ನೇ ನಮ್ಮ ಹಿರಿಯರು ‘ ತ್ರಿಕರಣಶುದ್ಧಿ ’—ಮನೋವಾಕ್ಕಾಯಗಳಿಗೆ ಶೋಧನ, ಎಂದು ಹೇಳಿದರು. ಈ ಸದ್ಗುಣವನ್ನು ಸಂಪಾದಿಸುವುದಕ್ಕೆ ಸರ್ವರೂ ಯತ್ನಿಸಬೇಕು. ಈ ಗುಣದ ವೈಷಮ್ಯದಿಂದಲ್ಲವೆ ಮಹಾತ್ಮ ದುರಾತ್ಮ, ಉತ್ತಮ ಅಧಮ, ಶ್ರೇಷ್ಠ ನೀಚ ಎಂಬ ತಾರತಮ್ಯವು ಉಂಟಾಗಿರುವುದು?

ಇದರ ವಿಷಯವಾಗಿ ಮಹಾಭಾರತದಲ್ಲಿ —

ಶ್ಲೋ ॥ “ ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ ।
ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ ॥ ”

ಅರ್ಥ—ಮಹಾತ್ಮರಾದವರಿಗೆ ಮನಸ್ಸಿನಲ್ಲಿ ಇರುವುದೂ ಒಂದೆ, ಬಾಯಲ್ಲಿ ಆಡುವುದೂ ಒಂದೆ, ಕ್ರಿಯೆಯಲ್ಲಿ ಮಾಡುವುದೂ ಒಂದೆ: ದುರಾತ್ಮರಿಗಾದರೋ ಮನಸ್ಸಿನಲ್ಲಿರುವುದೇ ಒಂದು, ಬಾಯಲ್ಲಿ ಆಡುವುದೇ ಒಂದು, ಕೈಯಲ್ಲಿ ಮಾಡುವುದೇ ಒಂದು, ಎಂದು ಹೇಳಿ ಇದೆ. ಸತ್ಯವನ್ನು ಹೇಗಾದರೂ ಸಂಪಾದಿಸಬೇಕು; ಅದನ್ನು ಸಂಪಾದಿಸಿದ ಹೊರತು ಆವ ವಿಧವಾದ ಶ್ರೇಯಸ್ಸೂ ಇಲ್ಲ, ಎಂಬ ಅರ್ಥವನ್ನು ಈ ಕೆಳಗಣ ಗಾದೆಗಳು ಸ್ಪಷ್ಟವಾಗಿ ತಿಳಿಸುವುವು.

" ನಾಸ್ತಿ ಸತ್ಯಸಮೋ ಧರ್ಮಃ " ( ಸತ್ಯಕ್ಕೆ ಸಮವಾದ ಧರ್ಮವೇ ಇಲ್ಲ.)

" ಸರ್ವಂ ಸತ್ಯೇ ಪ್ರತಿಷ್ಠಿತಂ " ( ಸಕಲವೂ ಸತ್ಯದಲ್ಲಿಯೇ ನಿಂತಿರುವುದು. )

## ೪. "ದುಷ್ಕೃತ್ಯತ್ರಯ."

ಲೋಕದಲ್ಲಿ ಕೆಟ್ಟವುಗಳೆಂದು ಕರೆಯಲ್ಪಡುವ ಮನುಷ್ಯ ವ್ಯಾಪಾರಗಳೆಲ್ಲವನ್ನು ಮೂರು ಗುಂಪುಗಳಾಗಿ ವಿಭಾಗಮಾಡಬಹುದು. ಅವುಗಳಾವುವೆಂದರೆ—ಕೆಟ್ಟ ಆಲೋಚನೆ, ಕೆಟ್ಟ ಮಾತು, ಕೆಟ್ಟ ಕೆಲಸ. ಇವುಗಳಿಗೆ ಸಾಮಾನ್ಯವಾಗಿ ಸಂಸ್ಕೃತದಲ್ಲಿ ದುರ್ಬುದ್ಧಿ, ದುರ್ವಾಕ್ಯ, ದುಷ್ಕೃತ್ಯ ಎಂದು ಹೇಳುವರು. ಇವುಗಳನ್ನೆ ಮಾನಸಿಕಪಾಪ, ಕಾಯಿಕಪಾಪ, ವಾಚಿಕಪಾಪಗಳೆಂದು ಕರೆವುದುಂಟು. ಇದು ಕೆಟ್ಟದು ಎಂದು ಕರೆಯಲ್ಪಡುವ ಪ್ರತಿಯೊಂದು ಮನುಷ್ಯವ್ಯಾಪಾರವೂ ಈ ಗುಂಪುಗಳಲ್ಲಿ ಆವುದಾದರೂ ಒಂದಕ್ಕೆ ಸೇರಿಯೇ ಇರಬೇಕು. ಲೋಕದ ಸ್ಥಿತಿಯನ್ನು ನೋಡಿದರೆ ಈ ಮೂರು ವಿಧವಾದ ದುಷ್ಕೃತ್ಯಗಳನ್ನು ಬಿಟ್ಟಲ್ಲದೆ ಒಳ್ಳೆಯವನೆನಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

ಕೆಟ್ಟ ಆಲೋಚನೆಯೆಂಬುದು ಮನಸ್ಸಿನ ಒಂದು ಕೆಟ್ಟ ಗುಣ. ಇದು ಮನಸ್ಸಿಗೆ ಒಂದು ವಿಷ. ಈ ವಿಷವು ಮನಸ್ಸಿನಲ್ಲಿ ಎಷ್ಟೆಷ್ಟು ಕಾಲ ನಿಲ್ಲುತ್ತದೆಯೊ ಅಷ್ಟಷ್ಟು ಹೆಚ್ಚಾಗಿ ಕೇಡನ್ನು ಉಂಟುಮಾಡುತ್ತದೆ. ಇದು ಆದಿಯಲ್ಲಿ ಅಲ್ಪವಾಗಿ ಕಂಡುಬಂದು ಕೊನೆಯಲ್ಲಿ ಬಹಳ ಅಪಾಯವಾಗಿ ಪರಿಣಮಿಸುವುದು. ಹಾವು ಕಚ್ಚಿದರೆ ಪರಿಣಾಮವು ಅಷ್ಟು ಘೋರವಲ್ಲ! ಹಾವಿನ ವಿಷವು ವ್ಯಾಪಿಸಿದರೆ, ವಿಷವ್ಯಾಪಿಸಿದ ಮನುಷ್ಯನೊಬ್ಬನಿಗೆ ಮಾ

ತ್ರವೆ ಕೇಡುಂಟಾಗುವುದು. ಈ ವಿಷ ವ್ಯಾಪಿಸಿದರೆ ವಿಷವ್ಯಾಪಿಸಿದವನಿಗೆ ಮಾತ್ರವೆ ಅಲ್ಲದೆ ಇತರರಿಗೂ ಕೂಡ ಕೇಡಾಗುವುದು. ಆದುದರಿಂದ ಹಾವು ಕಂಡರೆ ಎಷ್ಟು ಭಯಪಡುತ್ತೀರೋ ಅದಕ್ಕಿಂತ ಹೆಚ್ಚಾಗಿ ಇದಕ್ಕೆ ಭಯ ಪಡಬೇಕು. ಹೀಗಿರುವುದರಿಂದ ಕೆಟ್ಟ ಆಲೋಚನೆಯು ಮನಸ್ಸನ್ನು ಸೇರದಂತೆ ನೋಡಿಕೊಳ್ಳುವುದು ಒಂದು ಮುಖ್ಯವಾದ ಕೆಲಸವಾಗಿದೆ. ದುರಾಲೋಚನೆಗೆ ಸೋಮಾರಿತನವು ವಿಶೇಷವಾಗಿ ಅವಕಾಶವನ್ನು ಕೊಡುತ್ತದೆ. ಸೋಮಾರಿಯ ಮನಸ್ಸು ದುಷ್ಕೃತ್ಯಗಳ ತೌರುಮನೆ ಎಂಬುದು ನಿಜ. ಆದುದರಿಂದ ದುರಾಲೋಚನೆಯು ಮನಸ್ಸನ್ನು ಆವರಿಸಿಕೊಳ್ಳದಂತೆ ನೋಡಿಕೊಳ್ಳಬೇಕು; ಅದರ ಸುಳಿವಿಗೆ ಹೆದರಬೇಕು; ಅದನ್ನು ದೂರದಲ್ಲಿ ತಡೆಯಬೇಕು; ಅದನ್ನು ಹೊಡೆದು ಓಡಿಸುವುದಕ್ಕೆ, ದಾಸರು ಹೇಳುವಂತೆ,

"ಕೈಯಲ್ಲಿ ಕೋಲ ಕಡ್ಡಿ ನಿನ್ನ ।
ಕೈಯಲ್ಲಿ ಕೋಲ ಕಡ್ಡಿ ॥
ಸಾರಿ, ದೂರಿ ಹೇಳುತೇನೆ ।
ಕೆಟ್ಟ, ಕಂಡಾ, ಬೊಡ್ಡಿ ಮನವೇ ! ।
ದೂರುವ ಬುದ್ಧಿ ಮಾಡಬೇಡ ।
ಕೈಯಲ್ಲಿ ಕೋಲ ಕಡ್ಡಿ ॥"

ಪ್ರಾಯಶಃ ಕೆಟ್ಟ ಆಲೋಚನೆಯಿಂದಲೆ ಕೆಟ್ಟ ಮಾತು ಹೊರಡುವುದು.

"ಬಾಯಿಯ ಕೊಬ್ಬಿಂ ।
ಬೈಯುವ ಮನುಜಗೆ ।
ಗಾಯವು ತಾಗದೆ ಬಿಟ್ಟೀತೇ ॥"

ಎಂದು ಹೇಳುವ ಹಾಗೆ ಕೆಟ್ಟ ಮಾತಾಡುವವನು ತನ್ನ ಮೇಲೆ ಕೇಡು ಬರಮಾಡಿಕೊಳ್ಳುವನು. ಕೆಟ್ಟ ಮಾತು ಕಿವಿಯ ಮೂಲಕ ಹೃದ

ಯವನ್ನು ಪ್ರವೇಶಿಸಿ ಭಗವಂತನ ಆಜ್ಞೋಲ್ಲಂಘನವನ್ನು ಮಾಡಿಸುತ್ತದೆ.

"ಪರರ ನಿಂದೆಯನ್ನು ಮಾಡಿ
ನರಕಿಯಾಗ ಬೇಡ, ಮನವೆ!"

ಎಂದು ದಾಸರೂ ಹೇಳುತ್ತಾರೆ. ಆದುದರಿಂದ ಕೆಟ್ಟಮಾತು ಹೃದಯುವನ್ನು ಹೊಗದಂತೆ ಕಿವಿಗಳನ್ನು ಮುಚ್ಚಿಡಬೇಕು. ಕೆಟ್ಟ ಮಾತಾಡುವವರ ಜತೆಯನ್ನು ಆತ್ಯಂತಿಕವಾಗಿ ತ್ಯಜಿಸಬೇಕು. ಪ್ಲೇಗು ಮುಂತಾದ ರೋಗಗಳಿಗೆ ಹೆದರಿಕೊಂಡು ಊರನ್ನೇ ಬಿಟ್ಟು ಬಿಡುವಂತೆ ಕೆಟ್ಟ ಮಾತಿಗೆ ಹೆದರುವುದೂ ಅಲ್ಲದೆ ಅದರಲ್ಲಿ ಸಂತೋಷಪಡುವ ದುಷ್ಟಜನಗಳ ಸಹವಾಸವನ್ನು ಬಿಡಬೇಕು. ಹೀಗೆಯೇ

"ಅಷ್ಟಮದದಿ ಬೆರೆಯದಿರು,
ನಷ್ಟಕ್ಕೆ ಗುರಿಯಾಗದಿರು,
ದುಷ್ಟಸಂಗವನ್ನು ಮಾಡಿ,
ಭ್ರಷ್ಟನಾಗ ಬೇಡ, ಮನವೇ!"

ಎಂದು ದಾಸರು ಹೇಳುತ್ತಾರೆ.

ದುಷ್ಕೃತ್ಯಗಳಿಗೆ ಕೆಲವು ವೇಳೆ ಕೆಟ್ಟ ಮಾತೂ, ಕೆಲವು ವೇಳೆ ಕೆಟ್ಟ ಆಲೋಚನೆಯೂ ಕಾರಣವಾಗಿರುವುದು. ಇದು ಅನುಭವಸಿದ್ಧ. ದುಷ್ಕೃತ್ಯಗಳನ್ನು ಅವಶ್ಯಕವಾಗಿ ಬಿಡಬೇಕೆಂದು ಎಲ್ಲರೂ ಹೇಳುವರು. ಇದನ್ನು ತಿಳಿಯದವರೇ ಪ್ರಾಯಶಃ ಇಲ್ಲ. ದುಷ್ಕೃತ್ಯಗಳನ್ನು ಬಿಟ್ಟಿರುವವರು ಮಾತ್ರ ಬಹಳ ವಿರಳ. ಗಿಡದ ಸುಳಿಯೂ ಎಲೆಯೂ ಬಾಡಿದರೆ ಬೇರಲ್ಲಿ ಏನೋ ದೋಷವಿರಬೇಕು. ಬೇರನ್ನು ಪರೀಕ್ಷಿಸಿ ನೋಡದೆ ಸುಳಿಗೂ ಎಲೆಗೂ ಏನೇನು ಉಪಚಾರ ಮಾಡಿದರೆ ತಾನೆ ನೇರವಾಗುವುವು. ರೋಗೋತ್ಪತ್ತಿಗೆ ಮುಖ್ಯ ಕಾರಣವನ್ನು ನಾಶಮಾಡಿದ ಹೊರತು ರೋಗವು ಎಂದಿಗೂ ಶಾಂತವಾಗುವುದಿಲ್ಲ. ಹಾಗೆಯೇ ದುಷ್ಕೃತ್ಯಗಳ ಬೇರನ್ನು ಸುಟ್ಟ

ಹೊರತು ಅವುಗಳು ನಾಶವಾಗುವುದಿಲ್ಲ. ದುಷ್ಕೃತ್ಯಗಳನ್ನು ಬಿಡಬೇಕಾದರೆ ದುರಾಲೋಚನೆಯೆಂಬ ಅದರ ತಾಯಿಬೇರನ್ನು ಕಿತ್ತು ಬಿಸುಡಬೇಕು; ಆಗ ಕೆಟ್ಟಮಾತು ಆಡುವುದಿಲ್ಲ, ಕೆಟ್ಟಕೆಲಸ ಮಾಡುವುದಿಲ್ಲ, ಎಂದು ನಿಶ್ಚಯವಾಗಿ ಹೇಳಬಹುದು.

ಕಿಡಿ ಸಣ್ಣನಾದರೂ ದೊಡ್ಡಮನೆಯನ್ನೂ ಉರಿಸಿಬಿಡುವುದು. ಮನೆಯಮೇಲೆ ಬಿದ್ದ ಆಸಣ್ಣಕಿಡಿಯನ್ನು ಆರಿಸುವುದು ಬಹುಸುಲಭ; ಅದರಿಂದ ಮನೆಯೂ ಉಳಿವುದು. ಅದೇ ಕಿಡಿಯು ಪ್ರಬಲಿಸಿ ಮನೆಯೇ ಹೊತ್ತಿಕೊಂಡು ಉರಿಯುತ್ತಿರುವಾಗ ಆರಿಸುವುದೇನೋ ಬಹಳಪ್ರಯಾಸ, ಪ್ರಯೋಜನವೂ ಕಡಮೆ. ಹೀಗಿರುವುದರಿಂದ ಮೊದಲ ಕಿಡಿಯಂತಿರುವ ದುರಾಲೋಚನೆಯನ್ನು ಹುಟ್ಟಿದಕೂಡಲೇ ನಾಶಮಾಡಿರಿ, ಕೆಟ್ಟ ಬೈಗಳನ್ನು ಆಡುವುದೇ ಇಲ್ಲ, ಕೆಟ್ಟ ಕೆಲಸವನ್ನು ಮಾಡುವುದೇ ಇಲ್ಲ. ಮೊಳಕೆಯಲ್ಲಿ ಚಿವುಟಿದರೆ ಗಿಡವು ಶೀಘ್ರವಾಗಿ ಬಾಗಿಹೋಗುವುದು. ಬಲಿತ ಮೇಲೆ ಚಿವುಟುವುದಕ್ಕಾಗುವುದೂ ಇಲ್ಲ, ಚಿವುಟಿದರೂ ಮತ್ತಷ್ಟು ಚಿಗುರುವುದು. ಹೀಗೆಯೇ ಕೆಟ್ಟ ಆಲೋಚನೆಯನ್ನು, ಅದೇ ಬಂದು ಚಾಳಿಯಾಗಿ ಪರಿಣಮಿಸುವುದಕ್ಕೆ ಮುಂಚೆಯೇ ಚಿವುಟಬೇಕು. ಆಮೇಲೆ ಚಿವುಟುವುದಕ್ಕೆ ಆಗುವುದೂ ಇಲ್ಲ, ಚಿವುಟಿದರೂ ವಿಪರೀತವಾಗಿ ಪರಿಣಮಿಸುವುದು. "ನಾಯಿಯ ಬಾಲ ನಳಿಗೆಯಲ್ಲಿ" ಇಟ್ಟಂತೆ ಮನಸ್ಸಿನ ಡೊಂಕು ಬಲಿತಮೇಲೆ ಹೋಗುವುದೇ ಇಲ್ಲ.

ಹೀಗಿರುವುದರಿಂದ ಈ ಮೂರು ವಿಧವಾದ ದುಷ್ಕೃತ್ಯಗಳನ್ನು ಹೇಗಾದರೂ ಬಿಡಬೇಕು. ಮನಸ್ಸು ಬಹಳವೇಳೆ ಅಧೀನದಲ್ಲಿ ಇರುವುದಿಲ್ಲ, ಎಂಬುದು ತಿಳಿದೇ ಇದೆ. ಆದುದರಿಂದ ಇವುಗಳ ಪಾಶವನ್ನು ಬಿಡಿಸಿಕೊಳ್ಳುವುದಕ್ಕೆಮಾಡುವ ಯತ್ನವು ಭಗ್ನವಾಗಿ ಹೋಗುವುದೇ ಹೆಚ್ಚು. ಹೀಗಿರುವುದರಿಂದ ಸಕಲ ಶ್ರೇಯಸ್ಸಿಗೂ ಕಾರಣನಾದ, ಸಕಲಕ್ಕೂ ನಿಯಾಮಕನಾದ

" ಈಶನ ಕರುಣೆಯು
ನಾಶಿಸು ವಿನಯದಿ
ದಾಸನ ಹಾಗೆಯೆ ನೀ ಮನವೇ ! ॥
ಕ್ಲೇಶದ ವಿಧವಿಧ
ಪಾಶವ ಹರಿದು ವಿ
ಲಾಸದಿ ಸತ್ಯವ ತಿಳಿ ಮನವೇ ! ॥"

ದುಷ್ಕೃತ್ಯಗಳ ಪಾಶದಲ್ಲಿ ಕಟ್ಟುಬಿದ್ದು ನರಳುತ್ತಿರುವ ನಮ್ಮಂಥವರನ್ನು ನೋಡಿ ದಯಾಪರವಶರಾದ ನಮ್ಮ ಹಿರಿಯರು ಭಗವಂತನನ್ನು ಕುರಿತು ಹೀಗಲ್ಲವೆ ಸ್ತುತಿಸಿ ಇರುವರು ?

" ಹಾ ! ಹಂತ ! ಹಂತ ! ಮನಸಾ ಕ್ರಿಯಯಾ ಚ ವಾಚಾ ।
ಯೋಽಹಂ ಚರಾಮಿ ಸತತಂ ತ್ರಿವಿಧಾಪಚಾರಾನ್ ॥
ಸೋಽಹಂ ತವಾಪ್ರಿಯಕರಃ ಪ್ರಿಯಕೃದ್ವದೇವ ।
ಕಾಲಂ ನಯಾಮಿ ಯತಿರಾಜ ತತೋಽಸ್ಮಿ ಮೂರ್ಖಃ ॥ "

ಅರ್ಥ:—ಭಗವಂತನೇ ! ಅಯ್ಯೋ ! ನಾನು ಏನು ಹೇಳಲಿ ! ನಿರಂತರವಾಗಿ ಮನಸ್ಸಿನಿಂದಲೂ, ಕ್ರಿಯೆಯಿಂದಲೂ, ಮಾತಿನಿಂದಲೂ ಮೂರು ವಿಧವಾದ ಅಪಚಾರಗಳನ್ನು ಮಾಡುತ್ತಾ ಇರುತ್ತೇನೆ. ನಿನಗೆ ಇಷ್ಟವಿಲ್ಲದ ಕೃತ್ಯಗಳನ್ನೇ ಅಂತರಂಗದಲ್ಲಿ ಮಾಡುತ್ತಿದ್ದರೂ ಬಹಿರಂಗದಲ್ಲಿ ನಿನಗೆ ಇಷ್ಟವಾದ ಕೃತ್ಯಗಳನ್ನೇ ಮಾಡುತ್ತಿರುವನಂತೆ ನಟಿಸುತ್ತೇನೆ. ಈ ರೀತಿಯಲ್ಲಿ ಕಾಲವನ್ನು ನೂಕುತ್ತಿರುವ ನನ್ನಂಥ ಮೂರ್ಖನು ಯಾವನು ತಾನೇ ಇರುವನು !

## ೫. "ಕಾಲದ ಬೆಲೆ"

ಒಂದು ಕಾಲದಲ್ಲಿ ಒಬ್ಬ ದೊರೆಯು ಅರ್ಧರಾತ್ರಿಯ ವರೆಗೂ ನಿದ್ದೆ ಬಾರದಿರಲು, ಮಂತ್ರಿಯನ್ನು ಕರೆಸಿ—ಪ್ರಪಂಚವೇ ನಿದ್ದೆಮಾಡುವಂತಿದೆ. ಎಲ್ಲಿಯೂ ಚಲನೆ ಕಾಣಬರುವುದಿಲ್ಲ. ಈಗಲೂ ನಿದ್ದೆಮಾಡದೆ ನಡೆಯುತ್ತಿರುವುದಾವುದಾದರೂ ಉಂಟೇ, ಎಂದು ಕೇಳಲು; ಅವನು ಸ್ವಲ್ಪಹೊತ್ತು ಹಾಗೆಯೇ ಆಲೋಚಿಸಿ—ಮಹಾಸ್ವಾಮಿ ! ಹಣದ ಬಡ್ಡಿಯೂ, ಹೊಳೆಯ ನೀರೂ, ಆಯುಸ್ಸಿನ ಕಾಲವೂ ಮಾತ್ರ ನಡೆಯುತ್ತಿವೆ ; ಉಳಿದುವೆಲ್ಲವೂ ನಿದ್ದೆಮಾಡುತ್ತಿವೆ, ಎಂದನು.

ಕಾಲವು ಹೊಳೆಯ ನೀರಿನಂತೆ ನಿಲ್ಲದೆ ಚಲಿಸುತ್ತಿರುವುದು. ಆಯುಸ್ಸಿನ ಕಾಲವು ಕಳೆದು ಹೋಗುವುದನ್ನು ನಿಲ್ಲಿಸುವುದಕ್ಕೆ ಅವನ ಕೈಯಿಂದಲೂ ಆಗುವುದಿಲ್ಲ. ಹೀಗೆ, ತಾನೇ ಕಳೆದುಹೋಗುತ್ತಿರುವ ಕಾಲವನ್ನು ಉಪಯೋಗ ಮಾಡುವುದೇ ನಮ್ಮ ಬುದ್ಧಿವಂತಿಕೆ. ಹರಿದು ಸಮುದ್ರಕ್ಕೆ ಬೀಳುತ್ತಿರುವ ನದಿಯ ನೀರನ್ನು ವ್ಯವಸಾಯಕ್ಕೆ ತರುವುದೇ ಅದರ ಉಪಯೋಗ. ಉಪಯೋಗಿಸಿಕೊಳ್ಳಲಿ, ಬಿಡಲಿ, ನೀರು ಸಮುದ್ರಕ್ಕೆ ಸೇರಿಯೇ ಸೇರುವುದು. ಹಾಗೆಯೇ ಉಪಯೋಗ ಮಾಡಲಿ ಬಿಡಲಿ ಆಯುಸ್ಸು ಕಳೆದುಹೋಗುವುದೇನೋ ನಿಜ. ನಮ್ಮ ಉಪಯೋಗಕ್ಕೆ ತೆಗೆದುಕೊಂಡರೆ ಅದನ್ನು ಕಳೆದಂತೆ ಆಗುವುದಿಲ್ಲ. ಉಪಯೋಗಕ್ಕೆ ತೆಗೆದುಕೊಳ್ಳದಿದ್ದರೆ ವ್ಯರ್ಥಮಾಡಿದಂತೆ ಆಗುವುದು. ಓಡುತ್ತಿರುವುದೇ ಕಾಲದ ಸ್ವಭಾವವು. ಸಿಕ್ಕಿದಾಗ ವಶಮಾಡಿಕೊಳ್ಳದಿದ್ದರೆ, ತಿರಿಗಿ ಸಿಕ್ಕುವುದೇ ಇಲ್ಲ. ಹೀಗಿರುವುದರಿಂದ ಕಾಲದ ಬೆಲೆಯನ್ನು ಎಷ್ಟೆಂದು ಹೇಳಬಹುದು !

ವಿಷ್ಣುಶರ್ಮನೆಂಬ ಕವಿಯು ಪಂಚತಂತ್ರದಲ್ಲಿ ಕಾಲದ ವಿಚಾರವಾಗಿ ಹೀಗೆ ಹೇಳುತ್ತಾನೆ :—

" ಆದೇಯಸ್ಯ ಪ್ರದೇಯಸ್ಯ ಕರ್ತವ್ಯಸ್ಯ ಚ ಕರ್ಮಣಃ ।
ಕ್ಷಿಪ್ರಮಕ್ರಿಯಮಾಣಸ್ಯ ಕಾಲಃ ಪಿಬತಿ ತದ್ರಸಂ ॥ "

ಅರ್ಥ—ಕೊಳ್ಳತಕ್ಕುದನ್ನು ಕೊಳ್ಳಬೇಕಾದರೂ, ಕೊಡತಕ್ಕುದನ್ನು ಕೊಡಬೇಕಾದ್ದರೂ, ಮಾಡತಕ್ಕ ಕೆಲಸವನ್ನು ಮಾಡಬೇಕಾದರೂ ತತ್ತ್ಕಾಲದಲ್ಲಿಯೇ ಮಾಡಬೇಕು; ಹಾಗೆ ಮಾಡದಿದ್ದರೆ, ಕಾಲವು ಅದರ ರಸವನ್ನೇ ಹೀರಿ ಬಿಡುತ್ತದೆ, ಎಂದು.

ಕಾಲವೆಂಬುದು ಒಂದು ದೊಡ್ಡ ಧನ. ಸಾಮಾನ್ಯವಾದ ಧನಕ್ಕಿಂತಲೂ ಇದರ ಬೆಲೆ ಬಹಳ ಹೆಚ್ಚು. ಧನದ ಉಪಯೋಗವನ್ನೂ ಅದರ ಬೆಲೆಯನ್ನೂ ಬಲ್ಲವರು ಅನೇಕರುಂಟು ; ಕಾಲದ ಬೆಲೆಯನ್ನೂ ಅದರ ಉಪಯೋಗವನ್ನೂ ಚೆನ್ನಾಗಿ ಬಲ್ಲವರು ಬಹಳ ವಿರಳ. ಕಾಲದ ಯೋಗ್ಯತೆಯನ್ನೂ ಧನದ ಯೋಗ್ಯತೆಯನ್ನೂ ಪರ್ಯಾಲೋಚನೆ ಮಾಡಿ ನೋಡಿದರೆ ಅದಕ್ಕೂ ಇದಕ್ಕೂ ಆನೆಗೂ ಆಡಿಗೂ ಇರುವ ತಾರತಮ್ಯ ಕಾಣಬರುತ್ತದೆ. ಒಂದು ಕ್ಷಣಕಾಲದಲ್ಲಿ ಬಹುಧನವನ್ನು ಸಂಪಾದಿಸಿದವರನ್ನು ಕಂಡಿದ್ದೇವೆ ; ಕಳೆದು ಹೋದ ಒಂದು ಕ್ಷಣ ಕಾಲವನ್ನೂ ಕೂಡ ಎಷ್ಟೇ ಧನವನ್ನು ವೆಚ್ಚಮಾಡಿಯಾದರೂ ಸಂಪಾದಿಸಿದವರನ್ನು ಕಂಡಿದ್ದೇವೆಯೆ ? ಚಕ್ರವರ್ತಿಗಳೂ ಕೂಡ ಒಂದು ಕ್ಷಣಕಾಲದ ಮಟ್ಟಿಗೆ ಬದುಕಿಸಿ ಕೊಟ್ಟರೆ ತಮ್ಮ ಸರ್ವಸ್ವವನ್ನೂ ಕೂಡ ಕೊಟ್ಟು ಬಿಡುವೆವು, ಎಂದು ಹೇಳರುವರು. ಇವರ ಇಷ್ಟಾರ್ಥವನ್ನು ಪೂರ್ತಿಮಾಡುವ ಶಕ್ತರು ಆರಾದರೂ ಇದ್ದಾರೆಯೆ ?

ಕಾಲವೆಂಬುದು ಆರೋಗ್ಯಭಾಗ್ಯದಂತೆ ಸರ್ವಸಾಮಾನ್ಯವಾದ ಒಂದು ಸಂಪತ್ತು. ಕೈಯಲ್ಲಿರುವಾಗ, ಇವೆರಡರ ಬೆಲೆಯೂ ಗೊತ್ತಾಗುವುದಿಲ್ಲ ; ಕಳೆದುಕೊಂಡ ಕೂಡಲೆ ಗೊತ್ತಾಗುವುದು. ಹೊಟ್ಟೆ ನೋವು ಬಂದಾಗಲಲ್ಲವೆ ತಿನ್ನಬಾರದುದನ್ನು ತಿಂದೆವೆಂಬ ಪಶ್ಚಾತ್ತಾಪ ಹುಟ್ಟುವುದು ? ಪರೀಕ್ಷೆ

ಯಲ್ಲಿ ಪ್ರಶ್ನೆಗೆ ಉತ್ತರ ಬರೆವಾಗಲಲ್ಲವೆ ಕಾಲವು ವ್ಯರ್ಥವಾಗಿ ಕಳೆದು ಹೋಯಿತು ಎಂಬ ಚಿಂತೆ ಹುಟ್ಟುವುದು ? ಒಬ್ಬ ಕವಿಯು—ಕಾಲವು ನಿಶ್ಶಬ್ದವಾಗಿ ಹಜ್ಜೆಯನ್ನು ಇಡುತ್ತದೆ, ಎಂದು ಹೇಳುತ್ತಾನೆ. ಮತ್ತೊಬ್ಬನು—ಕಾಲಕ್ಕೆ ಕಾಲಿನಲ್ಲಿ ಗಿಣ್ಣೇ ಇಲ್ಲ, ಎಂದೂ; ಇನ್ನೊಬ್ಬನು—ಕಾಲವು ಚಕ್ರದಂತೆ ಉರುಳುತ್ತದೆ, ಎಂದೂ ; ಮತ್ತೊಬ್ಬನು—ದದ್ದುಮಡಕೆಯಿಂದ ನೀರು ಸ್ರವಿಸುವ ಹಾಗೆ ಕಾಲವು ಕಳೆದು ಹೋಗುತ್ತದೆ, ಎಂದೂ ಹೇಳುತ್ತಾರೆ. ಕಾಲವು ವ್ಯರ್ಥವಾಗಿ ಕಳೆದುಹೋಗುತ್ತದೆ ಎಂಬುದು, ಅದು ಕಳೆದುಹೋಗುತ್ತಿರುವಾಗ ತಿಳಿವುದು ಕಷ್ಟ. "ಚಟ್ಟ ಮೇಲೆ ಬಲೆ ಉರಿಯಿತು" ಎಂದು ಹೇಳುವ ಹಾಗೆ ಕಳೆದುಹೋದಮೇಲೆ ಅದು ಗೊತ್ತಾಗುವುದು. ಆಗಲಲ್ಲವೆ—"ಅಯ್ಯೋ! ಅದನ್ನು ಒಳ್ಳೆಯ ಪ್ರಯೋಜನದಲ್ಲಿ ಕಳೆದು ಉಳಿಸಿ ಕೊಳ್ಳುವುದಕ್ಕೆ ಸ್ವಲ್ಪವೂ ಶ್ರಮ ತೆಗೆದುಕೊಳ್ಳಲಿಲ್ಲವಲ್ಲಾ!" ಎಂದು ದುಃಖವುಂಟಾಗುವುದು ? ಹೀಗಿರುವುದರಿಂದ ಕಾಲವು ಸ್ವಲ್ಪವೂ ನಿರರ್ಥಕವಾಗಿ ಕಳೆದುಹೋಗದಂತೆ ನೋಡಿಕೊಳ್ಳುತ್ತಿರಬೇಕು. ಅಕ್ಕಸಾಲೆಯು ಚಿನ್ನದಲ್ಲಿ ದೂಳಷ್ಟನ್ನೂ ಸಹ ಪೋಲುಮಾಡದೆ ಎಷ್ಟು ಜಾಗರೂಕನಾಗಿ ನೋಡಿಕೊಳ್ಳುತ್ತಾನೆಯೋ ಅದಕ್ಕಿಂತ ಹೆಚ್ಚಾಗಿ ಕಾಲದಲ್ಲಿ ಅತ್ಯಲ್ಪ ಭಾಗವನ್ನೂ ಕೂಡ ವ್ಯರ್ಥವಾಗಿ ನಾಶಮಾಡದಂತೆ ನೋಡಿಕೊಳ್ಳುವುದರಲ್ಲಿ ಜಾಗರೂಕರಾಗಿರಬೇಕು. ಅತ್ಯಲ್ಪವಾದ ಪದಾರ್ಥವನ್ನು ಕಳೆದುಕೊಂಡರೂ ಕೂಡ ಬಹಳವಾಗಿ ಶೋಕಿಸುವೆವು. ಹೀಗಿರುವಲ್ಲಿ ಇಷ್ಟೊಂದು ಅಮೂಲ್ಯವಾದ, ಹಿಂತಿರುಗಿ ಬಾರದ ಕಾಲವನ್ನು ಕಳೆದುಕೊಂಡರೆ ಸ್ವಲ್ಪವೂ ದುಃಖಪಡದೆ ಇರುವುದು ಅತ್ಯಾಶ್ಚರ್ಯವಲ್ಲವೆ ? ನಮ್ಮ ಆಯುಸ್ಸೆಂಬುದೇನು ? ಕಾಲಸಮುದಾಯವಲ್ಲವೆ? ಹೀಗಿರಲು ಕಾಲವನ್ನು ವ್ಯರ್ಥವಾಗಿ ಕಳೆವುದು ಒಂದು ವಿಧವಾದ ಆತ್ಮಹತ್ಯವಲ್ಲವೆ ? ಆದುದರಿಂದ ಕಾಲಕ್ಕೆ ಸರಿಯಾದ ಉಪಯೋಗವನ್ನು ಕಲ್ಪಿಸುವುದೇ ನಮ್ಮ ಮುಖ್ಯ

ವಾದ ಕೆಲಸ. ಅದನ್ನು ಸರಿಯಾಗಿ ಉಪಯೋಗಿಸಿದಹೊರತು ನಮಗೆ ಗೌರವವೂ, ಐಶ್ವರ್ಯವೂ, ಸುಖವೂ, ಯಶಸ್ಸೂ ಎಂದಿಗೂ ಉಂಟಾಗಲಾರವು. ಆವನು ಕಾಲವನ್ನು ವ್ಯರ್ಥವಾಗಿ ಕಳೆಯದೆ ಸನ್ಮಾರ್ಗದಲ್ಲಿ ಉಪಯೋಗಿಸಿ ತನ್ನ ಕಾಲವು ವ್ಯರ್ಥವಾಗಲಿಲ್ಲವೆಂದು ಧೈರ್ಯವಾಗಿ ಹೇಳಲಾಪನೋ, ಅವನೇ ಸುಖಿ, ಅವನೇ ವಿವೇಕಿ, ಅವನೇ ಧನ್ಯನು.

ಕಾಲವನ್ನು ಸದ್ವಿನಿಯೋಗಮಾಡದಿದ್ದರೆ ಉಂಟಾಗುವ ನಷ್ಟವನ್ನು "ಕಾಲಃ ಪಿಬತಿ ತದ್ರಸಂ" (ಕಾಲವು ಅದರ ರಸವನ್ನೇ ಹೀರಿ ಬಿಡುತ್ತದೆ.) ಎಂಬ ಕವಿವಾಕ್ಯವೇ ಸ್ಪಷ್ಟಪಡಿಸುತ್ತದೆ.

" ಕಾಲ ಹರಿಣದ ಕಾಲ ದನಿಯನು |
ಕೇಳದವರಾರುಂಟು ಮರುಳೇ |
ನಾಳೆಯೆಂಬೀ ಬರಿಯ ಬಯಲಿಗೆ ಮನವ ಮಾರದಿರು ||
ಆಳು ನಿನ್ನೀ ದಿವಸವನು ಕ |
ಟ್ಟಾಳುತನದಲಿ ಕೂಡು ನಿನ್ನಯ |
ಬಾಳಕೆಗೆ ಸಫಲತೆಯನರಿಯದೆ ಬೀಳುಗೆಡಹದಿರು || " * ||

" ಕಾಲವೆಂಬೀಕಾಡ ಕುದುರೆಯ |
ಕಾಲ ವೇಗವ ಕಂಡರುಂಟೇ |
ನಾಳನೋಟಕ್ಕೆಡೆಗುಡದೆ ಕಡಿವಾಳದೊಳ್ ಬಿಗಿದು ||
ಕೀಲಿಸುತ ನೀನಾಳದನು ಕ |
ಟ್ಟಾಳುತನದಲಿ ಸುಮ್ಮನಿರ್ದೊಡೆ |
ಗಾಳಿಯೋಟದೊಳೋಡಿ ನಿನ್ನನು ಹಿಂದೆ ಬಿಸುಡುವುದು ||" * ||

# ೬. "ಪುಸ್ತಕ."

ಲೇಖಿನಿಯೂ ಅಚ್ಚೂ ಪ್ರಪಂಚಕ್ಕೆ ಮಾಡಿರುವ ಉಪಕಾರವನ್ನು ಎಷ್ಟೆಷ್ಟು ವರ್ಣಿಸಿದರೂ ಸ್ವಲ್ಪವೆ. ಮನಸ್ಸಿನಿಂದಲೇ ಆಲೋಚಿಸುವು ದಕ್ಕೆ ಆಗದೆ ಇರುವಾಗ, ಅವುಗಳ ಮಹಿಮೆಯನ್ನು ನಾಲಗೆಯಿಂದ ಹೇಳು ವುದಕ್ಕೆ ಆದೀತೆ !

—ಲೇಖಿನಿ—

ಅನೇಕಕಾಲ ಶ್ರಮಪಟ್ಟು ಕಂಡು ಹಿಡಿದ ವಿಷಯವನ್ನು ನಾಲ್ಕಾರು ಜನ ಶಿಷ್ಯರಿಗೆ ಮಹಾತ್ಮರು ಹೇಳಹೋದರು. ಅದು ಅವರೊಡನೆಯೆ ಅಲ್ಪಕಾಲದಲ್ಲಿಯೇ ಹೋಗಿಬಿಡುವುದಾಗಿದ್ದಿತು. ಆಗಲಲ್ಲವೆ ಲೇಖಿನಿಯು ತನ್ನ ಸಾಮರ್ಥ್ಯವನ್ನು ಸ್ಥಾಪಿಸಿತು. ನಾಲ್ಕಾರು ಜನರಿಗೆ ತಿಳಿದ ಅಂಶವು ಸಾವಿರಾರು ಜನರಿಗೆ ತಿಳಿವ ಹಾಗಾಯಿತು. ಅಲ್ಪಕಾಲದಲ್ಲಿ ನಾಶವಾಗುವುದು ತಪ್ಪಿ ಚಂದ್ರಸೂರ್ಯರಿರುವ ತನಕ ನೆಲೆಗೊಳ್ಳುವ ಹಾಗಾಯಿತು. ಭಾರತ ಯುದ್ಧದಲ್ಲಿ ಉಭಯಸೇನೆಯ ಮಧ್ಯದಲ್ಲಿ ಅರ್ಜುನನೊಬ್ಬನಿಗೆ ಮಾತ್ರವೆ ಶ್ರೀಕೃಷ್ಣನು ಕೃಪೆಮಾಡಿ ದಯಪಾಲಿಸಿದ 'ಭಗವದ್ಗೀತೆ' ಎಂಬ ದಿವ್ಯರತ್ನ ವನ್ನು ವೇದವ್ಯಾಸರ ಲೇಖಿನಿಯಲ್ಲವೆ ಆ ಕಾಲದಲ್ಲಿದ್ದವರಿಗೆ ಮಾತ್ರವಲ್ಲದೆ ಈ ಕಾಲದಲ್ಲಿರುವ ನಮ್ಮಂಥ ಸಾಮಾನ್ಯಜನರಿಗೂ ಕೈಸೇರುವಹಾಗೆ ಮಾ ಡಿತು ? ಆ ಲೇಖಿನಿಯು ಇಲ್ಲದಿದ್ದರೆ ಆ ರತ್ನವನ್ನು ಸಂಪಾದಿಸುವುದಕ್ಕೆ ನಾವು ಏನೇನು ಮಾಡಿದ್ದರೆ ತಾನೇ ಆಗುತ್ತಿದ್ದಿತು ! ಆಗ ಯುದ್ಧರಂಗದಲ್ಲಿ ಹತ್ತಿರ ನಿಂತಿದ್ದವರಿಗೂ ಕೂಡ ಸಿಕ್ಕದೆ ಹೋದ ಆ ರತ್ನವು ನಮಗೆ ಸಿಕ್ಕಿ ರುವುದರಿಂದ ನಾವೆಷ್ಟು ಧನ್ಯರೋ !

ಒಂದು ವಿಷಯವನ್ನು ಒಬ್ಬನಲ್ಲಿ ತಿಳಿವುದು ಎಷ್ಟೋ ಕಷ್ಟ. ಅನೇಕಾವೃತ್ತಿ ಅವನ ಬಳಿಗೆ ಹೋಗಬೇಕು ; ಅವನ ಸಮಯವನ್ನು ನಿರೀ

ಷ್ಟಿಸಬೇಕು; ಉಪಸರ್ಪಣೆ ಮಾಡಿ ಅವನ ಪ್ರೀತಿಯನ್ನು ಸಂಪಾದಿಸ ಬೇಕು; ಅವನ ಮನಸ್ಸು ಪ್ರಸನ್ನವಾಗಿದೆಯೋ ಇಲ್ಲವೋ ನೋಡಬೇಕು. ಇಷ್ಟು ಮಾಡಿಯೂ ಕೆಲವುವೇಳೆ ಅಸಾಧ್ಯವಾಗಿಯೇ ಹೋಗುವುದು. ಕೋಪಿಷ್ಠನಾಗಿದ್ದರೆ ಅವನ ಹತ್ತಿರ ಹೋಗುವುದಕ್ಕೆ ಅಂಜುವೆವು. ದುಷ್ಟ ನಾಗಿದ್ದರೆ "ಉಪಕಾರಕ್ಕೆ ಹೋಗಿ ಅಪಕಾರ ತಂದಂತೆ" ಅವನ ಸಹ ವಾಸದಿಂದ ಕೆಟ್ಟವರಾಗುವುದೂ ಉಂಟು. ಅವನು ತನ್ನ ಅಭಿಪ್ರಾಯ ಗಳನ್ನೆಲ್ಲಾ ಬರೆದು ಇಟ್ಟಿದುದೆ ಆದರೆ ಅವನ ಆ ಲೇಖಿನಿಯು ನಮ್ಮ ಈ ಕಷ್ಟವನ್ನೆಲ್ಲಾ ಹೋಗಲಾಡಿಸಿ ಅವನಲ್ಲಿರುವ ಅಮೂಲ್ಯವಾದ ರತ್ನಗ ಳನ್ನು ಸುಲಭವಾಗಿ ನಮ್ಮ ಕೈವಶ ಮಾಡುತ್ತಿದ್ದಿತಲ್ಲವೆ ?

ಲೋಕಕ್ಕೆ ಹಿತವಮಾಡಬೇಕೆಂಬ ಆಶೆಯುಳ್ಳ ಮಹಾಶಯರಿಗೆ ಒಂದು ದೊಡ್ಡ ಚಿಂತೆಯಿದ್ದಿತು. ಲೇಖಿನಿಯು ಅವರಿಗೆ ಬೆಂಬಲವಾಗಿ ನಿಂತು ಅವರ ಚಿಂತೆಯನ್ನು ಹೋಗಲಾಡಿಸಿ ಹೀಗೆ ಧೈರ್ಯ ಕೊಡುತ್ತಿದ್ದಿತು. ಅವ ರನ್ನು ಕುರಿತು—" ಹೆದರಬೇಡಿ, ಮಿಂಚಿನಂತೆ ನಿಮ್ಮ ಶ್ರಮವು ಅಸ್ಥಿರವಾಗಿ ಹೋಗಿಬಿಡುವುದಿಲ್ಲ. ನೀವು ಬದುಕಿರುವಾಗಲೂ ನೀವು ಗತಿಸಿದ ಮೇಲೆಯೂ ಏಕರೀತಿಯಾಗಿ ನಿಮ್ಮ ಮಾತನ್ನು ಕೇಳಿ ಪ್ರಪಂಚವೇ ಆಶ್ಚರ್ಯದಿಂದ ಕುಣಿಯುತ್ತಿರುವಹಾಗೆ ಮಾಡುವೆನು." ಎಂದು ಧೈರ್ಯಹೇಳಿತು.

—ಅಚ್ಚು—

ಅಚ್ಚಿನ ಮಹಿಮೆ ಎಷ್ಟಿರುವುದು ನೋಡೋಣ ?

ಎಂಥವರಿಗಾದರೂ ಕೊರತೆ ಬರುವುದುಂಟು. ಇಷ್ಟು ಸಾಮರ್ಥ್ಯವಿದ್ದರೂ ಲೇಖಿನಿಗೂ ಒಂದು ಕೊರತೆಯುಂಟು. "ಅಯ್ಯೋ ! ನನ್ನ * ಜೀವಾಶ್ರಯ ವನ್ನೇ ಮುಟ್ಟಿದರೆ ಸಾಯುವ ಗೆದ್ದಲು ಹುಳುವೂ ತಿಂದುಬಿಡುವುದು ; ಬಡಿದರೆ ಚದುರುವ ನೀರೂ ತಾರಿಸಿಬಿಡುವುದು; ಉರುಬಿದರೆ ನಂದುವ

* ಗ್ರಂಥಕರ್ತನು ಬರೆದು ಇಟ್ಟಿದ್ದ ಮೊದಲು ಪ್ರತಿ.

387/ಒ
ವೇದಾದ್ರಿ



VEDADRI

ದೀಪವೂ ಸುಟ್ಟುಬಿಡುವುದು. ನಾನಿಷ್ಟು ಉಪಕಾರಿಯಾ... ...ನ್ನ ಬಾಳು ಇಷ್ಟೇ! ನನ್ನನ್ನು ಕಾಪಾಡುವರಿಲ್ಲ!" ಎಂದು ಗೋ... ...ನಿಯನ್ನು ನೋಡಿ ಪರಿತಾಪ ಪಟ್ಟು ಅಚ್ಚು "ಏಕೆ ಈ ಗೋಳು? ಇದೆಷ್ಟರ ಕೆಲಸ! ನನ್ನ ಸಹಾಯವನ್ನು ನೀನು ಎಂದಿಗೂ ಮರೆಯಲಾರೆ. ರಾಜನನ್ನು ಭಟರು ಕಾಪಾಡುವಂತೆ, ನಿನಗೆ * ಸದೃಶರಾದ ಹೊಸ ಹೊಸ ಭಟರನ್ನು ಸೃಷ್ಟಿಸಿ, ನಿನ್ನನ್ನು ಕಾಪಾಡುತ್ತಿರುವೆನು. ಒಬ್ಬ ಭಟನು ಸತ್ತರೆ ಅನೇಕ ಭಟರು ನಿನಗೆ ಬೆಂಬಲವಾಗಿ ನಿಂತೇ ಇರುವರು. ಈ ಭಟರಿಂದ ಪ್ರಪಂಚವೆಲ್ಲಾ ನಿನ್ನ ರಾಜ್ಯವಾಗಿ ಆಗುವುದು. ಅವರು ಜ್ಞಾನದ ಬೆಳಕು ಬೀಳುವ ಕಡೆಯಲ್ಲೆಲ್ಲಾ ನಿನ್ನ ಪ್ರಾಬಲ್ಯವನ್ನು ಹೊಗಳುತ್ತ ಬರುವರು. ನಿನ್ನ ಆಜ್ಞೆಗೆ ಎಲ್ಲಿಯೂ ತಡೆಯೇ ಇಲ್ಲದಂತೆ ಆಗುವದು!" ಎಂದು ಸಮಾಧಾನ ಪಡಿಸಿತು. ಹೀಗಿರಲು ಅಚ್ಚಿನ ಮಹಿಮೆಯನ್ನು ಎಷ್ಟು ಹೇಳಿದರೂ ತೀರುವುದಿಲ್ಲ.

ಪುಸ್ತಕ—ಪುಸ್ತಕ—ವೆಂಬುದೇನು ? ಲೇಖನಿ ಮತ್ತು ಅಚ್ಚು ಇವುಗಳ ಕೆಲಸವೇ ಅಲ್ಲವೆ? ಹೀಗಿರಲು ಪುಸ್ತಕದ ಸಾಮರ್ಥ್ಯವನ್ನು ಇನ್ನು ಎಷ್ಟು ಹೇಳಬಹುದು! ಹಿಂದೆ ಗತಿಸಿದ ಮಹಾತ್ಮರೊಡನೆ ಮಾತನಾಡಬೇಕೆಂದು ಆಶೆಪಟ್ಟರೆ ಆದೀತೆ? ಅವರ ಅಪರ ಶರೀರವಾದ ಪುಸ್ತಕಗಳಿದ್ದರೆ ಆಗದೆ ಏನು? ಮಾತನಾಡುವುದು ಮಾತ್ರವಲ್ಲದೆ ಸರ್ವದಾ ಅವರ ಜತೆಯಲ್ಲಿಯೂ ಇರಬಹುದು. ದೇವರಂತೆ ಸರ್ವದೇಶದಲ್ಲಿಯೂ ಸರ್ವಾವಸ್ಥೆಯಲ್ಲಿಯೂ ಇರುವುದಕ್ಕಾದೀತೆ? ಪುಸ್ತಕಗಳ ಸಹಾಯವೊಂದಿದ್ದರೆ ಆಗದೆ ಏನು? ಪುಸ್ತಕಗಳನ್ನು ಓದುವಾಗ— ವೀರರ ಜತೆಯಲ್ಲಿದ್ದುಕೊಂಡು ಅವರು ಮಾಡುವ ಯುದ್ಧವನ್ನು ನೋಡುವೆವು; ನಾವಿಕರೊಡನೆ ಸಮುದ್ರವನ್ನು ಪರೀಕ್ಷಿಸಿ ನೋಡುವೆವು; ಯಾತ್ರಿಕರೊಡನೆ ದೇಶಾಟನೆ ಮಾಡಿ

* ಮೂಲಪ್ರತಿಗೆ ಸದೃಶವಾದ ಅಚ್ಚುಹಾಕಿದ ಪುಸ್ತಕಗಳು.

ದೇಶದ ಸ್ಥಿತಿಯನ್ನು ತಿಳಿದುಕೊಳ್ಳುವೆವು; ಶಾಸ್ತ್ರಜ್ಞರೊಡನೆ ಪದಾರ್ಥಗಳ ಸ್ವರೂಪವನ್ನು ವಿವೇಚನೆ ಮಾಡಿ ತಿಳಿದುಕೊಳ್ಳುವೆವು. ದೊರೆಗಳೊಡನೆ ದೊರೆಗಳಾಗಿಯೂ, ಸೇವಕರೊಡನೆ ಸೇವಕರಾಗಿಯೂ, ವೀರರೊಡನೆ ವೀರರಾಗಿಯೂ, ಹೇಡಿಗಳೊಡನೆ ಹೇಡಿಗಳಾಗಿಯೂ, ಬುದ್ಧಿವಂತರೊಡನೆ ಬುದ್ಧಿವಂತರಾಗಿಯೂ, ಹೆಡ್ಡರೊಡನೆ ಹೆಡ್ಡರಾಗಿಯೂ ಏಕಕಾಲದಲ್ಲಿ ಇರಬೇಕೆಂದು ಇಷ್ಟಪಟ್ಟರೆ ಆದೀತೆ? ಪುಸ್ತಕದ ಸಹಾಯದಿಂದ ಆಗದುದನ್ನು ಆಗ ಮಾಡಬಲ್ಲೆವು. ಇದ್ದ ಕಡೆಯಲ್ಲಿಯೇ ಇದ್ದುಕೊಂಡು ಅನ್ಯದೇಶದಲ್ಲಿ ನಡೆವ ವ್ಯಾಪಾರಗಳನ್ನು ನೋಡಬಹುದು; ಅಳುವವರನ್ನು ನಗಿಸಬಹುದು, ನಗುವವರನ್ನು ಅಳಿಸಬಹುದು.

ಆದುದರಿಂದ ಪುಸ್ತಕಗಳ ಅನುಗ್ರಹವನ್ನು ಪಡೆದೆವಾದರೆ ನೋಡದ ನೋಟವನ್ನು ನೋಡುವ, ಕೇಳದ ಸಂಗತಿಯನ್ನು ಕೇಳುವ, ಸಾಮರ್ಥ್ಯವನ್ನು ಹೊಂದಿ ಎಲ್ಲಾ ಕಡೆಯಲ್ಲಿಯೂ ಇರಲಾಪೆವು.

## ೭. "ಸರಸ್ವತೀಭಂಡಾರ."

ಸರಸ್ವತೀ ಭಂಡಾರವು ಬಹು ದೊಡ್ಡ ವಿದ್ವದ್ಗೋಷ್ಠಿಯು. ಆವ ಕಡೆ ತಿರುಗಿದರೂ ಹಿಂದೆ ಗತಿಸಿದ ಮಹಾತ್ಮರನ್ನು ಪ್ರತ್ಯಕ್ಷವಾಗಿ ನೋಡುತ್ತೇವೆ. ಮಹಾತ್ಮರು ಸಕಲರಿಗೂ ಸರ್ವ ಕಾಲದಲ್ಲಿಯೂ ಸುಲಭರಾಗಿದ್ದುಕೊಂಡು, ಕೇಳಿದಾಗ ಸಹಾಯ ಮಾಡುವುದಕ್ಕೂ, ಬೇಡವಾದಾಗ ದೂರದಲ್ಲಿರುವುದಕ್ಕೂ, ತಮ್ಮ ಸದ್ಗುಣಗಳನ್ನು ಮಾತ್ರವೇ ತೋರ್ಪಡಿಸುವುದಕ್ಕೂ, ಅನುಕೂಲವಾದ ಪುಸ್ತಕವೆಂಬ ಶರೀರವನ್ನು ಹೊಂದಿ ನಮ್ಮ ಎದುರಿಗೆ ಸಿದ್ಧವಾಗಿ ನಿಂತಿರುವರು.

ಈ ಮಹನೀಯರು ಪಾರ್ಥಿವಶರೀರದಲ್ಲಿ ಈ ಪ್ರಪಂಚವನ್ನು ಅಲಂಕರಿಸುತಿದ್ದಾಗ ಇಷ್ಟು ಸುಲಭರಾಗಿ ಇದ್ದಿರಲಾರರು. ವ್ಯಾಸಾದಿ ಮಹರ್ಷಿಗಳ ಚರಿತ್ರೆಗಳನ್ನು ನೋಡಿದರೆ, ಅವರು ಕೇವಲ ಲೌಕಿಕರಿಗೆ ಅಗಮ್ಯರಾಗಿ ಊರನ್ನು ಬಿಟ್ಟು ಪುಣ್ಯಾಶ್ರಮಗಳಲ್ಲಿ ವಾಸವಾಗಿದ್ದಂತೆ ತಿಳಿಯಬರುತ್ತದೆ. ಒಂದುವೇಳೆ ನಗರದಲ್ಲಿ ವಾಸಮಾಡುತ್ತಿದ್ದರೂ ಕೂಡ ಸಾಮಾನ್ಯಜನಗಳಿಗೆ ಸುಲಭರಾಗಿದ್ದಂತೆ ಕಾಣಬರುವುದಿಲ್ಲ. ಧರ್ಮಶಾಸ್ತ್ರಗಳಲ್ಲಿ ಹೇಳುವ ಗುರುಶಿಷ್ಯ ಧರ್ಮವನ್ನು ವಿಚಾರಮಾಡಿದರೆ ಈ ಅಂಶವು ವ್ಯಕ್ತವಾಗುತ್ತದೆ. ಆದರೆ ಅದೇ ಮಹನೀಯರು ಗ್ರಂಥರೂಪದಲ್ಲಿ ವಾಙ್ಮಯವಾಗಿ ಅವತರಿಸಿದಾಗಲೋ ಎಂದರೆ—ಅವರ ಸೌಲಭ್ಯಾದಿಗುಣಗಳು ವಿಕಸಿತವಾಗಿ ಸರ್ವರನ್ನೂ ಆಕರ್ಷಿಸುತ್ತಿರುವುವು. ಈ ರೂಪದಲ್ಲಿ ನಮ್ಮಲ್ಲಿ ಎಷ್ಟೊಂದು ವಾತ್ಸಲ್ಯವನ್ನು ತೋರಿಸುವರು !

ಇವರು, ಮಕ್ಕಳುಗಳು ತಮ್ಮ ಹತ್ತಿರಕ್ಕೆ ಹೇಗಾದರೂ ಬಂದರೆ ಸಾಕು, ಎಂದು ನಮ್ಮ ಸಮಯವನ್ನೇ ಕಾದುಕೊಂಡು ಸಿದ್ಧವಾಗಿ ಕುಳಿತಿರುವರು. ಬಡಿದರೂ, ಒದೆದರೂ, ಹರಿದರೂ, ಎಸೆದರೂ ಕೋಪಿಸಿಕೊಳ್ಳುವುದೇ ಇಲ್ಲ. ಆದ ಮಾತ್ರಕ್ಕೆ ನಾವು ಅವರ ಸದ್ಗುಣವನ್ನು ದುರುಪಯೋಗಪಡಿಸಿದ ಹಾಗೆ ಮಾತ್ರ ಮಾಡಬಾರದು. ತಪ್ಪುಮಾಡಿದರೂ, ಎಷ್ಟುವೇಳೆ ಕೇಳಿ ಕಾಡಿದರೂ, ಸಿಟ್ಟುಮಾಡಿಕೊಳ್ಳದೆ, ತಿದ್ದುಪಾಟುಮಾಡಿದ ತಪ್ಪನ್ನು ಪದೇಪದೆ ಮಾಡುತ್ತಿದ್ದರೂ ಬೇಸರಗೊಳ್ಳದೆ, ಹಿತೋಕ್ತಿಗಳನ್ನೇ ಹೇಳುತ್ತಿರುವರು.

ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸುವ ಇವರ ರೀತಿಯು ವಿಜಾತೀಯವಾಗಿರುವುದು. ಬೆತ್ತ ಹಿಡಿಯದೆ ಪಾಠಹೇಳುವರು. ಇವರಲ್ಲಿ ಕೋಪವೇ ಇಲ್ಲ ; ಆಲಸ್ಯವೂ ಕಾಣಬರುವುದಿಲ್ಲ. ವಿಷಯಗಳನ್ನು ತಿಳಿಯಬೇಕೆಂದು ವಿನಯ

ಗೂಡಿ ಹತ್ತಿರಹೋದರೆ ಸಾಕು, ಅವ ರಹಸ್ಯವನ್ನೂ ಮರೆಮಾಚುವುದಿಲ್ಲ ; ನಮ್ಮ ಮೌಢ್ಯವನ್ನು ನೋಡಿ ಹಾಸ್ಯಮಾಡುವುದಿಲ್ಲ.

ಇವರಂಥ ಸ್ನೇಹಿತರು ಪ್ರಪಂಚದಲ್ಲಿ ದೊರೆಕುವುದಿಲ್ಲ. ನಮಗೆ ಈ ಸ್ನೇಹಿತರಲ್ಲಿ ಎಷ್ಟೊಂದು ಸಲಿಗೆ ಇರುವುದು ! ಇವರು ನಮ್ಮ ಹತ್ತಿರ ಬರುವುದಕ್ಕೂ, ನಮ್ಮನ್ನು ಬಿಟ್ಟು ಹೋಗುವುದಕ್ಕೂ ನಮ್ಮ ಇಷ್ಟವನ್ನೇ ಕಾಯುತ್ತಿರುವರು. ಮುಂದರಿಯದ ಪ್ರಾಯದ ಕೊಬ್ಬಿನಲ್ಲಿ ನಮ್ಮನ್ನು ತಿದ್ದಿ, ಬುದ್ಧಿಗಲಿಸುವರು ; ಶಕ್ತಿಗುಂದಿ ಬಡವಾಗಿ ಮಂಕುಗವಿದ ಮುಪ್ಪಿನಲ್ಲಿ ಧೈರ್ಯಗೊಟ್ಟು ನಮ್ಮನ್ನು ಪ್ರೋತ್ಸಾಹಿಸುವರು. ಹೊತ್ತು ಹೋಗದೆ ಒಬ್ಬರೇ ಸೋಮಾರಿಯಾಗಿದ್ದಾಗ ನಮಗೆ ಜತೆಗಾರರಾಗಿ ಇದ್ದುಕೊಂಡು ನಮ್ಮ ಕಾಲವು ವಿನೋದವಾಗಿ ಕಳೆದು ಹೋಗುವಹಾಗೆ ಮಾಡುವರು. ಪ್ರಾಪಂಚಿಕ ಕಷ್ಟಗಳಲ್ಲಿ ನೊಂದುನೊಂದು ಬೇಸತ್ತಿರುವಾಗ ಎದೆಗುಂದದೆ ಇರುವ ಹಾಗೂ, ಅರಿಷಡ್ವರ್ಗವನ್ನು ಜಯಿಸಿ ಶಾಂತರಾಗಿ ಇರುವಹಾಗೂ ಉಪದೇಶಿಸುವರು. ಇಹದಲ್ಲಿ ಸೌಖ್ಯವನ್ನೂ, ಪರದಲ್ಲಿ ಸದ್ಗತಿಯನ್ನೂ ಸಂಪಾದಿಸುವ ರೀತಿಯನ್ನು ಬೋಧಿಸುವರು. ಶಾಸ್ತ್ರಗಳ ದುರ್ಗಮವಾದ ಮಾರ್ಗವನ್ನು ಸುಗಮವಾಗಿ ಮಾಡುವರು.

ನಮ್ಮ ಪುಸ್ತಕ ಬಂಡಾರದ ಚಿಕ್ಕಮನೆಯಲ್ಲಿ ಪುಸ್ತಕಗಳನ್ನು ತೆರೆದುಕೊಂಡು ಸುಖಾಸನದಲ್ಲಿ ಕುಳಿತಿದ್ದರೂ ಕೂಡ ಪ್ರಪಂಚದ ಎಲ್ಲಾ ಕಡೆಯಲ್ಲಿಯೂ ಇರಬಹುದು. ಯಾತ್ರಿಕರು ನಮ್ಮನ್ನು ಪ್ರಪಂಚವನ್ನೆಲ್ಲಾ ಸುತ್ತಿಸಿ, ನಾವೇ ಹೋಗಿದ್ದರೆ ಎಷ್ಟೆಷ್ಟು ನೋಡುತ್ತಿದ್ದೆವೋ ಅದಕ್ಕಿಂತ ಹೆಚ್ಚಾದ ಸಂಗತಿಗಳನ್ನು ತೋರಿಸುವರು. ಜ್ಯೋತಿಷ್ಕರು ಆಕಾಶದಲ್ಲಿ ಜ್ಯೋತಿರ್ಮಂಡಲಗಳ ಹಾದಿಗಳಲ್ಲಿ ನಮ್ಮನ್ನು ತಿರುಗಿಸುವರು. ಕಾಳಿದಾಸನ "ಮೇಘದೂತ" ನೊಡನೆ ನಾವು ಅಂತರಿಕ್ಷಮಾರ್ಗದಲ್ಲಿಯೆ ರಾಮಗಿರಿಯಿಂದ ಕೈಲಾಸಕ್ಕೆ ಪ್ರಯಾಣ ಮಾಡುತ್ತೇವಲ್ಲವೆ?

ಚಂದ್ರಾಪೀಡನೊಡನೆ ಗಂಧರ್ವಯುಗ್ಮವನ್ನು ಬೆನ್ನಟ್ಟಿಕೊಂಡು ಅಚ್ಛೋದ ಸರಸ್ಸಿಗೆ ಹೋಗಿ, ಮಹಾಶ್ವೇತೆಯ ದರ್ಶನ ಮಾಡಿ, ಗಂಧರ್ವಲೋಕದಲ್ಲಿ ಕಾದಂಬರಿಯ ಸಲ್ಲಾಪಗಳನ್ನು ಕೇಳುತ್ತೇವಲ್ಲವೆ? ಪುರಾಣಗಳು ನಮ್ಮ ನ್ನು ಸೃಷ್ಟಿಕಾಲದ ಹಿಂದಕ್ಕೂ, ಪ್ರಳಯಕಾಲದ ಮುಂದಕ್ಕೂ, ಕರೆದು ಕೊಂಡು ಹೋಗುವುವು. ಮಹಾಪ್ರಳಯದಲ್ಲಿ ಮಾರ್ಕಂಡೇಯನೊಡನೆ ತೇಲುತ್ತ ಭಗವತ್ಸಾನ್ನಿಧ್ಯದಲ್ಲಿಯೇ ಇದ್ದುಕೊಂಡು ಅನಂತಕೋಟಿ ಬ್ರಹ್ಮಾಂಡ ಸೃಷ್ಟಿಯನ್ನು ಪ್ರತ್ಯಕ್ಷವಾಗಿ ನೋಡುತ್ತೇವಲ್ಲವೆ? ಈಶ್ವರ ಸೃಷ್ಟಿಯಲ್ಲಿಯೂ ರವಿ ಕಾಣದ ನೋಟಗಳನ್ನು ಕವಿಗಳು ಕಾಣಿಸುವರು. ಗುಣಾಢ್ಯನ "ಬೃಹತ್ಕಥಾಮಂಜರಿ" ಯೆಂಬ ಭೂತಗನ್ನಡಿಯಲ್ಲಿ ಪ್ರಪಂಚ ದಲ್ಲಿ ಎಲ್ಲಿಯೂ ದೊರಕದ ವಿಚಿತ್ರ ವಿಚಿತ್ರವಾದ ವ್ಯಾಪಾರಗಳನ್ನೆಲ್ಲಾ ನೋಡಿ ಆನಂದಪಡುತ್ತೇವಲ್ಲವೆ? ದುಃಖದಲ್ಲಿ ಮುಳುಗಿದ್ದಾಗ ನಮಗಿಂತ ಹೆಚ್ಚಾಗಿ ಕಷ್ಟಪಟ್ಟವರನೇಕರನ್ನು ತೋರಿಸಿ ನಮ್ಮ ದುಃಖವನ್ನು ತಗ್ಗಿ ಸುವರು. ಚಕ್ರವರ್ತಿಯಾದ ಹರಿಶ್ಚಂದ್ರನು ಒಬ್ಬ ಬಡಹಾರುವನಿಂದ ಪಟ್ಟ ಕಷ್ಟವನ್ನು ಕೇಳಿ ಆರಿಗೆ ತಾನೇ ಪಶ್ಚಾತ್ತಾಪ ಹುಟ್ಟುವುದಿಲ್ಲ? ಅತ್ಯಂತ ಸಂತೋಷ ಕಾಲದಲ್ಲಿ ವಿಚಿತ್ರವಾದ ಕಥೆಗಳನ್ನು ಹೇಳಿ ನಗಿಸಿ ನಮ್ಮ ಸಂತೋಷವನ್ನು ಹತ್ತುಪಾಲು ಹೆಚ್ಚಿಸುವರು. ಇಂಥ ಕಷ್ಟಕಾಲದಲ್ಲಿ ಹೇಗೆ ನಡೆದುಕೊಳ್ಳಬೇಕು? ಏನು ಮಾಡಿದರೆ ನಮ್ಮ ಕಷ್ಟವು ನಿವಾರ ಣವಾದೀತು?—ಎಂಬ ಆಲೋಚನೆಯಲ್ಲಿ ಇದ್ದರೆ, ನಮ್ಮ ಸ್ಥಿತಿಯಲ್ಲಿಯೇ ಇದ್ದವರನ್ನು ತೋರಿಸಿ, ಅವರು ಆ ಕಷ್ಟದಿಂದ ತಪ್ಪಿಸಿಕೊಳ್ಳುವುದಕ್ಕೆ ಮಾಡಿದ ಉಪಾಯವನ್ನೂ ಹೇಳಿಕೊಡುವರು. ನಾವು ಆರು? ಎಲ್ಲಿಂದ ಬಂದೆವು? ಮುಂದೆ ಏನಾಗುವೆವು?— ಎಂಬ ಆಲೋಚನೆಯಲ್ಲಿ ಇದ್ದರೆ ನಮ್ಮ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಟ್ಟು ನಮ್ಮ ಸ್ವರೂ ಪವನ್ನೂ ತಿಳಿಸುವರು. ಸಂಸಾರದಲ್ಲಿ ಗಂಡಹೆಂಡರಿಗೂ, ತಾಯಿಮಕ್ಕ

ಳಿಗೂ, ಪ್ರಭು ಪ್ರಜೆಗಳಿಗೂ ಕಲಹವುಂಟಾದ ಕಾಲದಲ್ಲಿ ಇವರುಗಳನ್ನು ಸಮಾಧಾನಪಡಿಸುವ ರೀತಿಯನ್ನು ಕಲಿಸುವರು.

ಇಲ್ಲಿ ಅತಿಸಮರ್ಥರಾದ ಯಾತ್ರಿಕರನ್ನೂ, ಜ್ಯೋತಿಷ್ಕರನ್ನೂ, ನೀತಿಜ್ಞರನ್ನೂ, ಶಾಸ್ತ್ರಜ್ಞರನ್ನೂ, ಮೀಮಾಂಸಕರನ್ನೂ, ತತ್ವದರ್ಶಿಗಳನ್ನೂ, ಕವಿಗಳನ್ನೂ ಸಾಕ್ಷಾತ್ತಾಗಿ ಎದುರುಗೊಳ್ಳಬಹುದು.

ಒಟ್ಟು ಈ ಮಹನೀಯರು ನಮ್ಮಿಂದ ಆವ ಪ್ರಯೋಜನವನ್ನೂ ಅಪೇಕ್ಷಿಸದೆ "ಪರೋಪಕಾರಾರ್ಥಮಿದಂ ಶರೀರಂ" ಎಂಬ ಗಾದೆಯ ಅರ್ಥವನ್ನು ಸಾರ್ಥಕಮಾಡಬೇಕೆಂದೇ ಪುಸ್ತಕರೂಪವಾದ ಶರೀರಗಳನ್ನೆತ್ತಿ ನಮ್ಮನ್ನೆಲ್ಲಾ ಅನುಗ್ರಹಿಸುತ್ತಿರುವರು.

ಪರೋಪಕಾರಿಗಳಾದ ಈ ಮಹನೀಯರ ಯಶಸ್ಸು ಕಾವ್ಯಗಳಲ್ಲಿ ಹೀಗೆ ಕಂಗೊಳಿಸುತ್ತಿರುವುದು :—

"ನುತಪೂರ್ವರಾಜಕೀರ್ತಿ ।
ಪ್ರತಿಬಿಂಬಂ ಶಬ್ದಮುಕುರದೊಳ್ ನೆಲೆಗೊಂಡಾ ॥
ಕ್ಷಿತಿಪಾಲರಳಿದೊಡೇಂ ಕಿಡ ।
ದತಿಶಯದಿಂ ಕೀರ್ತಿಬಿಂಬಮಾಕಲ್ಪಾಂತಂ ॥ ೧ ॥"

"ಅದುಮಿದುಮೆನ್ನದಾವುದುಮನೊರ್ಮೆಯೆ ನುಂಗುವ ಕಾಲರಾಕ್ಷಸಂ।
ಗದಿರದೆ ತಮ್ಮ ವಾಙ್ಮಯಶರೀರದೆ ನಿಂದು ಸಮಸ್ತಲೋಕಕಂ ॥
ಪದೆದು ಹಿತಾಹಿತಂಗಳರಮಂ ತಿಳಿಪಂತಿರೆ ಪೇಳ್ದ ಕಲ್ಪಿಪಾ ।
ಸದಮಳಚಿತ್ತರಪ್ಪ ಕವಿವರ್ಯರೆ ವಂದ್ಯರಿಳಾತಳಾಗ್ರದೊಳ್ ॥ ೨ ॥" *

ಟೀಕು—೧. ಪ್ರತಿಬಿಂಬ—ಪ್ರತಿಫಲನ ; ಶಬ್ದಮುಕುರ—ವಾಙ್ಮಯವಾದ ಕನ್ನಡಿ, ಮಾತೆಂಬ ಕನ್ನಡಿ.

೨. ಅದಿರದೆ—ಹೆದರದೆ; ಪದೆದು—ಪ್ರೀತಿಸಿ.

“ ಕಡುಪಿಂ ಕೂರಾನೆ ಕಾಳ್ಕರ್ಚಡವಿ ಬರಸಿಡಿಲ್ ಬಳ್ಳಿಮಿಂಚೆಂಬಿವೆಲ್ಲಂ |
ಡೆಗುಂ ನೋಳ್ಪರ್ಗೆ ಮೇಣುಬ್ಬೆಗದೊದವನವೇ ಮತ್ತಮೊಳ್ಗಬ್ಬದೊಳ್ ಬಂ ||
ದೊಡನೊಳ್ಪಂ ಪೆತ್ತು ಮಾಳ್ಕುಂ ಸಹೃದಯಹೃದಯಾಹ್ಲಾದಮಂ ನಾಡೆಯುಂ ||
ತಾದೊಡನಳ್ಕೇಂ ಕಬ್ಬಿಗರ್ ತಾಮಘಟಿತಘಟನಾನೂತನಬ್ರಹ್ಮರಲ್ತೇ [|| ೩ ||

“ ಬಗೆದುದನೊಗೆದಂತೆ ಮಗು |
ಳ್ದೊಗೆಯಿಸುಗುಂ ಪೆರತನೊಂದನೊಗೆಯಿಸನಜನುಂ ||
ವಿಗಡರ್ ಕಬ್ಬಿಗರವನಿಂ |
ದೊಗೆಯಿಸುವರ್ ಬಗೆಗೆ ಬಂದುದೆಲ್ಲಮನನುವಂ ! || ೪ || ”

“ ಕಟ್ಟುಗೆ ಕಟ್ಟಿದಿರ್ಕೆ ಕಡಲಂ ಕಪಿಸಂತತಿ ರಾಮನಕ್ರಮಂ |
ಮುಟ್ಟುಗೆ ಮುಟ್ಟಿದಿರ್ಕೆ ಮುಗಿಲಂ ಘರನಂ ನರನಿಕ್ಕಿ ಗಂಟಲಂ ||
ಮೆಟ್ಟುಗೆ ಮೆಟ್ಟಿದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್ |
ಮುಟ್ಟಿದರಿಕ್ಕಿ ಮೆಟ್ಟಿದರಿದೇನಳವಗ್ಗಳಮೋ ಕವೀಂದ್ರರಾ || ೫ ||

ಹೀಗಿರಲು, “ ಪುಸ್ತಕಭಂಡಾರವು ಮನೆಯೆಂಬ ದೇಹಕ್ಕೆ ನಿಜವಾಗಿಯೂ ಪ್ರಾಣವೇ ಸರಿ ” ಎಂಬ ಒಬ್ಬ ಅನುಭವಶಾಲಿಯ ಮಾತು ಎಷ್ಟು ಶ್ಲಾಘ್ಯವಾದುದೊ !

---

೩. ಕಡುಪು — ಕ್ರೌರ್ಯ; ಉಬ್ಬೆಗ — ದ್ಭ. ಉದ್ವೇಗ, ಭಯಸಂಭ್ರಮ; ಅಳ್ಕೇಂ — ಹೆದರಿಕೆಯೇನು ?

೪ ಬಗೆದುದಂ—ಸೃಷ್ಟಿಸಿದುದನ್ನು; ಒಗೆಯಿಸಂ ಹುಟ್ಟಿಸಲಾರನು.

೫. ಮುಗಿಲ್—ಮೇಘ; ಅಳವು—ಸಾಮರ್ಥ್ಯ.

# V. "ಪುಸ್ತಕಗಳನ್ನು ಉಪಯೋಗಿಸುವ ಕ್ರಮ."

ಬುದ್ಧಿವಿಕಾಸವೇ ಓದುವುದಕ್ಕೆ ಪ್ರಯೋಜನವು. ಬುದ್ಧಿವಿಕಾಸವು ಉತ್ತಮವಾದ ಕೆಲವು ಪುಸ್ತಕಗಳನ್ನು ಮಾತ್ರ ಚೆನ್ನಾಗಿ ಓದುವುದರಿಂದ ಉಂಟಾಗುವಷ್ಟು ಅನೇಕ ಪುಸ್ತಕಗಳನ್ನು ಅನಾದರಣೆಯಿಂದ ಓದುವುದರಿಂದ ಎಂದಿಗೂ ಉಂಟಾಗುವುದಿಲ್ಲ. ಶರೀರದಲ್ಲಿ ಶಾಖವು ಸಾಧಕದಿಂದ ಹುಟ್ಟುವಷ್ಟು ಬಟ್ಟೆಗಳ ಮೇಲೆ ಬಟ್ಟೆಗಳನ್ನು ಹಾಕಿಕೊಳ್ಳುವುದರಿಂದ ಹುಟ್ಟುತ್ತದೆಯೆ? ಶರೀರದ ಧರ್ಮವೂ, ಬುದ್ಧಿಯ ಧರ್ಮವೂ ಬಲುಮಟ್ಟಿಗೆ ಒಂದೇ ವಿಧವಾಗಿರುವುದು. ನಮ್ಮ ಆರೋಗ್ಯಕ್ಕೆ ತಕ್ಕ ಆಹಾರವು ಆವುದೊ ಆ ಆಹಾರವನ್ನೇ ತೆಗೆದುಕೊಳ್ಳಬೇಕು. ಹಾಗೆಯೇ ನಮ್ಮ ಬುದ್ಧಿವಿಕಾಸಕ್ಕೆ ಆವುದು ಸಾಧಕವೊ ಅಂಥ ಪುಸ್ತಕಗಳನ್ನೇ ಓದಬೇಕು.

ಆದರೆ ಕೆಲವರು ಎಷ್ಟು ಪುಸ್ತಕಗಳನ್ನು ಹೆಚ್ಚಾಗಿ ಓದಿದರೆ ಅಷ್ಟು ಒಳ್ಳೆಯದು ಎಂಬದಾಗಿ ಅಭಿಪ್ರಾಯಪಡುತ್ತಾರೆ. ಪ್ರಪಂಚದಲ್ಲಿರುವ ಪುಸ್ತಕಗಳೆಲ್ಲವನ್ನು ಓದುವುದಕ್ಕೆ ಸಾಧ್ಯವೆ? ಕಡೇಪಕ್ಷ ಒಂದು ಭಾಷೆಯಲ್ಲಿರುವ ಪುಸ್ತಕಗಳೆಲ್ಲವನ್ನಾದರೂ ಓದುವುದಕ್ಕಾದೀತೆ? ಅದೂ ಕೂಡ ಆಗುವುದಿಲ್ಲ. ನಮಗೆ ಆಯುಸ್ಸೂ ಶಕ್ತಿಯೂ ಈಗಿರುವುದಕ್ಕಿಂತ ಹತ್ತು ಪಾಲು ಹೆಚ್ಚಾಗಿದ್ದರೂ ಅಸಾಧ್ಯವೆ. ಒಂದು ವೇಳೆ ಒಬ್ಬನಿಗೆ ಶಕ್ತಿಯೂ ಕಾಲವೂ ಇದ್ದರೂ ಎಲ್ಲವನ್ನು ಓದುವುದರಿಂದ ಪ್ರಯೋಜನವೂ ಕಡಮೆ.

ಹಾಗಾದರೆ ಆವ ಪುಸ್ತಕಗಳನ್ನು ಓದಬೇಕು? ಪುಸ್ತಕಗಳಲ್ಲಿಯೂ ಕೂಡ ಇತರ ಪದಾರ್ಥಗಳಲ್ಲಿ ಇರುವಂತೆಯೆ ಒಳ್ಳೆಯದು ಕೆಟ್ಟದು ಎಂಬ ವಿಭಾಗ ಉಂಟು. ಒಳ್ಳೆಯ ಪುಸ್ತಕಗಳನ್ನು ಓದಬೇಕು; ಕೆಟ್ಟವನ್ನು

ಬಿಡಬೇಕು ಎಂಬುದನ್ನು ಹೇಳಬೇಕೊ? ಪುಸ್ತಕಗಳ ವಿಚಾರದಲ್ಲಿ ಒಬ್ಬ ಶಾಸ್ತ್ರಜ್ಞನು ಹೀಗೆ ಹೇಳಿರುವನು :—"ಪುಸ್ತಕಗಳಲ್ಲಿ ರುಚಿ ನೋಡ ತಕ್ಕವು ಕೆಲವು; ಒಟ್ಟಿಗೆ ನುಂಗಿ ಬಿಡತಕ್ಕವು ಕೆಲವು; ಚೆನ್ನಾಗಿ ಅಗಿದು ನುಂಗಿ ಜೀರ್ಣಿಸಿಕೊಳ್ಳತಕ್ಕವು ಕೆಲವು." ಈ ವಾಕ್ಯಕ್ಕೆ ತಾತ್ಪರ್ಯ ವನ್ನು ಅವನೇ ಈ ರೀತಿಯಲ್ಲಿ ಬರೆಯುತ್ತಾನೆ :—ಕೆಲವು ಪುಸ್ತಕಗಳನ್ನು ಅಲ್ಲಲ್ಲಿ ಅಲ್ಪಸ್ವಲ್ಪ ಓದಬೇಕು; ಕೆಲವನ್ನು ಆಮೂಲಾಗ್ರವಾಗಿ ಒಂದಾ ವೃತ್ತಿ ಓದಬೇಕು; ಮತ್ತೆ ಕೆಲವನ್ನು ಗಮನಕೊಟ್ಟು ಆಮೂಲಾಗ್ರ ವಾಗಿ ಓದಿ ಅಲ್ಲಿ ಹೇಳಿರುವ ಸಂಗತಿಗಳನ್ನು ಯಚ್ಚಯಾವಚ್ಚ ತಿಳಿಯು ಬೇಕು. ಎಂದರೆ—ಕೆಲವು ಕೆಟ್ಟ ಪುಸ್ತಕಗಳಲ್ಲಿ ಶ್ಲಾಘ್ಯವಾದ ಕೆಲವು ಅಭಿ ಪ್ರಾಯಗಳಿದ್ದರೂ, ಅವುಗಳು ಜುಗುಪ್ಸಾವಹವಾದ ಕೆಟ್ಟವಿಷಯಗಳ ಜತೆ ಯಲ್ಲಿ ಬೆರಸಿ ಹೇಳಿರುವುದರಿಂದ ಅಂಥ ಪುಸ್ತಕಗಳನ್ನು ಓದುವುದು ಕಳ್ಳ ಬದಿಯಲ್ಲಿ ಬೆಳೆದ ತಾವರೆ ಹೂವುಗಳಿಗಾಗಿ ಆ ಬದಿಯಲ್ಲಿ ಸಿಕ್ಕಿ ಪ್ರಾಣವನ್ನು ಕಳೆದುಕೊಳ್ಳುವಹಾಗೆ ಆಗುತ್ತದೆ; ಅಂಥ ಪುಸ್ತಕಗಳನ್ನು ಓದುವುದರಲ್ಲಿ ಕಳೆವ ಕಾಲವನ್ನು ಶ್ಲಾಘ್ಯವಾದ ಪುಸ್ತಕಗಳಲ್ಲಿ ಕಳೆವುದು ಒಳ್ಳೆಯದು. ಕೆಲವು ಪುಸ್ತಕಗಳಲ್ಲಿ ಒಂದು ಮೊರ ಹೊಟ್ಟಿನಲ್ಲಿ ಒಂದೆರಡು ಕಾಳು ಧಾನ್ಯವಿರುವಂತೆ ಎಲ್ಲೋ ಒಂದೆರಡು ಒಳ್ಳೆಯ ಅಭಿಪ್ರಾಯಗಳು ಅಡಗಿ ಕೊಂಡಿರುವುವು; ಅಂಥ ಪುಸ್ತಕಗಳನ್ನು ರುಚಿನೋಡಿ ಬಿಡಬೇಕಲ್ಲದೆ ಆಮೂಲಾಗ್ರವಾಗಿ ಓದಿ ಶ್ರಮಪಡಬಾರದು. ಇನ್ನು ಕೆಲವು ಪುಸ್ತಕಗಳಲ್ಲಿ ವಿಷಯಗಳು ಉತ್ತಮವಾದರೂ ಆದಿಭಾಗದಲ್ಲಿ ಔಷಧಿಗಳಂತೆ ಅರುಚಿಕರ ವಾಗಿ ತೋರಿಬರುವುವು; ಅವುಗಳನ್ನು ಬಲಾತ್ಕಾರದಿಂದಲಾದರೂ ನುಂಗಿ ಆರೋಗ್ಯವನ್ನು ಸಂಪಾದಿಸಿಕೊಳ್ಳುವುದು ಆವಶ್ಯಕ. ಇನ್ನು ಕೆಲವು ಪುಸ್ತ ಕಗಳು ಹಿಟ್ಟಿನಹಾಗೆ ರುಚಿಯಾಗಿಲ್ಲದಿದ್ದರೂ ನಮಗೆ ಧಾರಕವಾಗಿರುವುವು; ಅವುಗಳನ್ನು ಆವಶ್ಯಕವಾಗಿ ಸೇವಿಸಿ ದಾರ್ಢ್ಯವನ್ನು ಸಂಪಾದಿಸಿಕೊಳ್ಳ

ಬೇಕು. ಹೀಗಿರುವುದರಿಂದ ಸಮಸ್ತ ಪುಸ್ತಕಗಳನ್ನು ಓದಿರಬೇಕು, ಅವುಗಳನ್ನು ಚೆನ್ನಾಗಿಯೂ ಓದಿರಬೇಕು ಎಂಬುದು ಅವಿಚಾರದ ಮಾತು.

ಹೀಗೆ ಎಲ್ಲಾ ಪುಸ್ತಕಗಳನ್ನು ಓದಕೂಡದ ಪಕ್ಷಕ್ಕೆ ಒಂದೇ ಶಾಸ್ತ್ರವನ್ನು ಓದಿ ಅದರಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಸಂಪಾದಿಸಿಕೊಂಡರೆ ಸಾಕೆಂದು ಕೆಲವರು ಅಭಿಪ್ರಾಯಪಡಬಹುದು. ಇದರಲ್ಲಿಯೂ ದೋಷವುಂಟು. ಹೀಗೆ ಒಂದೇ ಶಾಸ್ತ್ರದಲ್ಲಿ ನಿಂತರೆ "ಘೃತಾಧಾರಂ ಪಾತ್ರಂ ವಾ, ಪಾತ್ರಾಧಾರಂ ಘೃತಂ ವಾ" ಎಂಬ ಮೂಢತಾರ್ಕಿಕನ ಗತಿ ಬಂದು ಒದಗುವುದು. ಆದುದರಿಂದ ಒಂದು ಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನು ಹೊಂದಿ ಇತರ ಶಾಸ್ತ್ರಗಳಲ್ಲಿ ಸಾಮಾನ್ಯವಾಗಿ ತಿಳಿದಿರುವುದು ಉತ್ತಮ.

ಆವ ವಿಷಯದಲ್ಲಿ ವಿಶೇಷ ಜ್ಞಾನವು, ಆವುದರಲ್ಲಿ ಸಾಮಾನ್ಯ ಜ್ಞಾನವು ಇರಬೇಕು ಎಂಬುದನ್ನು ತಿಳಿಯಬೇಕು. "ಲೋಕೋ ಭಿನ್ನರುಚಿಃ" ಎಂಬಂತೆ ಒಬ್ಬೊಬ್ಬನಿಗೆ ಒಂದೊಂದು ಪದಾರ್ಥವು ರುಚಿಸುವಂತೆ ಒಬ್ಬೊಬ್ಬನ ಮನಸ್ಸಿಗೆ ಒಂದೊಂದು ವಿಷಯವು ರಂಜಿಸುವುದು. ತನಗೆ ರುಚಿ ಏತರಲ್ಲಿ ಹೆಚ್ಚಾಗಿರುತ್ತದೆಂದು ತಿಳಿಯಬರುತ್ತದೊ ಅಂಥವುಗಳನ್ನೇ ವಿಶೇಷವಾಗಿ ಓದಿ ಪೂರ್ಣ ಪಾಂಡಿತ್ಯವನ್ನು ಹೊಂದಬೇಕು. ಇಷ್ಟವಿಷಯದಲ್ಲಿ ಪಾಂಡಿತ್ಯವನ್ನು ಸಂಪಾದಿಸುವುದು ಬಹುಸುಲಭ; ಮನಸ್ಸೂ ಸಂತೋಷವಾಗಿ ಪ್ರವರ್ತಿಸುವುದು. ಇತರ ವಿಷಯಗಳು ಅಷ್ಟು ಇಷ್ಟವಾಗಿಲ್ಲದಿದ್ದರೂ ಅವುಗಳನ್ನು ಲೋಕವ್ಯವಹಾರಕ್ಕೆ ಬೇಕಾದಮಟ್ಟಿಗಾದರೂ ತಿಳಿದಿರಬೇಕು. ಹಾಗೆ ತಮ್ಮ ಜ್ಞಾನವು ಸರ್ವತೋಮುಖವಾಗಿಲ್ಲದಿದ್ದರೆ ಒಂದು ಸಭೆಯಲ್ಲಿ ನಾಲ್ಕಾರು ಜನಗಳ ಮಧ್ಯದಲ್ಲಿ ಕುಳಿತಿರುವಾಗಲೂ ಅಥವಾ ಒಬ್ಬಿಬ್ಬರೊಡನೆ ವಿನೋದವಾಗಿ ಮಾತಾಡುತ್ತಿರುವಾಗಲೂ ಬಹಳವೇಳೆ ಮೂಗರಹಾಗೆ ಇರಬೇಕಾಗಿ ಬಂದು ಇತರರ ಹಾಸ್ಯಕ್ಕೂ ಅನಾದರಣೆಗೂ ಪಾತ್ರರಾಗಿ ಆಗಿ ಹೋಗುವರು, ತನಗೆ ತಿಳಿದ ವಿಷಯವೇ ಎಲ್ಲರಿಗೂ ತಿಳಿದಿರು

ವುದು ; ತನಗೆ ಇಷ್ಟವಾದ ವಿಷಯವೇ ಇತರರಿಗೂ ಇಷ್ಟವಾಗಿರುವುದು ಎಂದು ತಿಳಿವುದು ಮೌಢ್ಯವೇ ಸರಿ. ಕೆಲವರು ತನ್ನ ಹಾಗೆಯೇ ಎಲ್ಲರೂ ಇರುವರೆಂದು ತಿಳಿದು ಅವರು ಕೇಳದಿದ್ದರೂ ತಮ್ಮ ಅಭಿಪ್ರಾಯವನ್ನು ಕೇಳುವಂತೆ ಬಲಾತ್ಕರಿಸುವರು. ಪ್ರಾಯಶಃ ಇಂಥವರ ಸಹವಾಸದಲ್ಲಿ ಜನರಿಗೆ ಅಸಹ್ಯವುಂಟಾಗದೆ ಇರದು. ಹೀಗಿರುವುದರಿಂದ ಅನೇಕ ವಿಷಯಗಳಲ್ಲಿ ಸಾಮಾನ್ಯ ಪರಿಚಯವಿದ್ದು ಸಹಜವಾದ ಒಂದು ವಿಷಯದಲ್ಲಿ ವಿಶೇಷ ಪರಿಚಯವಿದ್ದುದೇ ಆದರೆ ಎಲ್ಲಿಗೆ ಹೋದರೂ ತಾವೂ ಪ್ರಯೋಜನವನ್ನು ಹೊಂದಿ, ಇತರರಿಗೂ ಪ್ರಯೋಜನವನ್ನು ಉಂಟುಮಾಡಿ ಎಲ್ಲರ ಶ್ಲಾಘನೆಗೆ ಪಾತ್ರರಾಗಿ ಆಗುವರು.

ಈ ಉದ್ದೇಶಗಳನ್ನು ಪುಸ್ತಕಗಳಿಂದ ನೆರವೇರಿಸಿಕೊಳ್ಳಬೇಕಾದರೆ ಕೆಲವು ನಿಯಮಗಳನ್ನು ಅನುಸರಿಸಬೇಕೆಂದು ತಿಳಿದವರು ಹೇಳುವರು. ಆ ನಿಯಮಗಳಾವುವೆಂದರೆ :—

(೧) ಓದುವುದರಿಂದ ಜ್ಞಾನಸಾಮಗ್ರಿಯನ್ನುಂಟುಮಾಡಿಕೊಳ್ಳಬೇಕು.

(೨) ಓದಿದುದೆಲ್ಲವನ್ನು ಸ್ವಾಧೀನ ಮಾಡಿಕೊಳ್ಳಬೇಕಾದರೆ ಮನನ ಮಾಡಬೇಕು.

(೩) ಓದಿದುದೆಲ್ಲವನ್ನು ಚೆನ್ನಾಗಿ ಗ್ರಹಿಸಬೇಕಾದರೆ ಗಮನಕೊಡಬೇಕು.

(೪) ಓದಿದುದು ಜ್ಞಾಪಕದಲ್ಲಿದ್ದು ಸಕಾಲದಲ್ಲಿ ಉಪಯೋಗಕರವಾಗಬೇಕಾದರೆ ಪದೇಪದೆ ಓದಿದುದನ್ನೇ ಓದುತ್ತಿರಬೇಕು.

(೫) ಓದಿದುದನ್ನು ಗ್ರಹಿಸಿ ಅದು ಜೀರ್ಣಿಸಿ ಮನಸ್ಸನ್ನು ಪೋಷಿಸಿ ಕಾರ್ಯೋನ್ಮುಖವಾಗಿ ಆಗಬೇಕಾದರೆ ಓದಿದುದನ್ನು ಪದೇಪದೆ ಓದುವುದೂ ಅಲ್ಲದೆ ಮನನ ಮಾಡಿಯೂ ಪರಿಚಯ ಮಾಡುತ್ತಿರಬೇಕು.

## “ಸಂಭಾಷಣೆಯಲ್ಲಿ ಪರಿತ್ಯಜಿಸ ಬೇಕಾದ ದೋಷಗಳು.”

“ವಾಗದುಷ್ಟಾ ಚ ಸೂನೃತಾ” — ಸ್ಮೃತಿಃ.

“ದೃಷ್ಟ್ವಂ ಕಿಮಪಿ ಲೋಕೇಸ್ಮಿನ್ ನನಿದೋಷಂ ನ ನಿರ್ಗುಣಂ.” ಎಂಬ ಆರ್ಯಕ್ಷೇಮೀಶ್ವರ ಕವಿಯ ವಾಕ್ಯಕ್ಕೆ ಅನುಸಾರವಾಗಿ ಸಂಭಾಷಣೆಯಲ್ಲಿಯೂ ಅನೇಕ ದೋಷಗಳು ಕಲತೇ ಇರುವುವು. ಅವುಗಳನ್ನು ಚೆನ್ನಾಗಿ ಪರಿಶೀಲನೆ ಮಾಡಿ ತಿಳಿದು ಪರಿತ್ಯಜಿಸುವುದಕ್ಕೆ ಪ್ರಯತ್ನಿಸುವುದೇ ಬುದ್ಧಿವಂತಿಕೆ. ಸಂಭಾಷಣೆಯಲ್ಲಿ ಮಾತಾಡುವ ಕ್ರಮದಲ್ಲಿಯೂ, ಉಪಯೋಗಿಸುವ ಮಾತುಗಳಲ್ಲಿಯೂ, ತಿಳಿಯಪಡಿಸುವ ವಿಷಯಗಳಲ್ಲಿಯೂ ಅನೇಕ ಪ್ರಬಲವಾದ ದೋಷಗಳು ಸಂಭವಿಸುವುವು. ಅವುಗಳನ್ನು ಕುರಿತು ಸ್ವಲ್ಪ ಹಿತೋಕ್ತಿಗಳನ್ನು ಹೇಳುತ್ತೇನೆ.

ಸಂಭಾಷಣೆಯಲ್ಲಿ ನೀವು ಇತರರೊಡನೆ ಮಾತಾಡುವಾಗಲೂ, ಇತರರು ನಿಮ್ಮೊಡನೆ ಮಾತಾಡುವಾಗಲೂ, ನೀವು ಹೇಗೆ ನಡೆದುಕೊಳ್ಳಬೇಕು? ಎಂದರೆ :—

೧. “ಸ್ಮಿತಪೂರ್ವಾಭಿಭಾಷಣಂ” ಎಂಬಂತೆ ನಗುನಗುತ ಆದರದೊಡನೆ ಮಾತನ್ನು ಆಡಬೇಕು. ಎಂದಿಗೂ ಮುಖವನ್ನು ಜೋಲುಹಾಕಿಕೊಂಡೇ ಆಗಲಿ, ಹುಬ್ಬು ಗಂಟಿಕ್ಕಿಕೊಂಡೇ ಆಗಲಿ, ಗರ್ವವನ್ನು ತೋರಿಸಿಕೊಂಡೇ ಆಗಲೀ, ಜುಗುಪ್ಸೆಯನ್ನು ನಟಿಸಿಕೊಂಡೇ ಆಗಲಿ ಮಾತನ್ನು ನುಡಿಯಬಾರದು.

೨. ನಿಮ್ಮ ಮಾತು ಯಾವಾಗಲೂ ನಯವಾಗಿಯೂ, ಮೃದುವಾಗಿಯೂ ಇರಲಿ.

“ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ |
ಸರ್ವೇ ಭದ್ರಾಣಿ ಪಶ್ಯನ್ತು ಮಾ ಕಶ್ಚಿತ್ ದುಃಖಭಾಗ್ಭವೇತ ||”

(ಅರ್ಥ—ಎಲ್ಲರೂ ಸುಖಿಗಳಾಗಲಿ ! ಎಲ್ಲರೂ ರೋಗವಿಲ್ಲದವರಾಗಲಿ ! ಎಲ್ಲರೂ ಶುಭಗಳನ್ನು ನೋಡಲಿ ! ಯಾರಿಗೂ ದುಃಖಬರಬಾರದು ! ) ಎಂಬ ಹಿರಿಯರ ಆಶಾಸ್ತಿಯೇ ನಿಮ್ಮ ಮಾತಿಗೆ ವಿಧಾಯಕ ಸೂತ್ರವಾಗಲಿ.

೩. ಮಾತಾಡುತ್ತಿರುವಾಗ ಆಣೆಯಿಟ್ಟುಕೊಳ್ಳಬಾರದು; ಪ್ರಮಾಣ ಮಾಡಬೇಡಿ; ವಿತಂಡಾವಾದವನ್ನು ಬಿಟ್ಟುಬಿಡಿ. ಪ್ರೇಮ, ಅನಾದರ, ಸಂತೋಷ ಮೊದಲಾದುವನ್ನು ತಿಳಿಸುವುದಕ್ಕೆ ನಿರರ್ಥಕವಾದ ಕಟ್ಟು ಮಾತುಗಳನ್ನು ಉಪಯೋಗಿಸಬಾರದು.

೪. ಸಂಭಾಷಣೆಯಲ್ಲಿ ಅತ್ಯಾತುರವಿರಬಾರದು. ಒಬ್ಬನು ಮಾತನ್ನು ಆಡುತ್ತಿರುವಾಗ ಅವನಿಗೆ ಅಡ್ಡಿಯಾಗಿ ಮಾತಾಡುವುದಕ್ಕೆ ಹೋಗಬೇಡಿ. ಧಾರ್ಷ್ಟ್ಯವನ್ನು ತೋರಿಸಬಾರದು. ನಿಮ್ಮ ಮಾತೇ ಮಾತೆಂದು ತಿಳಿದು ನಿಮ್ಮ ಮಾತನ್ನು ಕೇಳುವಂತೆ ಯಾರನ್ನೂ ಬಲಾತ್ಕರಿಸ ಹೋಗಬೇಡಿ. ಗಟ್ಟಿಯಾಗಿ ಕೂಗಿ ಅರ್ಭಟಿಸುವುದು ಅನುಚಿತ. ಪ್ರತಿಪಕ್ಷದವನನ್ನು ಯುಕ್ತಿಯಿಂದಲೇ ಸಮಾಧಾನಗೊಳಿಸಬೇಕು. ದುರಾಗ್ರಹದಿಂದ ಕಣ್ಣನ್ನು ಅಗಲಿಸಿ, ಎದ್ದೆದ್ದು ನೆಲವನ್ನು ಅಪ್ಪಳಿಸಿ, ಗಟ್ಟಿಯಾಗಿ ಕೂಗಿ ಇದಿರಾಳಿಯ ಬಾಯನ್ನು ಮುಚ್ಚಿಸುವುದಕ್ಕೆ ಯತ್ನಿಸಬಾರದು.

" ಒಡಲೆಂಬ ಹುತ್ತಿಂಗೆ ನುಡಿವ ನಾಲಗೆ ಸರ್ಪ |
ಕಡುರೋಷವೆಂಬ ವಿಷ ಸೇರೆ ಸುಮತಿ ಗಾ ||
ರುಡಿಗನಂತಕ್ಕು. " ಎಂದು ಸರ್ವಜ್ಞನು ಹೇಳುತ್ತಾನೆ.

೫. ಯಾರಾದರು ದೊಡ್ಡವರೂ, ಹೊಸಬರೂ, ನಿಮಗಿಂತ ತಿಳಿದವರೂ ಇದ್ದರೆ ನಿಮ್ಮ ಮಾತು ಮಿತವಾಗಿಯೇ ಇರಲಿ. ಅಂಥವರು ಮಾತಾಡುವಾಗಲಂತೂ ನಿಮ್ಮ ಮಾತು ಅತ್ಯಲ್ಪವಾಗಿಯೇ ಇರಬೇಕು. ಅವರ ಮುಂದೆ ಸಲ್ಲದ ಮಾತುಗಳನ್ನು ಆಡಿ ಅಂಥವರ ಮನಸ್ಸಿಗೆ ಜುಗುಪ್ಸೆ ಹುಟ್ಟಿಸುವುದು ನೀತಿಯಲ್ಲ. ಅವರು ತಿಳಿಸಬೇಕೆಂದಿದ್ದ ಅಂಶಗಳನ್ನು ಬಂದು

ವೇಳೆ ತಿಳಿಸದೆ ಹೋದಾರು. ಅದರಿಂದ ನಿಮಗೆ ಬಹಳ ನಷ್ಟವುಂಟಾಗು ವುದು. ಯೋಗ್ಯರು ಬಂದರೆ ಅವರು ಮಾತಾಡುವುದಕ್ಕೆ ಅವಕಾಶವನ್ನು ಬದಗಿಸಿಕೊಡುವುದು ನಿಮ್ಮ ಅವಶ್ಯಕ ಕರ್ತವ್ಯವಾಗಿದೆ. ಅವರಲ್ಲಿರುವ ಅಮೂಲ್ಯವಾದ ಅನುಭವ, ಬುದ್ಧಿ, ವಿವೇಕಗಳನ್ನು ಸಂಪಾದಿಸಿ ಕೊಳ್ಳು ವುದಕ್ಕೆ ಇದೊಂದು ಸುಲಭೋಪಾಯ. ಹೀಗಿರಲು ಅವರ ಮುಂದೆ ತುಚ್ಛ ವಾದ, ಕೆಲಸಕ್ಕೆ ಬಾರದ, ವ್ಯರ್ಥಾಲಾಪಗಳನ್ನು ಮಾಡುವುದರ ಮೂಲಕ ಇಂಥ ಅನರ್ಘವಾದ ಅವಕಾಶವನ್ನು ಕಳೆದುಕೊಳ್ಳುವುದು ಮೌಢ್ಯವೇ ಸರಿ.

೬. ಸಂಭಾಷಣೆಯಲ್ಲಿ ತಮಗೆ ತಿಳಿಯದ ವಿಷಯವನ್ನು ಪ್ರಶ್ನೆ ಮಾಡಿದರೆ ಕೆಲವರಿಗೆ ಕೋಪ ಬರುವುದುಂಟು: ಆಗ ಕೋಪವನ್ನು ತಡೆ ದುಕೊಂಡು, ವೈಮನಸ್ಯವಿಲ್ಲದೆ ಎಚ್ಚರವಾಗಿದ್ದು, ಕಠಿನವಾದ ಮಾತುಗಳಿಗೆ ಅವಕಾಶ ಕೊಡದೆ, ನೋಡಿಕೊಳ್ಳಬೇಕು.

೭. ಹಾಸ್ಯಕ್ಕಾಗಲಿ, ಕೋಪಕ್ಕಾಗಲಿ, ಮರ್ಮಸ್ಪೃಕ್ಕಾದ ಮಾತು ಗಳನ್ನು ಹೇಳಿ ಇತರರಿಗೆ ತೇಜೋವಧೆಯನ್ನು ಮಾಡಬಾರದು.

೮. ಆತ್ಮಸ್ತುತಿಯು ಬಹು ಲಾಘವಕರವು. ಬಡಿವಾರ ಕೊಚ್ಚಿ ಕೊಳ್ಳುವುದು ಜನರಲ್ಲಿ ವಾಡಿಕೆಯಾದ ತಪ್ಪು. ಯಾವ ಮಾತೆತ್ತಿದರೂ ಅಲ್ಪರು "ನನ್ನ ಕಂಬಳಿ ಎಲ್ಲಿ ಹಾಸಲಿ" ಎಂದು ಮುಂದು ಬಂದು ತಮ್ಮ ಪ್ರತಿಷ್ಠೆಯನ್ನು ಕೊಚ್ಚಿಕೊಳ್ಳುವರು; ಅಲ್ಲದೆ ಪ್ರತಿಯೊಂದು ವಿಷಯಕ್ಕೂ ತಮ್ಮನ್ನೇ ಆದೇಶಪುರುಷರನ್ನಾಗಿ ಉದಾಹರಿಸಿ ಕೊಂಡು ಹೇಳತೊಡಗು ವರು. ನೀವು ಹಾಗೆ ಮಾತ್ರ ಮಾಡಬಾರದು. ನಿಮ್ಮ ವಾಕ್ಚಾತುರ್ಯವೂ ಗಾಂ ಭೀರ್ಯವೂ ನಿಮ್ಮ ಸಾಮರ್ಥ್ಯಕ್ಕೆ ಆದರ್ಶವಾಗಬೇಕು. ನಿಮ್ಮ ವಾಕ್ಯೆಂಬ ದಿವ್ಯಾಂಜನದಿಂದ ಇತರರ ಜ್ಞಾನಚಕ್ಷುಸ್ಸನ್ನು ಉನ್ಮೀಲನ ಮಾಡಿರಿ. ಪರೀಕ್ಷೆ ಯುವಿದ್ದ ಕಡೆಯಲ್ಲಿಯೂ ನಿಮ್ಮ ಪ್ರತಿಷ್ಠೆಯನ್ನು ನೀವೇ ಹೇಳಿಕೊಳ್ಳಬೇ ಕಾಗಿ ಬಂದರೆ ನಿಮ್ಮ ಖ್ಯಾತಿಯು ತಗ್ಗಿತೆಂಬುವುದಕ್ಕೆ ಇದೇ ಸೂಚನೆ.

೯. ಪರನಿಂದೆ ಎಂಬುದು ಎಂದಿಗೂ ಕೂಡದು. ದೋಷೋದ್ಘಾಟನೆಯು ನಿಮ್ಮ ಹೃದಯದಲ್ಲಿ ತುಂಬಿರುವ ಕಾಲುಷ್ಯಕ್ಕೆ ಕನ್ನಡಿಯಾಗುವುದು. ದೋಷಿಯನ್ನು ಕೂಡ ದೋಷಿಯೆಂದು ಹೇಳಬಾರದು. "ಕಂಡುದನ್ನು ಹೇಳಿದರೆ ಕೆಂಡದಂತೆ ಕೋಪ" ಬರುವುದು. ದೋಷವನ್ನು ನಿರೂಪಣೆಮಾಡಿದರೆ ದೋಷಿಯು ತನ್ನ ದೋಷವನ್ನು ಹೋಗಲಾಡಿಸಿಕೊಳ್ಳುವನೆಂದೂ, ಅದರಿಂದ ಇತರರಿಗೆ ಕ್ಷೇಮಲಾಭ ಉಂಟಾಗುವುದೆಂದೂ ನಿಸ್ಸಂದೇಹವಾಗಿ ತಿಳಿದುಬಂದ ಹೊರತು ದೋಷೋದ್ಘಾಟನೆ ಮಾಡಕೂಡದು.

೧೦. ಜನರಲ್ಲಿರುವ ಕುಂಟು ಕುರುಡು ತೊಕ್ಕಲು ಇವೇ ಮೊದಲಾದ ಸ್ವಾಭಾವಿಕ ನ್ಯೂನತೆಯನ್ನೆತ್ತಿ ಎಂದಿಗೂ ಆಡಬಾರದು. ಹಾಗೆ ಆಡಿ ಅಂಥವರ ಮನಸ್ಸನ್ನು ನೋಯಿಸುವುದು ತಪ್ಪು.

೧೧. ಎಲ್ಲರನ್ನೂ "ಅಪ್ಪಾ ಅಣ್ಣಾ" ಎಂದು ಕರೆಯಿರಿ. ಯಾರನ್ನೂ "ಎಲೋ ತಲೋ" ಎಂದು ಕರೆಯಬೇಡಿ. ಯಾರನ್ನೂ ಧಿಕ್ಕಾರಮಾಡಬೇಡಿ. ಯಾರ ಭಾಗ್ಯವನ್ನೂ ನೋಡಿ ಕರುಬಬೇಡಿ; ಹೀಗೆಲ್ಲಾದರೂ ಮಾಡಿರಿ, ಜೋಕೆ. ಎಲ್ಲರೂ ನಿನಗೆ ಬೇಕು, ಬೇಡದವರು ಒಬ್ಬರೂ ಇಲ್ಲ. "ಬೆಳ್ಳಿಯ ಮಾತು ಬಹುಮಂದಿ ಮಿತ್ರರನ್ನೂ, ಕಟ್ಟಮಾತು ಬಹುಮಂದಿ ಶತ್ರುಗಳನ್ನೂ ಒದಗಿಸಿಕೊಡುವುದು." ಎಂಬ ನಾಣ್ಣುಡಿಯು ನಿಜವಾದುದು.

೧೨. ಇತರರು ಆಡಿದ ತಪ್ಪನ್ನು ತಿದ್ದಿ ಹೇಳುವದಕ್ಕೆ ಹೋಗಬಾರದು. ತಪ್ಪು ತಿದ್ದಿ ಬುದ್ಧಿಯನ್ನು ಕಲಿಸುವುದು ದೊಡ್ಡವರ ಕೆಲಸ. ಕೆಲವು ವೇಳೆ ನೀವೂ ಬುದ್ಧಿಗಲಿಸಬೇಕಾಗಿ ಬರುವುದು. ಆಗ ಮಾತ್ರ "ಸ್ಮಾರಯೇ ನತುಶಿಕ್ಷಯೇ" (ಜ್ಞಾಪಿಸುತ್ತೇನೆ ನಿನ್ನನ್ನು ಶಿಕ್ಷಿಸುವುದಕ್ಕೆ ಬರಲಿಲ್ಲ) ಎಂದು ಸೀತಾದೇವಿಯು ಶ್ರೀರಾಮನಲ್ಲಿ ಹೇಳಿಕೊಂಡ ವಿಜ್ಞಾಪನೆಗೆ ಅನುಗುಣವಾಗಿ ನಿಮ್ಮ ನಡತೆಯು ಇರಬೇಕು.

೧೩. ನೀವು ಯಾರೊಡನೆ ಸಂಭಾಷಣ ಮಾಡುವಿರೋ, ಅವರ ಯೋಗ್ಯತೆಗೂ ಗೌರವಕ್ಕೂ ಉಚಿತವಾದ ಮಾತುಗಳನ್ನೇ ಉಪಯೋಗಿಸಿ, ಉಚಿತವಾದ ವಿಷಯಗಳನ್ನು ತಿಳಿಸುವ ಕ್ರಮದಲ್ಲಿ ಅರಿಕೆ ಮಾಡಬೇಕು, ಕೇಳುವ ಕ್ರಮದಲ್ಲಿ ಕೇಳಬೇಕು.

೧೪. ಸಮಯವರಿತು ಮಾತನ್ನು ಆಡಬೇಕು.

೧೫. ಎಂದೂ ಸುಳ್ಳನ್ನು ಹೇಳಬಾರದು. ನೀವು ಸುಳ್ಳೆಂದು ನಿಶ್ಚಯವಾಗಿ ನಂಬಿರುವ ಸಂಗತಿಗಳನ್ನು ಇತರರು ನಿಜವೆಂದು ಭ್ರಮಿಸುವ ಹಾಗೆಯೂ ಹೇಳಬಾರದು. ಸುಳ್ಳು ಹೇಳಬೇಕೆಂಬ ಇಷ್ಟವು ಮನಸ್ಸಿಗಿಲ್ಲದಿದ್ದರೂ, ನೀವು ಹೇಳುವುದನ್ನು ಇತರರು ಅನ್ಯಥಾ ತಿಳಿದುಕೊಳ್ಳಲಿ, ಎಂದು ವಿನೋದಕ್ಕೆ ಮಾತನ್ನು ತಿರಿಚು ಮುರಿಚು ಮಾಡಿ ಆಡಬೇಡಿ. ಎರಡರ್ಥವನ್ನು ಕೊಡುವ ಮಾತನ್ನು ಹೇಳಬಾರದು.

೧೬. "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕು." ಎಂಬ ಗಾದೆಗೆ ಅನುಸಾರವಾಗಿ, ಕಣ್ಣಾರೆ ಕಂಡು, ಕಿವಿಯಾರೆ ಕೇಳಿ ಇದು ಹೀಗೆ ಸೋ ಸರಿ ಎಂದು ಪರಾಮರ್ಶಿಸಿ ನಿರ್ಧರಿಸಿದ ಸಂಗತಿಯನ್ನು ಮಾತ್ರ ನಿಜವೆಂದು ಹೇಳಬೇಕೇ ಹೊರತು ಉಳಿದವುಗಳನ್ನು ನಿಜವೆಂದು ಹೇಳಬಾರದು.

೧೭. ನೀವು ಹೇಳಬೇಕೆಂದಿರುವ ವಿಷಯಗಳನ್ನು ಪ್ರಥಮತಃ ಮನಸ್ಸಿನಲ್ಲಿ ವಿಚಾರಮಾಡಿ, ಉಚಿತವೆಂದು ತೋರಿಬಂದರೆ, ಬಳಿಕ ಅವುಗಳನ್ನು ಹೇಳಬೇಕೇ ಹೊರತು, ದುಡಿಕಿ ಆಡಬಾರದು.

೧೮. ನೀವು ಉಪಯೋಗಿಸುವ ಶಬ್ದಗಳು ಅಭಿಪ್ರಾಯಾನುಗುಣವಾಗಿಯೂ, ಭಾವಗರ್ಭಿತವಾಗಿಯೂ, ಸಂಗತವಾಗಿಯೂ, ಅನ್ಯರ ಮನಸ್ಸಿಗೆ ನೋವು ಉಂಟುಮಾಡದ ಹಾಗೆಯೂ ಇರಬೇಕು.

೧೯. ಇತರರು ಮಾತನಾಡುತ್ತಿರುವಾಗ ಅವರು ಹೇಳುವುದನ್ನು ಚೆನ್ನಾಗಿ ಗಮನಕೊಟ್ಟು ಕೇಳಬೇಕು. ಹಾಗೆ ಕೇಳದಿದ್ದರೆ ಅವರು

ಹೇಳುವುದನ್ನು ತಿಳಿದುಕೊಂಡು ಅದಕ್ಕೆ ಸಮಂಜಸವಾದ ಪ್ರತ್ಯುತ್ತರವನ್ನು ಕೊಡಲಾರದೆ ಹೋಗುವಿರಿ.

೨೦. ಕೆಲವರಿಗೆ ವ್ಯವಸಾಯದಲ್ಲಿ, ಕೆಲವರಿಗೆ ವ್ಯಾಪಾರದಲ್ಲಿ, ಕೆಲವರಿಗೆ ಶಾಸ್ತ್ರವಿಚಾರದಲ್ಲಿ ಹೀಗೆಯೇ ಒಬ್ಬೊಬ್ಬರಿಗೆ ಒಂದೊಂದು ವಿಷಯದಲ್ಲಿ ವಿಶೇಷ ಪ್ರಾಜ್ಞತೆ ಇರುವುದು. ಯಾರಿಗೆ ಯಾವ ವಿಷಯದಲ್ಲಿ ವಿಶೇಷವಾಗಿ ತಿಳುವಳಿಕೆಯುಂಟೋ ಎಂಬುದನ್ನು ಸ್ವಲ್ಪ ಹೊತ್ತು ಸಂಭಾಷಣೆ ಮಾಡುವುದರ ಮೂಲಕ ತಿಳಿದುಕೊಂಡು ಅಂಥ ವಿಷಯಗಳನ್ನೇ ಅಂಥವರೊಡನೆ ಆಡಬೇಕು. ಈ ಮೂಲಕ ಅನೇಕ ವಿಷಯಗಳು ಸುಲಭಸಾಧ್ಯವಾಗುವುವು.

೨೧. ಕೆಲವರು "ಅಲ್ಪರ ಸಂಗ ಅಭಿಮಾನಭಂಗ." ಎಂಬ ಗಾದೆಯನ್ನು ಉದಾಹರಿಸಿ, ಅಲ್ಪರ ಕೂಡ ಸಂಭಾಷಣವನ್ನೂ ನಿಷೇಧಿಸುವರು. ಆದರೂ ಅಲ್ಪರ ಕೂಡೆ ಸಂಭಾಷಣ ಮಾಡುವ ಅವಕಾಶವು ಹಟಾತ್ತಾಗಿ ಒದಗಿದರೆ ಅದನ್ನು ಕಳೆದುಕೊಳ್ಳಬಾರದು. ಅಲ್ಪರೊಡನೆ ಸಂಭಾಷಣ ಮಾಡುವುದರಿಂದ ಅನೇಕ ಪ್ರಯೋಜನಗಳುಂಟು. ಮುಖ್ಯವಾಗಿ, ಅಲ್ಪರು ಮಾಡುವ ತಪ್ಪುಗಳನ್ನು ನೋಡುತ್ತಿದ್ದರೆ ನೀವು ಅವರಂತೆ ತಪ್ಪುಗಳನ್ನು ಮಾಡದಹಾಗೆ ನಿಮ್ಮ ನಡತೆಗಳನ್ನು ತಿದ್ದಿಕೊಳ್ಳಬಹುದು.

೨೨. ಕೋಪದಿಂದ ನಿಮ್ಮನ್ನು ಒಬ್ಬನು ಬಯ್ದರೆ ನೀವೂ ಕೋಪಮಾಡಿಕೊಳ್ಳದೆ ಅವನಿಗೆ ಸಮಾಧಾನದ ಮಾತುಗಳನ್ನೇ ಆಡುತ್ತಿರಬೇಕು. ಬಯ್ಗಳಿಗೆ ಒಳ್ಳೆಯ ಮಾತು ಅಥವಾ ಸುಮ್ಮಗಿರುವುದು ಒಳ್ಳೆಯ ಮದ್ದೆಂದು ಹಿರಿಯರು ಹೇಳುವರು. ಈ ಮದ್ದು ಕೋಪಿಸಿಕೊಂಡವನ ದುಸ್ಸ್ವಭಾವವನ್ನು ವಾಸಿಮಾಡಿ, ಅವನು ಬಯ್ದುದಕ್ಕೆ ಅವನೇ ಸಂಕಟಪಡುವಂತೆ ಮಾಡುತ್ತದೆ.

೨೩. ಕೇವಲ ತುಚ್ಛವಾದ ವಾಕ್ಯಗಳನ್ನು ಯಾವಾಗಲೂ ಅನುವಾದಮಾಡಬೇಡಿ.

ಹಾಸ್ಯಾರ್ಥವಾಗಿ ಹಿರಿಯರ ಶ್ರೇಷ್ಠವಾದ ಉಕ್ತಿಗಳನ್ನು ತರಬಾರದು. ಬಾಯಾರಿದವನು ಹೆಂಡವನ್ನು ಕುಡಿದು "ಆಪತ್ಕಾಲೇ ನಾಸ್ತಿ ಮರ್ಯಾದಾ" ಎಂದು ಹೇಳಿ, ಅದಕ್ಕೆ ಅಪಾರ್ಥವನ್ನು ಕಲ್ಪಿಸಿ ತನ್ನ ನೀಚಕೃತ್ಯವನ್ನು ಸಮರ್ಥನ ಮಾಡಿಕೊಳ್ಳುವಂತೆ, ಹಿರಿಯರ ಸದುಕ್ತಿಗಳಿಗೆ ಅಪಾರ್ಥವನ್ನು ಕಲ್ಪಿಸಬಾರದು.

ಸಂಭಾಷಣೆಯಲ್ಲಿ ನಿಮ್ಮ ಮಾತು ಹೇಗೆ ಇರಬೇಕೆಂದರೆ.—

ಈವಿಷಯದಲ್ಲಿ ಹೇಳಬೇಕಾದ ಅಭಿಪ್ರಾಯಗಳನ್ನೆಲ್ಲಾ ಸಂಗ್ರಹಿಸಿ ಒಬ್ಬ ಸಂಸ್ಕೃತ ಕವಿಯು ಪದ್ಯರೂಪವಾಗಿ ಹೀಗೆ ಬರೆದಿರುತ್ತಾನೆ:—

ಶ್ಲೋ॥ "ತಥ್ಯಂ ಪಥ್ಯಂ ಸಹೇತು ಪ್ರಿಯ ಮಿತ ಮೃದುಳಂ ಸಾರವದ್ದೈನ್ಯ ಹೀನಂ॥ ಸಾಭಿಪ್ರಾಯಂ ದುರಾಪಂ ಸವಿನಯಮಶಠಂ ಚಿತ್ರಮಲ್ಪಾಕ್ಷರಂ ಚ॥ ಬಹ್ವರ್ಥಂ ಕೋಪಶೂನ್ಯಂ ಸ್ಮಿತಯುತ ಘನದಾಕ್ಷಿಣ್ಯ ಸಂದೇಹಹೀನಂ। ವಾಕ್ಯಂ ಬ್ರೂಯಾದ್ರಸಜ್ಞಃ ಪರಿಷದಿ ಸಮಯೇ ಸಪ್ರಮೇಯಾಪ್ರಮತ್ತಂ"

[ಟೀಕು: ಲೋಕಸ್ವಭಾವವನ್ನು ತಿಳಿದವನು ಸತ್ಯವಾಗಿಯೂ, ಉತ್ತರೋತ್ತರ ಸುಖದಾಯಕವಾಗಿಯೂ, ಯುಕ್ತಿಯುಕ್ತವಾಗಿಯೂ, ಸದ್ಯಸ್ಸಂತೋಷಕರವಾಗಿಯೂ, ಮಿತವಾಗಿಯೂ, ಮೃದುವಾಗಿಯೂ, ಸಾರಭೂತವಾಗಿಯೂ, ದೈನ್ಯವಿಲ್ಲದೆಯೂ, ಅಭಿಪ್ರಾಯಗರ್ಭಿತವಾಗಿಯೂ, ಸುಲಭವಾಗಿ ಸಿಕ್ಕದೆ ಇರುವುದಾಗಿಯೂ, ವಿನಯದೊಡಗೂಡಿರುವುದಾಗಿಯೂ, ನಿಷ್ಠುರವಿಲ್ಲದೆಯೂ, ವಿಚಿತ್ರವಾಗಿಯೂ, ಸ್ವಲ್ಪವೇ ಅಕ್ಷರವುಳ್ಳುದಾದರೂ ಬಹ್ವರ್ಥವುಳ್ಳುದಾಗಿಯೂ, ಕೋಪದಿಂದ ಬಿಡಲ್ಪಟ್ಟುದಾಗಿಯೂ, ನಗೆಮೊಗದೊಡನೆ ಕೂಡಿದುದಾಗಿಯೂ, ಹೆಚ್ಚಾದ ದಾಕ್ಷಿಣ್ಯದೊಡನೆ ಸೇರಿದುದಾಗಿಯೂ, ಅರ್ಥಸಂಶಯವಿಲ್ಲದುದಾಗಿಯೂ, ವಿಷಯಗರ್ಭಿತವಾಗಿಯೂ, ಇರುವ ಮಾತನ್ನೇ ಸಭೆಯಲ್ಲಿ ಸಮಯವನ್ನರಿತು ಜಾಗರೂಕನಾಗಿ ಹೇಳುತ್ತಿರಬೇಕು.]

ಸಂಭಾಷಣೆಯರಿತವನಿಗೆ ಉಂಟಾಗುವ ನಾನಾವಿಧವಾದ ಪ್ರಯೋಜನಗಳನ್ನು ಕೆಳಗಣ ಗಾದೆಗಳು ತಿಳಿಯಪಡಿಸುವುವು.

'ನಾಲಗೆ ವಾಸಿಯಿದ್ದವನ ಮಾತು ಹಾಲಿಗಿಂತ ಹೆಚ್ಚು.'
'ಮಾತರಿತವನಿಗೆ ಜಗಳವಿಲ್ಲ, ಊಟವರಿತವಗೆ ರೋಗವಿಲ್ಲ.'
'ಮಾತು ಬಲ್ಲವ ಮಾಣಿಕವ ತಂದ, ಮಾತರಿಯದವ ಜಗಳವ ತಂದ.'
'ನಾಲಗೆ ಒಳ್ಳೆಯದಾದರೆ, ನಾಡೆಲ್ಲಾ ಒಳ್ಳೆಯದು.'
'ಗೌಡ, ಗೌಡ, ಊರು ಒಳ್ಳೆಯದೆ ಎಂದರೆ, ಬಾಯೊಳ್ಳೆಯದಾದರೆ ಊರೊಳ್ಳೆಯದು ಎಂದ.'

## ೧೦. "ಗ್ರಂಥವ್ಯಾಸಂಗ ಕ್ರಮ"

ವಿಷಯಜ್ಞಾನವೇ ಗ್ರಂಥವ್ಯಾಸಂಗಕ್ಕೆ ಮುಖ್ಯೋದ್ದೇಶವೆಂದು ಹೇಳುವರು. ಈ ಉದ್ದೇಶವನ್ನು ನೆರವೇರಿಸಿಕೊಳ್ಳುವುದಕ್ಕೆ ಯಾವ ಯಾವ ಗ್ರಂಥವನ್ನು ಹೇಗೆ ಹೇಗೆ ವ್ಯಾಸಂಗ ಮಾಡಬೇಕು? ಈ ವಿಚಾರದಲ್ಲಿ ಹಿರಿಯರು ಹೇಳಿರುವ ಹಿತೋಕ್ತಿಗಳನ್ನು ಹಿಂದಣ ೮ ನೆಯ ಅಂಕದ ಪ್ರಬಂಧದ ಕೊನೆಯಲ್ಲಿ ಕೊಟ್ಟಿರುತ್ತೇನೆ. ಅವುಗಳನ್ನು ಸ್ವಲ್ಪಮಟ್ಟಿಗೆ ಇಲ್ಲಿ ವಿಚಾರಿಸಬೇಕಾಗಿದೆ.

ಜ್ಞಾನಸಾಮಗ್ರಿಯನ್ನು ಉಂಟುಮಾಡಿಕೊಳ್ಳುವುದಕ್ಕೆ ಗ್ರಂಥಾವಲೋಕನವು ಒಂದು ಪ್ರಬಲವಾದ ಸಾಧನವಾಗಿರುವುದರಿಂದ, ಗ್ರಂಥಗಳನ್ನು ಪಠಿಸುವುದು ಅವಶ್ಯಕವು. ಗ್ರಂಥಸ್ಥವಾದ ವಿಷಯಗಳು ಮನಸ್ಸಿನಲ್ಲಿ ಸ್ಥಿರವಾಗಿಯೂ ಸ್ಪಷ್ಟವಾಗಿಯೂ ನಿಲ್ಲದಿದ್ದರೆ, ಗ್ರಂಥಪಠನವು ಶ್ರಮಮಾತ್ರ ಪ್ರಯೋಜನವಾಗಿಯೂ ವ್ಯರ್ಥವಾಗಿಯೂ ಹೋಗಿಬಿಡುವುದರಿಂದ ಓದಿದುದೆಲ್ಲವನ್ನು ಮನನ ಮಾಡಬೇಕು. ಪಠನ ಕಾಲದಲ್ಲಿ ಗಮನ ಕೊಡದಿದ್ದರೆ, ಮನನ ಮಾಡುವುದಕ್ಕೆ ಕುಳಿತಾಗ ವಿಷಯಗಳಿಗಿರುವ ಪರಸ್ಪರ

ಸಂಬಂಧವು ಸ್ವಪ್ನದಲ್ಲಿ ಕಂಡಂತೆ ಮಲಿನವಾಗಿಹೋಗಿ, ಕಾಣಬರದೆ ಇರುವುದರಿಂದ ಗ್ರಂಥದಲ್ಲಿ ಮನಸ್ಸನ್ನು ನೆಟ್ಟು, ಚಾಂಚಲ್ಯವನ್ನು ಬಿಟ್ಟು ತದೇಕಮನಸ್ಕರಾಗಿ ಓದಬೇಕು. ನಾಲ್ಕಾರು ವರ್ಷಗಳ ಹಿಂದೆ ಒಂದಾವೃತ್ತಿ ನೋಡಿದ ಮನುಷ್ಯನನ್ನು ತಿರಿಗಿ ಗುರಿತಿಸಲಾರದೆ ಹೋಗುವಹಾಗೆ, ಒಂದಾವೃತ್ತಿ ಓದಿದ ವಿಷಯವು ಬಹುದಿವಸಗಳಾದಮೇಲೆ ಮನಸ್ಸಿನಲ್ಲಿ ನಿಲ್ಲದೆ ನಳವಿ ಹೋಗುವುದರಿಂದ, ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಸಕಾಲದಲ್ಲಿ ಉಪಯೋಗಿಸಬೇಕಾದರೆ, ಅವುಗಳನ್ನು ಆಗಾಗ ಓದಿ ಪರಿಚಯ ಮಾಡುತ್ತಿರಬೇಕು.

ಹೀಗಿರುವುದರಿಂದ ಗ್ರಂಥಪ್ಯಾಸಂಗಕ್ಕೆ ಮುಖ್ಯವಾಗಿ ಬೇಕಾಗಿರುವುವು:–(೧) ಸಾವಧಾನತೆ–ಎಂದರೆ, ಗಮನ ಕೊಡುವಿಕೆ.

(೨) ಮನನ–ಎಂದರೆ, ಗ್ರಂಥದಲ್ಲಿ ಹೇಳಿರುವ ವಿಷಯಗಳನ್ನು ಮನಸ್ಸಿಗೆ ತಂದುಕೊಂಡು ಆಲೋಚಿಸುವಿಕೆ.

(೩) ಪರಿಚಯ–ಎಂದರೆ, ಓದಿದುದನ್ನು ತಿರಿಗಿ ತಿರಿಗಿ ಓದಿ ಮನನ ಮಾಡುತ್ತಿರುವಿಕೆ.

ಈ ರೀತಿಯಲ್ಲಿ ಮಾಡಿದ ವ್ಯಾಸಂಗವು ಮನಸ್ಸನ್ನು ಪೋಷಿಸಿ,ಕುಶಲತೆಯನ್ನು ಹುಟ್ಟಿಸಿ, ಕಾರ್ಯೋನ್ಮುಖವಾಗಿ ಆಗಿ, ತಕ್ಕ ಕಾಲದಲ್ಲಿ ಪ್ರಯೋಜನಕ್ಕೆ ಬರುವುದು.

ಗ್ರಂಥಗಳನ್ನೆಲ್ಲಾ ನೋಡಿದರೆ, 1)ವರ್ಣನಾಪ್ರಧಾನ, 2)ಕಥಾಪ್ರಧಾನ, 3)ಉಪದೇಶ ಪ್ರಧಾನ, 4)ವಿಚಾರ ಪ್ರಧಾನಗಳೆಂಬ ನಾಲ್ಕು ವಿಭಾಗಗಳಿರುವಂತಿದೆ. ವರ್ಣನಾ ಪ್ರಚುರವಾದ ಗ್ರಂಥಗಳು–ಕಾವ್ಯ ನಾಟಕಾದಿಗಳು; ಕಥಾ ಪ್ರಧಾನ ಗ್ರಂಥಗಳು–ಆಖ್ಯಾನಕ, ಆಖ್ಯಾಯಿಕೆ, ಚರಿತ್ರಾದಿಗಳು; ಉಪದೇಶವೇ ಪ್ರಧಾನವಾದ ಗ್ರಂಥಗಳು– ಜ್ಯೋತಿಷ, ವೈದ್ಯ, ಅರ್ಥಶಾಸ್ತ್ರ, ನೀತಿಶಾಸ್ತ್ರ ಮುಂತಾದುವುಗಳು; ವಿಚಾರವೇ ಮುಖ್ಯ

ಪ್ರಯೋಜನವಾದ ಗ್ರಂಥಗಳು—ಭೌತಿಕ, ತರ್ಕ, ಮೀಮಾಂಸೆ, ವೇದಾಂತವೇ ಮೊದಲಾದ ಲೌಕಿಕಾಲೌಕಿಕ ಶಾಸ್ತ್ರಗಳು. ಯದ್ಯಪಿ ಈ ವಿಭಾಗಗಳು ಸುತರಾಂ ಬೇರೆಬೇರೆಯಾಗುವುಗಳೆಂದು ಹೇಳಲಾಗುವುದಿಲ್ಲ. ಇವು ಪ್ರಾಯಶಃ ಒಂದರೊಂದಿಗೆ ಒಂದು ಕಲೆತೇ ಇರುವುವು. ಆದರೂ ಇವುಗಳಲ್ಲಿ ಒಂದೊಂದು ಅಂಗವೇ — ಎಂದರೆ, ವರ್ಣನಾ ಪ್ರಧಾನವಾದ ಗ್ರಂಥಗಳಲ್ಲಿ ಕಥೆಯೇ ಮೊದಲಾದ ಉಳಿದ ಭಾಗಗಳು ಯಥಾಯೋಗ್ಯವಾಗಿ ಸೇರಿ ಇದ್ದರೂ ವರ್ಣನಾ ಭಾಗವೇ — ಹೆಚ್ಚಾಗಿರುವುದರಿಂದ ಆಯಾ ಹೆಸರನ್ನು ಕೊಟ್ಟಿದೆ. ಈ ಈ ಗ್ರಂಥಗಳನ್ನು ಪಠಿಸುವುದು ಹೇಗೆ ?

ಕಾದಂಬರಿ, ಮೇಘದೂತ ಮೊದಲಾದ ವರ್ಣನಾ ಪ್ರಚುರವಾದ ಗ್ರಂಥಗಳನ್ನು ಓದಿ ಪ್ರಯೋಜನವನ್ನು ಹೊಂದಬೇಕಾದರೆ, ಅಲ್ಲಲ್ಲಿ ವರ್ಣಿಸಿರುವ ವರ್ಣನೆಗಳನ್ನು ಮನಸ್ಸಿನಲ್ಲಿಯೇ ಪುನಃಪುನಃ ಆಲೋಚನೆ ಮಾಡುತ್ತಿರಬೇಕು. ಮನನ ಕಾಲದಲ್ಲಿಯಲ್ಲವೆ ವರ್ಣಿತವಾದ ವಸ್ತುಗಳಿಗಿರುವ ಪರಸ್ಪರ ಸಂಬಂಧವೂ, ಔಚಿತ್ಯವೂ ಚೆನ್ನಾಗಿ ತೋರಿಬರುವುದು ? ಕೆಲವು ವೇಳೆ ಪುನಃ ಗ್ರಂಥವನ್ನು ನೋಡಬೇಕಾಗಿಬರುವುದು ; ಆಗ ನೋಡಿದ ಮೇಲೆ ತಿರಿಗಿ ಮನನ ಮಾಡುವುದು ಅವಶ್ಯಕ. ಹಾಗೆ ಮನನ ಮಾಡುವುದರಿಂದ ವಿಷಯೌಚಿತ್ಯವೂ, ಪರಸ್ಪರ ಸಂಬಂಧವೂ, ಕಾಣಬರುವುದೂ ಅಲ್ಲದೆ ಕವಿಯ ಯೋಗ್ಯತೆಯೂ ಗೊತ್ತಾಗುವುದು. ಅನೇಕ ವೇಳೆ ವರ್ಣನೆಗಳು ಎಷ್ಟು ಕಷ್ಟಪಟ್ಟರೂ ಮನಸ್ಸಿನಲ್ಲಿ ನಿಲ್ಲದೆ ಹೋಗುವುವು. ಅಂಥವುಗಳನ್ನು ನಿಲ್ಲಿಸುವುದರಲ್ಲಿ ಚಿತ್ರಪಟಗಳು ಬಹುಮಟ್ಟಿಗೆ ಸಹಾಯ ಮಾಡುವುವು. ಆದುದರಿಂದ ಈ ಗ್ರಂಥಗಳಲ್ಲಿ ವರ್ಣಿತವಾದ ಸಂದರ್ಭಗಳನ್ನು ತೋರಿಸುವ ಚಿತ್ರಪಟಗಳು ಲಭಿಸಿದರೆ ಅವುಗಳನ್ನು ಪಕ್ಕದಲ್ಲಿ ಇಟ್ಟುಕೊಳ್ಳಬೇಕು ; ಅಥವಾ ಚಿತ್ರಪಟಗಳನ್ನು ಬರೆವ ಕೌಶಲವಿದ್ದರೆ ಅಂಥ ಚಿತ್ರಗಳನ್ನು ಬರೆದು ಇಟ್ಟುಕೊಳ್ಳುವುದು ಉತ್ತಮ. ಇದೂ ಅಲ್ಲದೆ

ಪ್ರಾಯಶಃ ಗ್ರಂಥಗಳಲ್ಲಿ ವರ್ಣನೆ, ಕಥೆ, ಉಪದೇಶ, ವಿಚಾರಗಳು ಕಲತೇ ಇರುವುದರಿಂದ, ಆಯಾ ಭಾಗಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಓದಿ, ಗ್ರಂಥಗಳನ್ನು ಪಠಿಸಬೇಕು.

ಗ್ರಂಥದ ಸಾರವನ್ನು ಮನಸ್ಸಿನಲ್ಲಿ ನಿಲ್ಲಿಸುವುದಕ್ಕೆ ಮನನವೇ ಮುಖ್ಯ ಸಾಧನವೆಂದು ಹೇಳಿದೆನು. ಮನಸ್ಸಿನಲ್ಲಿ ಮನನ ಮಾಡುವುದಕ್ಕಿಂತಲೂ ಮಾತುಗಳನ್ನು ಉಪಯೋಗಿಸಿ ನಮಗೆ ನಾವೇ ಹೇಳಿಕೊಳ್ಳುವ ಅಭ್ಯಾಸವು ಓದಿದುದನ್ನು ಪ್ರಯೋಜನಕರವಾಗಿ ಮಾಡಿಕೊಳ್ಳುವುದಕ್ಕೆ ಉತ್ತಮವಾದ ಸಹಾಯವು. ಈ ಅಭ್ಯಾಸದಿಂದ ಗ್ರಂಥಾಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಸರಿಯಾದ ಪದಗಳನ್ನು ಪ್ರಯೋಗಿಸುವ ಶಕ್ತಿಯೂ ಉಂಟಾಗುತ್ತದೆ, ಮತ್ತು ವಿಷಯವನ್ನು ಚೆನ್ನಾಗಿ ಧರಿಸಲೂ ಬಹುದು. ತನಗೆ ತಾನೇ ಹೇಳಿಕೊಳ್ಳುವುದಕ್ಕಿಂತ ಸ್ನೇಹಿತನಿಗಾಗಲಿ, ಇತರನಿಗಾಗಲಿ ಹೇಳುವುದು ಅತ್ಯುತ್ತಮವಾದ ಅಭ್ಯಾಸವು. ಸ್ನೇಹಿತನಿಗೆ ಅಥವಾ ಅನ್ಯನಿಗೆ ತಿಳಿಸುವಾಗ ಅಭಿಪ್ರಾಯದಲ್ಲಿ ಸಾಮಂಜಸ್ಯವನ್ನು, ಮಾತಿನಲ್ಲಿ ಔಚಿತ್ಯವನ್ನೂ ನೋಡಬೇಕಾಗಿ ಬರುವುದು. ಇದರಲ್ಲಿ ಮನನ ಮಾಡುವುದಕ್ಕಿಂತ ಒಂದು ವಿಶೇಷವಾದ ಪ್ರಯೋಜನವುಂಟು. ಸ್ನೇಹಿತನಿಗಾಗಲಿ ತನಗಾಗಲಿ ಹೇಳುವ ಅಭ್ಯಾಸವು ಬುದ್ಧಿಶಕ್ತಿಯನ್ನೂ ಗ್ರಹಣಸಾಮರ್ಥ್ಯವನ್ನೂ ಶೀಘ್ರವಾಗಿ ಹೆಚ್ಚಿಸುವುದರಲ್ಲಿ ಏನೇನೂ ಸಂದೇಹವಿಲ್ಲ. ಓದಿದ ಪುಸ್ತಕದ ಸಾರವನ್ನು ನಮ್ಮ ಮಾತಿನಿಂದಲೇ ಬರೆವ ಅಭ್ಯಾಸವು ಉತ್ತಮೋತ್ತಮವಾದ ಸಹಾಯವು. ಬರವಣಿಗೆಯಲ್ಲಿ ಪೌನರುಕ್ತ್ಯ ಪ್ರಕ್ರಮಭಂಗ ಮುಂತಾದ ದೋಷಗಳು ಬಾರದಹಾಗೆಯೂ, ಪದೌಚಿತ್ಯ ವಿಷಯೌಚಿತ್ಯ ವಿಷಯ ಪರಿಚ್ಛೇದ ಮುಂತಾದುವುಗಳು ಇರುವ ಹಾಗೆಯೂ ನೋಡಿಕೊಂಡು, ಅಭಿಪ್ರಾಯಗಳಿಗೆ ಸರಿಯಾದ ಆಕೃತಿಯನ್ನು ಕೊಡಬೇಕಾಗಿ ಬರುವುದು. ಈ ಅಭ್ಯಾಸದಲ್ಲಿ "ಪರಿಚ್ಛೇದೋಹಿ ಪಾಂಡಿತ್ಯಂ" ಎಂಬ ಮರ್ಯಾದೆಯಲ್ಲಿ ಬೇಗನೆ

ಪಾಂಡಿತ್ಯವು ಸಿದ್ಧಿಸುವುದು. ಹೀಗಿರುವುದರಿಂದ "ಲೇಖನದಿಂದ ವಿಷಯ ಪರಿಚ್ಛೇದವು" ಎಂಬ ಶಾಸ್ತ್ರಜ್ಞನ ಅಭಿಪ್ರಾಯಕ್ಕೆ ಅನುಗುಣವಾಗಿ, ಗ್ರಂಥವ್ಯಾಸಂಗದಲ್ಲಿ ಬೇಕಾಗಿರುವ ಮನನ, ವಾಚಾಕಥನ, ಲೇಖನವೆಂಬ ಈ ಮೂರು ಸಹಾಯಗಳಲ್ಲಿ ಲೇಖನವೇ ಅತ್ಯುತ್ತಮವಾದುದು.

## ೧೧. "ಜ್ಞಾನಸಂಪಾದನ ಕ್ರಮ."

ಪ್ರಪಂಚದಲ್ಲಿ ಜ್ಞಾನವಿಕಾಸಕ್ಕೆ ಅವಕಾಶವನ್ನು ಉಂಟುಮಾಡದೆ ಇರುವ ದೇಶಕಾಲಾವಸ್ಥಾಭೇದಗಳೇ ಇಲ್ಲವಾದುದರಿಂದ, ಅವುಗಳ ಮೂಲಕ ಜ್ಞಾನಕ್ಕೆ ವಿಕಾಸವನ್ನು ಉಂಟುಮಾಡಿಕೊಳ್ಳುವುದು ಜೀವನದ ನಿರಂತರವಾದ ಉದ್ದೇಶವಾಗಿಯೂ ಫಲವಾಗಿಯೂ ಇರಬೇಕು. ಹೀಗಿರುವಲ್ಲಿ ಜ್ಞಾನಕ್ಕೆ ವಿಕಾಸವನ್ನು ಮಾಡುವುದಕ್ಕೆ ಪ್ರತಿಯೊಬ್ಬನೂ ಪ್ರಯತ್ನಿಸಲೇಬೇಕು. ಹಾಗೆ ಪ್ರಯತ್ನಿಸದೆ ಇದ್ದಲ್ಲಿ ತನ್ನ ಮನುಷ್ಯತ್ವಕ್ಕೆ ಹಾನಿ ಬಂದು, "ಜ್ಞಾನೇನ ಹೀನಃ ಪಶುಭಿಸ್ಸಮಾನಃ" ಎಂದು ಹೇಳಿರುವಂತೆ ಮೃಗಕ್ಕೂ ತನಗೂ ಭೇದವಿಲ್ಲದಂತಾಗುವನು. ಮನುಷ್ಯನು ಮನುಷ್ಯನೆಂದು ಹೇಳಿಸಿಕೊಳ್ಳುವುದಕ್ಕೆ ಇರುವ ಗುರುತು ಜ್ಞಾನವೇ ಅಲ್ಲವೆ? ಆದುದರಿಂದಲೇ ಜ್ಞಾನವಿಕಾಸವು ಸಕಲರಿಗೂ ಅವಶ್ಯಕವಾದುದು.

ಈ ಉದ್ದೇಶವನ್ನು ನೆರವೇರಿಸಿಕೊಳ್ಳುವುದಕ್ಕೆ ಅನೇಕ ಮಾರ್ಗಗಳುಂಟು. ಪುಸ್ತಕಗಳ ಸಹಾಯದಿಂದಲೂ, ಹಿರಿಯರ ಉಪದೇಶದಿಂದಲೂ ಜ್ಞಾನವನ್ನು ವೃದ್ಧಿ ಮಾಡಬಹುದು. ಆದರೆ ಈ ರೀತಿಯಿಂದ ಸಂಪಾದಿಸಿದ ಜ್ಞಾನವು ಅನುಭವಸಿದ್ಧವಲ್ಲದುದರಿಂದ ಪರಿಪೂರ್ಣವಾಗಿಯೂ, ನಿಷ್ಕೃಷ್ಟವಾಗಿಯೂ, ಸಾಪೇಕ್ಷವಾಗಿಯೂ—ಎಂದರೆ ತನ್ನ ಪರಿಪೂರ್ಣತ್ವಕ್ಕೂ

ನಿಷ್ಕೃಷ್ಟತ್ವಕ್ಕೂ ಇತರ ಸಹಾಯವನ್ನು ಅಪೇಕ್ಷಿಸುವುದಾಗಿಯೂ– ಇರುವುದು. ಈ ಮೇಲೆ ಹೇಳಿದ ಎರಡು ಉಪಾಯಗಳಲ್ಲದೆ "ಸ್ವಾನುಭವ" ವೆಂಬ ಬೇರೆ ಒಂದು ಉಪಾಯವುಂಟು. ಇದು ಪರಿಪೂರ್ಣವಾಗಿಯೂ, ನಿಷ್ಕೃಷ್ಟವಾಗಿಯೂ, ಇತರನಿರಪೇಕ್ಷವಾಗಿಯೂ ಇರುವುದು. ಇದೇ ಅಭಿಪ್ರಾಯವನ್ನು ಶುಕ್ರನೀತಿಕಾರನು—

"ಆಚಾರ್ಯಸ್ಸರ್ವಚೇಷ್ಟಾಸು ಲೋಕ ಏವ ಹಿ ಧೀಮತಃ ‖"

ಎಂದು ಹೇಳಿದ್ದಾನೆ. ಇದರಿಂದ ಲೋಕವನ್ನು–ಎಂದರೆ, ತನ್ನಲ್ಲಿಯೂ ಲೋಕದಲ್ಲಿಯೂ ನಡೆವ ನಾನಾವಿಧವಾದ ವ್ಯಾಪಾರಗಳನ್ನು ಸಾವಧಾನವಾಗಿ ನೋಡಿ, ಚೆನ್ನಾಗಿ ಪರಾಮರ್ಶಿಸಿ, ತಿಳಿದುಕೊಳ್ಳಬೇಕು; ಎಂದು ಉಪದೇಶಿಸುತ್ತಾನೆ.

ಆದರೆ ಲೋಕವೇ ಆಚಾರ್ಯನು, ಲೋಕವನ್ನು ನೋಡಿ ಜ್ಞಾನವಿಕಾಸವನ್ನು ಮಾಡಿಕೊಳ್ಳಬೇಕು–ಎಂಬುದು ಹೇಗೆ? ಇದನ್ನು ಸ್ವಲ್ಪ ಮಟ್ಟಿಗೆ ವಿವರಿಸುತ್ತೇನೆ.

ನಾವು ಏಕಾಕಿಯಾಗಿರುವಾಗ ಅಥವಾ ಕತ್ತಲೆಯಲ್ಲಿ ಒಂದು ಕಡೆ ನಿಶ್ಶಬ್ದವಾಗಿ ಕುಳಿತಿರುವಾಗ ವಿಶೇಷವಾಗಿ ನಮ್ಮ ಅಂತರಂಗದೊಡನೆ ನಾವು ಸಲ್ಲಾಪಿಸುವೆವು. ಆ ಕಾಲದಲ್ಲಿ ನಮಗೆ ಇರುವ ಶಕ್ತಿಯೂ, ಗುಣಗಳೂ, ನಮ್ಮ ಶರೀರಾತ್ಮಗಳ ಹಿತಾಹಿತಪ್ರವೃತ್ತಿನಿವೃತ್ತಿಜ್ಞಾನವೂ ತಿಳಿದು ಬರುವಕಾರಣ, ಸ್ವವಿಷಯವಾಗಿ ಇತೋಽಪ್ಯಧಿಕವಾದ ನಿಷ್ಕೃಷ್ಟಜ್ಞಾನವನ್ನು ಈ ರೀತಿಯಲ್ಲಿ ಹೊಂದಬಹುದು.

ನಾವು ಜನಗಳ ಮಧ್ಯದಲ್ಲಿರುವಾಗ, ಅವರೊಡನೆ ಮಾತನಾಡುತ್ತಾ ಅವರ ನಡೆನುಡಿಗಳನ್ನು ನೋಡುವುದರಿಂದ, ಜನರ ಕಾಮ ಕ್ರೋಧಾದಿಗಳ ಪ್ರವೃತ್ತಿ ನಿವೃತ್ತಿ, ಬುದ್ಧಿಹೀನತೆ ಬುದ್ಧಿಕೌಶಲ, ಸೌಜನ್ಯ ದೌರ್ಜನ್ಯ, ಕೃತ್ಯಾಕೃತ್ಯ, ಧರ್ಮಾಧರ್ಮ– ಇವೇ ಮೊದಲಾದ ಮನುಷ್ಯಸಹಜವಾದ

ಅನೇಕ ಸಂಗತಿಗಳನ್ನು ತಿಳಿಯಬಹುದು. ಜನರಲ್ಲಿರುವ ದುರ್ಗುಣಗಳನ್ನು ನೋಡಿ, ಅಂಥ ದುಷ್ಕೃತ್ಯಗಳು ಎಷ್ಟುಮಟ್ಟಿಗೆ ಅವರಿಗೆ ಅಗೌರವವನ್ನು ತಂದಿರುವುದೆಂಬುವನ್ನೂ, ಅಂಥ ದುಷ್ಕೃತ್ಯಗಳು ನಮ್ಮಲ್ಲಿದ್ದರೆ ನಾವು ಎಷ್ಟುಮಟ್ಟಿಗೆ ನೀಚರಾಗಿ ಭಾವಿಸಲ್ಪಡುವೆವು ಎಂಬುದನ್ನೂ ತಿಳಿಯಬಹುದು. ಹೀಗೆಯೇ ಅವರ ಸದ್ಗುಣ ಸದಾಚಾರಗಳನ್ನು ನೋಡಿ ನಾವು ಆಚರಿಸಲು ಅರ್ಹವಾದ ಸುಶೀಲ ಸದ್ವ್ಯಾಪಾರಗಳನ್ನೂ ಕಲಿಯಬಹುದು.

ನಾವು ಮನೆಯಲ್ಲಾಗಲಿ ಪಟ್ಟಣವಲ್ಲಾಗಲಿ ಇರುವಾಗ ಯಾವ ಕಡೆ ದೃಷ್ಟಿಪ್ರಸರಣ ಮಾಡಿದರೂ ಮನುಷ್ಯಕೃತವಾದ ಮನೆ ಮಠ, ತೋಟ ತುಡಿಕೆ, ಸೇತು ಕಾಲುವೆ— ಮೊದಲಾದ ಕೆಲಸಗಳನ್ನು ನೋಡುತ್ತೇವೆ. ಪಟ್ಟಣವನ್ನು ಬಿಟ್ಟು ಹೊರಗೆ ಹೋದಾಗ ಈಶ್ವರನಿರ್ಮಾಣವನ್ನು ವಿಶೇಷವಾಗಿ ನೋಡುತ್ತೇವೆ. ತಲೆಯನ್ನು ಎತ್ತಿದರೆ ಅಂತರಿಕ್ಷವು ಕಾಣಿಸುತ್ತದೆ. ಅಲ್ಲಿ ಮೇಘಗಳನ್ನೂ, ಅವುಗಳಲ್ಲಿ ಉಂಟಾಗುವ ಚಿತ್ರವಿಚಿತ್ರವಾದ ಆಕಾರಗಳನ್ನೂ, ವಾಯುವು ಅವುಗಳನ್ನು ಹೊಡೆದುಕೊಂಡು ಒಂದುಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದನ್ನೂ, ಅಲ್ಲಿ ಹುಟ್ಟುವ ಮಿಂಚುಮಳೆಗಳನ್ನು ನೋಡುತ್ತೇವೆ. ಹಗಲು ಜಗಚ್ಚಕ್ಷುವಾದ ಸೂರ್ಯನು ಕಾಣಿಸುವನು. ರಾತ್ರಿಯಾದಾಗ ನಕ್ಷತ್ರಗಳೂ ಗ್ರಹಗಳೂ ನಮ್ಮ ದೃಷ್ಟಿಗೆ ಗೋಚರವಾಗುವುವು. ತಲೆಯನ್ನು ತಗ್ಗಿಸಿ ಕೆಳಗಡೆ ನೋಡಿದರೆ ತನ್ನನ್ನು ಆಶ್ರಯಿಸಿರುವ ಪ್ರಾಣಿಗಳಿಗೆ ಜೀವನದಾನವನ್ನು ಮಾಡುತ್ತಲಿರುವ ಭೂಮಿಯೂ, ಅದರ ಮೇಲೆ ಪ್ರಾಣಿಗಳೂ, ಸಸ್ಯಾದಿಗಳೂ, ಪಾಷಾಣಾದಿಗಳೂ, ಗಿರಿ ನದಿ ಮೊದಲಾದುವುಗಳೂ ಚಿತ್ರವಿಚಿತ್ರವಾದ ಭೇದಗಳನ್ನು ತೋರಿಸಿ ನಮ್ಮ ದೃಷ್ಟಿಗೆ ವಿನೋದವನ್ನುಂಟುಮಾಡುವುವು.

ಮೇಘಗಳಿಂದಲೂ, ನಕ್ಷತ್ರಗಳಿಂದಲೂ, ಸೂರ್ಯನಿಂದಲೂ, ಚಂದ್ರನಿಂದಲೂ, ಗ್ರಹಗಳಿಂದಲೂ, ಅವುಗಳ ಗತಿಗಳಿಂದಲೂ, ಅವುಗಳಿಗಿರುವ ಪರಸ್ಪರ ಸಂಬಂಧಗಳಿಂದಲೂ, ಆ ಸಂಬಂಧಗಳಿಂದುಂಟಾಗುವ ಕಾರ್ಯಗಳಿಂದಲೂ, ಜ್ಞಾನವಿಕಾಸವನ್ನು ಹೊಂದಬಹುದು. ಭೂಮಿಯನ್ನು ಅಗೆದು, ಅದರ ಒಳಭಾಗವನ್ನು ಪರೀಕ್ಷಿಸಿ ನೋಡಿ, ಅನರ್ಘವಾದ ಅಭಿಪ್ರಾಯಗಳನ್ನು ಪಡೆಯಬಹುದು. ಸಮುದ್ರದ ನೀರನ್ನೂ, ಅದರಲ್ಲಿರುವ ಪ್ರಾಣಿಜಾತವನ್ನೂ ಅವುಗಳ ವ್ಯಾಪಾರಗಳನ್ನೂ, ರತ್ನಾದಿಗಳನ್ನೂ ಅವುಗಳ ಉತ್ಪತ್ತಿಕ್ರಮವನ್ನೂ ನೋಡಿ, ಅನೇಕ ಅಮೂಲ್ಯವಾದ ಆಲೋಚನೆಗಳಿಗೆ ಅವಕಾಶವನ್ನು ಕೊಡಬಹುದು. ಜ್ಞಾನಕ್ಕೆ ಅಭಿವೃದ್ಧಿಯನ್ನು ಖನಿಜ ಲೋಹಗಳಲ್ಲಿಯೂ, ಸಸ್ಯಾದಿಗಳಲ್ಲಿಯೂ, ವೃಕ್ಷಗಳಲ್ಲಿಯೂ, ಫಲಪುಷ್ಪಗಳಲ್ಲಿಯೂ ತೋರಿಬರುವ ಅದ್ಭುತಸೃಷ್ಟಿಗಳನ್ನು ನೋಡುವುದರಿಂದ ಸಂಪಾದಿಸಬಹುದು. ಪಕ್ಷಿಗಳಿಂದಲೂ, ಮೃಗಗಳಿಂದಲೂ, ಕ್ರಿಮಿಕೀಟಗಳಿಂದಲೂ ಕೂಡ ಜ್ಞಾನವಿಕಾಸವನ್ನು ಪಡೆಯಬಹುದು. ಈ ರೀತಿಯಾದ ಜ್ಞಾನವನ್ನೇ ಆಧುನಿಕರು ಭೌತಿಕಾದಿ ಶಾಸ್ತ್ರಜ್ಞಾನವೆನ್ನುತ್ತಾರೆ.

ಅಹೋರಾತ್ರಗಳ ಪರಿವರ್ತನವನ್ನೂ, ಹಾರಿಹೋಗುತ್ತಲೇ ಇರುವ ಕಲಾಮುಹೂರ್ತಾದಿಗಳನ್ನೂ ನೋಡಿ, ಕಾಲದ ಸ್ವರೂಪವನ್ನು ತಿಳಿದು, "ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್" ಎಂಬಂತೆ ನಮಗೆ ಒದಗಿದ ಪ್ರತ್ಯವಕಾಶವನ್ನೂ ಕಳೆಯದೆ, ಅದನ್ನು ಸರಿಯಾಗಿ ಉಪಯೋಗಿಸುವುದರಲ್ಲಿ ದೃಷ್ಟಿಯಿಟ್ಟು, ಕಾಲದ ಅತ್ಯತಿಶಯಾಧಾಯಕವಾದ ಉಪಯೋಗಕ್ರಮವನ್ನು ತಿಳಿಯಬಹುದು.

ಇಷ್ಟರಮೇಲೆ ಭಗವಂತನು ಕರ್ಮೇಂದ್ರಿಯ ಜ್ಞಾನೇಂದ್ರಿಯ ರೂಪವಾಗಿ ನಮಗೆ ಕರುಣಿಸಿರುವ ಕಾಯಿಕ ಮಾನಸಿಕ ಶಕ್ತಿಗಳಿಂದ ಆತನ ಸೃಷ್ಟಿವೈಚಿತ್ರ್ಯವನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ, ಆತನ ಮಹಿಮೆ

ಯುನ್ನೂ, ಅದ್ಭುತ ವ್ಯಾಪಾರಗಳನ್ನೂ, ಆತನ ಸರ್ವಶಕ್ತತೆಯನ್ನೂ, ಆತನ ಅನಂತ ಕಲ್ಯಾಣಗುಣ ಸಮೃದ್ಧಿಯನ್ನೂ ಕೂಡ ಕೂಡಿದಷ್ಟು ತಿಳಿದುಕೊಂಡು,

" ತೇನ ವಿನಾ ತೃಣಾಗ್ರಮಪಿ ನ ಚಲತಿ "

ಎಂಬುದರಿಂದ ಸಮಸ್ತಕ್ಕೂ ಆತನೇ ಕಾರಣನೂ,

" ದಾಸಭೂತಾಸ್ಸ್ವತಃ ಸರ್ವೇ ಹ್ಯಾತ್ಮಾನಃ ಪರಮಾತ್ಮನಃ॥ "

ಎಂಬುದರಿಂದ ಆತ್ಮಕೋಟಿ ಪ್ರವಿಷ್ಟರಾದ ನಾವೆಲ್ಲರೂ ಸ್ವಭಾವಸಿದ್ಧವಾಗಿ ಪರಮಾತ್ಮನಾದ ಭಗವಂತನಿಗೆ ದಾಸಭೂತರೂ, ಎಂಬ ಜ್ಞಾನವನ್ನು ಹೊಂದಿ, ಆತನಲ್ಲಿ ನ್ಯಸ್ತಭರರಾಗಿರಬಹುದು.

## ೧೨. "ಕಾಲ ವಿನಿಯೋಗ."

ಐದನೆಯ ಪ್ರಬಂಧದಲ್ಲಿ ಕಾಲದ ಸ್ವರೂಪವನ್ನೂ, ಆದರ ಬಲಯನ್ನೂ ತಿಳಿಸಿ, ತನ್ಮೂಲಕ ಕಾಲಕ್ಕೆ ಸರಿಯಾದ ಉಪಯೋಗವನ್ನು ಮಾಡಬೇಕೆಂದು ತಿಳಿಸಿದೆನು. ಕಾಲವನ್ನು ಸರಿಯಾಗಿ ಉಪಯೋಗಿಸುವುದು ಹೇಗೆ ? ಎಂಬ ವಿಚಾರವನ್ನು ಇಲ್ಲಿ ಮಾಡುತ್ತೇನೆ.

ಮನುಷ್ಯನ ಆಯುಸ್ಸು ನೂರೇ ವರ್ಷವೆಂದು "ಶತಾಯುರ್ವೈ ಪುರುಷಃ " ಎಂಬ ಶ್ರುತಿ ವಾಕ್ಯದಿಂದಲೂ, ಲೋಕವಾರ್ತೆಯಿಂದಲೂ ತಿಳಿದು ಬಂದಿದೆ. ಈ ನೂರು ವರ್ಷದ ಆಯುಸ್ಸನ್ನೂ ಕೂಡ ಸಂಪೂರ್ಣವಾಗಿ ಅನುಭವಿಸುವ ಅದೃಷ್ಟವುಳ್ಳವರು ಎಲ್ಲೋ ಅಲ್ಪಸ್ವಲ್ಪ ಜನ. ಹತ್ತು ಸಹಸ್ರಜನದಲ್ಲಿ ಒಬ್ಬನುಕೂಡ ಸಿಕ್ಕುವುದಿಲ್ಲ. ಅನೇಕರು ಅಲ್ಪಾಯುಸ್ಸಿನಲ್ಲಿಯೇ ಸಾಯುವರು. ಈಗಿನ ಕಾಲದಲ್ಲಿಯಂತೂ ಪೂರ್ಣಾಯುಸ್ಸಿಂ

ಬಿದ್ದು ಐವತ್ತು ವರ್ಷದಲ್ಲಿ ಅಡಗಿಹೋಗಿದೆ. ಆದರೂ ಮನುಷ್ಯನ ಆಶೆಗೆ “ಮನೋರಥಾನಾಮಗತಯಃ ಪ್ರವಾಹಾಃ” ಎಂಬಂತೆ ಪಾರವೇ ಇಲ್ಲ. ಪ್ರಯತ್ನವೇನೋ ಯಥೋಚಿತವಾಗಿ ನಡೆಯುತ್ತಿರುವುದು. ಪ್ರಯತ್ನಕ್ಕೆ ತಕ್ಕ ಕಾಲವೂ ಮಿತವಾಗಿರುವುದು. ಅನೇಕವೇಳೆ ಪ್ರಯತ್ನಕ್ಕೆ ತಕ್ಕ ಅನುಕೂಲವೂ ದೊರಕುವುದಿಲ್ಲ. ದೊರಕಿದರೂ, ಅದನ್ನು ಉಪಯೋಗಿಸಿಕೊಂಡು ಇಷ್ಟಾರ್ಥವನ್ನು ಪರಿಪೂರ್ಣವಾಗಿ ಸಂಪಾದಿಸಿಕೊಳ್ಳುವುದಕ್ಕಾಗುವುದಿಲ್ಲ. ಪ್ರಪಂಚಸ್ಥಿತಿಯು ಹೀಗಿರುವುದು. ಆದುದರಿಂದ ಮನುಷ್ಯನು ಯಥಾಶಕ್ತಿ, ಯಥಾನುಕೂಲ, ಯೋಗ್ಯವಾದ ಕಾರ್ಯದಲ್ಲಿ ಪ್ರವರ್ತಿಸಿ, ಪ್ರಪಂಚಕ್ಕೂ ತನ್ನ ಸಂಸಾರಕ್ಕೂ ತನಗೂ ಅತಿಶಯವನ್ನು ಉಂಟುಮಾಡಿ, ಸುಖವನ್ನು ಹೊಂದಿ, ಸಜ್ಜನನೆನಿಸಿಕೊಂಡು, ಎಲ್ಲರಿಗೂ ಬೇಕಾದವನಾಗಿ ಬಾಳುವ ರೀತಿಯಲ್ಲಿ ಕಾಲವನ್ನು ವಿನಿಯೋಗಿಸುವುದಕ್ಕೆ ಯತ್ನಿಸಬೇಕು.

ಮನುಷ್ಯನ ಆಯುಸ್ಸನ್ನು ಬಾಲ್ಯ, ಯೌವನ, ವಾರ್ಧಕವೆಂಬದಾಗಿ ಮೂರು ವಿಭಾಗ ಮಾಡಬಹುದು. ಬಾಲ್ಯವೆಂಬುದು ಹುಟ್ಟಿದಮೊದಲು ಹದಿನೆಂಟು ವಯಸ್ಸಿನ ವರೆಗಿನ ಕಾಲ. ಇದರಲ್ಲಿಯೂ ಹುಟ್ಟಿದಮೊದಲು ಆರರ ವರೆಗೆ ಶೈಶವವೆಂದೂ, ಏಳರಿಂದ ಹದಿನೆಂಟರ ವರೆಗೆ ಕೌಮಾರವೆಂದೂ ಎರಡು ವಿಭಾಗ ಮಾಡಬಹುದು. ಹದಿನೆಂಟನೆಯ ವಯಸ್ಸಿನಿಂದ ನಾಲ್ವತ್ತೈದನೆಯ ವರೆಗೆ ಯೌವನವೆಂದು ಹೇಳಬಹುದು. ಕೆಲವರು ಐವತ್ತರ ವರೆಗೂ ಯೌವನವಿರುತ್ತದೆಂದು ಹೇಳುತ್ತಾರೆ. ಐವತ್ತರಿಂದ ಆಚೆಗೆ ವೃದ್ಧಾಪ್ಯವಾಗಿರುವುದು.

ಬಾಲ್ಯಾವಸ್ಥೆಯ ಪ್ರಥಮ ಭಾಗದಲ್ಲಿ—ಎಂದರೆ, ಶೈಶವದಲ್ಲಿ ಉಂಟಾಗುವ ಜ್ಞಾನಸಂಸ್ಕಾರವು ಬಹುಶಃ ಬುದ್ಧಿಪುರಸ್ಸರವಾಗಿ ಸ್ವಪ್ರಯತ್ನದಿಂದ ಸಂಪಾದಿಸಿದುದಲ್ಲ; ತಾನೇ ಇಂದ್ರಿಯದ್ವಾರ ಉಂಟಾಗತಕ್ಕುದು. ಬಾಲ್ಯದ ದ್ವಿತೀಯಾವಸ್ಥೆಯಾದ ಕೌಮಾರದಲ್ಲಿಯಾದರೋ, ಬುದ್ಧಿಪೂರ್ವಕವಾದ

ಪ್ರಯತ್ನದಿಂದಲೂ, ಇತರರ ಸಹಾಯದಿಂದಲೂ ಜ್ಞಾನವು ವಿಶೇಷವಾಗಿ ಸಂಸ್ಕಾರ ಹೊಂದಬೇಕಾಗಿದೆ. ಈಕಾಲದ ಸಂಸ್ಕಾರವೇ ಉತ್ತರೋತ್ತರಾವಸ್ಥೆಗಳಾದ ಯೌವನ ವಾರ್ಧಕಗಳಲ್ಲಿ ಮಾಡುವ ವ್ಯಾಪಾರಗಳಿಗೂ, ಪಡೆವ ಕೀರ್ತ್ಯಪಕೀರ್ತಿಗಳಿಗೂ, ಅನುಭವಿಸುವ ಸುಖದುಃಖಕ್ಕೂ, ಬಟ್ಟೇನು, ಸರ್ವಕ್ಕೂ ಆಧಾರವಾಗಿರುವುದು. ಆದುದರಿಂದಲೇ ಈ ಕಾಲವೇ ಅತ್ಯಂತ ಮುಖ್ಯವಾದುದು. ಈ ಕಾಲವನ್ನು ವ್ಯರ್ಥವಾಗಿ ಪೋಲುಮಾಡಿದರೆ ಮುಂದಣ ಕಾಲವನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗದೆ, ಅದೆಲ್ಲವೂ ವ್ಯರ್ಥವಾಗಿಯೂ, ಭಾರವಾಗಿಯೂ, ದುಃಖದಾಯಕವಾಗಿಯೂ, ಜುಗುಪ್ಸಾವಹವಾಗಿಯೂ ಪರಿಣಮಿಸುವುದು. ಬಾಲ್ಯವೆನ್ನುವುದು ಲಕ್ಷಣಯಾ ಈ ಕೌಮಾರಾವಸ್ಥೆಯೇ ಆಗಿರುವುದು. ನಮ್ಮ ಜೀವಮಾನವೆಂಬ ತೋಟಕ್ಕೆ ಈ ಅವಸ್ಥೆಯೇ ನಾಟಿಯ ಕಾಲವಾಗಿರುವುದು. ನಾಟಿಯ ಕಾಲದಲ್ಲಿ ಚೆನ್ನಾಗಿ ಅಗತೆ ಮಾಡಿ, ಗೊಬ್ಬರ ಹಾಕಿ, ಆ ಮಣ್ಣಿನಲ್ಲಿ ಹುಲುಸಾಗಿ ಫಲಕೊಡುವ ಫಲವೃಕ್ಷಗಳನ್ನು ಆರಿಸಿಕೊಂಡು, ನೆಟ್ಟು, ಅವುಗಳ ಅಭಿವೃದ್ಧಿಗೆ ಅಡ್ಡಿಯಾದ ಕಳೆಗಳನ್ನು ಕಿತ್ತು ಹಾಕಿ, ಆ ವೃಕ್ಷಗಳನ್ನು ನೋಡಿಕೊಳ್ಳುತ್ತ ಬಂದರೆ, ಅವು ಸಕಾಲದಲ್ಲಿ ತಕ್ಕ ಫಲವನ್ನು ಕೊಡುವುವು. ಹಾಗೆ ಅಗತೆಮಾಡದೆ, ಗೊಬ್ಬರಹಾಕದೆ, ಫಲವೃಕ್ಷಗಳನ್ನೂ ನೆಡದೆ ಪಾಳುಗೆಡವಿದರೆ, ಮುಂದಕ್ಕೆ ತೋಟವೇ ಕೆಟ್ಟುಹೋಗಿ ಮುಳ್ಳುಗಳು ಬೆಳೆದುಕೊಂಡು ಕುರುಚುಕಾಡಾಗಿ ಹೋಗುವುದು.

ಆದಕಾರಣ ಈ ಬಾಲ್ಯಾವಸ್ಥೆಯಲ್ಲಿ ತಂದೆತಾಯಿಗಳ ಉದ್ದೇಶಾನುಗುಣವಾದ ಅಥವಾ ತನ್ನ ಮನೋರಂಜಕವಾದ ವಿದ್ಯೆಯನ್ನಾಗಲಿ, ಕಲೆಯನ್ನಾಗಲಿ ಕಲಿತುಕೊಳ್ಳುವುದಕ್ಕೆ ಪ್ರಾರಂಭಮಾಡಬೇಕು. ಬ್ರಾಹ್ಮಣರಲ್ಲಿ ಉಪನಯನ ಕರ್ಮಕ್ಕೆ ಏಳನೆಯ ವರ್ಷವನ್ನು ನಿಷ್ಕರ್ಷಿಸಿರುವುದೂ ಇದೇ ಅರ್ಥವನ್ನು ಸೂಚಿಸುತ್ತದೆ. ಈ ಅರ್ಥವನ್ನು ಋಷಿಗಳೂ,

ಶಾಸ್ತ್ರಜ್ಞರೂ ನಾನಾವಿಧವಾದ ದೃಷ್ಟಾಂತಗಳಿಂದ ಉಪಪಾದನೆ ಮಾಡಿದ್ದಾರೆ. "ಯನ್ನವೇ ಭಾಜನೇ ಲಗ್ನಃ ಸಂಸ್ಕಾರೋ ನಾನ್ಯಥಾ ಭವೇತ್" ಎಂದು ಕಾಳಿದಾಸನು ಹೇಳಿದ್ದಾನೆ. "ಗಿಡವಾಗಿ ಬಾಗದ್ದು ಮರವಾಗಿ ಬಗ್ಗೀತೇ?" ಎಂಬ ಕನ್ನಡ ಗಾದೆಯು ಇದೇ ಅರ್ಥವನ್ನು ಸ್ಪಷ್ಟಮಾಡುತ್ತದೆ. "ಎಳಸಾಗಿದ್ದಾಗಲೇ, ಬೊಂಬನ್ನು ಬಗ್ಗಿಸಬೇಕು; ಬಲಿತ ಮೇಲೆ, ಅದನ್ನು ಬಗ್ಗಿಸುವುದಕ್ಕಾದೀತೇ?" ಎಂಬ ಮಾತನ್ನು ಅನೇಕ ವೇಳೆ ಕೇಳಿರುತ್ತೇವೆ. ಈ ಮಾತೂ ಇದೇ ಅರ್ಥವನ್ನು ಸೂಚಿಸುತ್ತದೆ.

ಮನುಷ್ಯನ ಬುದ್ಧಿಯನ್ನು ಸೋರೆಯಕಾಯಿಗೆ ಹೋಲಿಸಬಹುದು. ಸೋರೆಯಕಾಯಿಯು ಎಳಸಾಗಿ ಅದರ ತೊಗಟೆಯು ಮೆದುವಾಗಿದ್ದಾಗ, ಅದರ ಮೇಲೆ ಸೂಜಿಯ ಮೊನೆಯಿಂದ ಯಾವ ಗುರುತನ್ನು ಬೇಕಾದರೂ ಸುಲಭವಾಗಿ ಮಾಡಬಹುದು. ಸೋರೆಯಕಾಯಿಯು ಬಲಿತು ದೊಡ್ಡದಾದ ಹಾಗೆಲ್ಲಾ, ಆ ಗುರುತೂ ಬಲಿಯುತ್ತ ಹರಡಿಕೊಳ್ಳುತ್ತ ಬರುವುದು: ಕೊನೆಗೆ ಆ ಕಾಯಿಯು ಚೆನ್ನಾಗಿ ಬಲಿತರೆ, ಆ ಗುರುತನ್ನು ಸ್ಪಷ್ಟವಾಗಿ ತೋರ್ಪಡಿಸುವುದೂ ಅಲ್ಲದೆ, ರೇಖಾಂತರಗಳನ್ನು ಸುಲಭವಾಗಿ ಬರೆಯಲು ಅವಕಾಶಕೊಡದೆ ಹೋಗುವುದು. ಹಾಗೆಯೇ ಬಾಲ್ಯದ ಬುದ್ಧಿಯಲ್ಲಿ ಯಾವ ವಿಧವಾದ ಸಂಸ್ಕಾರವನ್ನಾದರೂ ಸುಲಭವಾಗಿ ಉಂಟುಮಾಡಬಹುದು. ವಯಸ್ಸು ಆಗುತ್ತ ಆಗುತ್ತ ಬುದ್ಧಿಯು ಬಲಿತು ಬಲಿತು ಬಿಗುವೇರುತ್ತ ಬರುವುದು ಸ್ವಭಾವಷ್ಟೆ. ಬುದ್ಧಿಯು ಬಿಗುವೇರುತ್ತ ಏರುತ್ತ ಸೂಕ್ಷ್ಮವಾಗಿದ್ದ ಸಂಸ್ಕಾರವನ್ನು ಬಲಪಡಿಸುತ್ತ ಬರುವುದು ಮಾತ್ರವೇ ಅಲ್ಲದೆ ಬೇರೆವಿಧವಾದ ನೂತನಸಂಸ್ಕಾರಗಳಿಗೆ ಅವಕಾಶಕೊಡದಹಾಗೆಯೂ ಆಗುವುದು. ಜ್ಞಾಪಕಶಕ್ತಿಯ ವಿದ್ಯಮಾನವೂ ಹೀಗೆಯೇ. ಬಾಲ್ಯದಲ್ಲಿದ್ದ ಹಾಗೆ ವಯಸ್ಸು ಕಳೆದಮೇಲೆ ಅದು ಇರುವುದಿಲ್ಲ. ಬಾಲ್ಯದಲ್ಲಿ ಬಾಯಿಪಾಠ ಮಾಡಿದ ಅನುರವೂ, ಮಗ್ಗಿಯೂ ಬಹುಕಾಲ ನಿಲ್ಲುವಂತೆ, ವಯಸ್ಸಾದ

ಮೇಲೆ ಕಲಿತುಕೊಂಡ ವಿಷಯವು ನಿಲ್ಲದೆ, ಬೇಗನೆ ಮರೆತುಹೋಗುವುದು.

ಬುದ್ಧಿಸ್ವರೂಪವು ಹೀಗಿರುವುದರಿಂದ ಯೌವನಾವಸ್ಥೆಯು ಆರಂಭಿಸುವುದಕ್ಕೆ ಮುಂಚಿತವಾಗಿಯೇ ಅದಕ್ಕೆ ಸರಿಯಾದ ಸಂಸ್ಕಾರವನ್ನು ಕೊಡಬೇಕು. ಬುದ್ಧಿಯು ಬಾಲ್ಯಾವಸ್ಥೆಯಲ್ಲಿ ಯಾವ ರೀತಿಯ ಸಂಸ್ಕಾರವನ್ನು ಹೊಂದುತ್ತದೆಯೊ, ಆ ಸಂಸ್ಕಾರವೇ ಬಲಿತು ಬೇರೂರಿ ಯೌವನದಲ್ಲಿ ಪರಿಪಕ್ವದಶೆಯನ್ನು ಹೊಂದುತ್ತದೆ. ಮನುಷ್ಯನ ಶರೀರಸ್ಥಿತಿಯೂ ಕೂಡ ಬುದ್ಧಿಯಂತೆಯೇ ಇರುವುದು. ಹೀಗೆ ಬುದ್ಧಿಯೂ ಶರೀರವೂ ಸಂಸ್ಕಾರಗ್ರಹಣದಲ್ಲಿ ಸಮಾನಧರ್ಮವುಳ್ಳವು. ಹೀಗಿರುವುದರಿಂದ ಬಾಲ್ಯದಲ್ಲಿಯೇ ಸರಿಯಾದ ಮಾರ್ಗದಲ್ಲಿ ವಿದ್ಯಾಭ್ಯಾಸ ಕಲಾಭ್ಯಾಸಗಳನ್ನು ಮಾಡಿಸಬೇಕು. ಇದಕ್ಕೆ ಸಂವಾದಿಯಾಗಿ ಸಕಲವಿಧವಾದ ಪಾಂಡಿತ್ಯಕ್ಕೂ ಬಾಲ್ಯವೇ ಸಕಾಲವೆಂದು ನಮ್ಮ ಅನುಭವವೂ ಕೂಡ ತಿಳಿಸುವುದು. ಬಾಲ್ಯದಲ್ಲಿ ಕಲಿಯದ ವಿದ್ಯೆಯು ಯೌವನ ವಾರ್ಧಿಕ್ಯಗಳಲ್ಲಿ ಸುಲಭಸಾಧ್ಯವಲ್ಲ. ಸಣ್ಣ ಸಣ್ಣ ಮಕ್ಕಳೂ ಕೂಡ ಸುಲಭವಾಗಿ ಕಲಿತುಕೊಳ್ಳುವ ಈಜುವಿಕೆಯನ್ನು ಬಾಲ್ಯದಲ್ಲಿ ಕಲಿತುಕೊಳ್ಳದಿದ್ದರೆ, ಆಮೇಲೆ ಅದು ಬರುವುದೇ ಇಲ್ಲ. ಒಂದು ವೇಳೆ ಕಲಿತುಕೊಂಡರೂ, ಬಾಲ್ಯದಲ್ಲಿ ಕಲಿತವನಷ್ಟು ಧೈರ್ಯವೂ ಸಾಹಸವೂ ಹುಟ್ಟುವುದಿಲ್ಲ. ಚಿತ್ರಕೌಶಲ, ಲೋಹವಿದ್ಯೆ, ನಾಟ್ಯವಿದ್ಯೆ, ಸಂಗೀತಶಾಸ್ತ್ರ ಮೊದಲಾದ ವಿದ್ಯೆಗಳ ಗತಿಯೂ ಹೀಗೆಯೇ.

ಇವುಗಳನ್ನೆಲ್ಲಾ ಪರ್ಯಾಲೋಚನೆ ಮಾಡಿ ನೋಡಿದರೆ, ಬಾಲ್ಯವೇ ವಿದ್ಯೆಗೂ ಕಲೆಗೂ ಬೀಜಾವಾಪಕಾಲವೆಂದು ಹೇಳಬೇಕು. ಈ ಕಾಲವನ್ನು ವ್ಯರ್ಥಮಾಡದೆ, ಸರಿಯಾಗಿ ಉಪಯೋಗಿಸಿ ಸಾರ್ಥಕ ಮಾಡಿ, ಪ್ರಯೋಜನವನ್ನು ಹೊಂದಬೇಕು.

" ಪೂರ್ವೇ ವಯಸಿ ತತ್ಕುರ್ಯಾದ್ಯೇನ ವೃದ್ಧಸ್ಸುಖಂ ವಸೇತ್ ‖ "

ಎಂಬ ಸ್ಮೃತಿ ವಾಕ್ಯಾನುಸಾರ, ಉತ್ತರೋತ್ತರಾವಸ್ಥೆಗಳಲ್ಲಿ ಮಾಡುವ

ಕಾರ್ಯಗಳಿಗೆ ಪೂರ್ವಪೂರ್ವಾವಸ್ಥೆಗಳಲ್ಲಿ ಮಾಡುವ ಕಾರ್ಯಗಳು ಅನುಕೂಲವಾಗಿಯೂ, ಪರಿಪೋಷಕವಾಗಿಯೂ ಇರಬೇಕು — ಎಂಬುದು ಸ್ಪಷ್ಟವಾಗಿದೆ. ಈ ವಾಕ್ಯವು ಬಹಳ ಅರ್ಥವನ್ನು ಗರ್ಭೀಕರಿಸಿಕೊಂಡಿದೆ. ಇದು ಬಹ್ವನುಭವದಿಂದ ಆಡಿದ ಮಾತಾಗಿದೆ. ಪರ್ಯಾಲೋಚನೆ ಮಾಡುತ ಮಾಡುತ ಇದರ ಅತಿಶಯವು ಗೋಚರವಾಗುತ್ತದೆ. ಚಿನ್ನದ ಕೆಲಸದ ಅಕ್ಕಸಾಲೆಯು ಬಾಲ್ಯದಲ್ಲಿ ಒರಟು ಕೆಲಸಗಳನ್ನು ಕಲಿತುಕೊಂಡು, ಸುಮಾರಾಗಿ ಕೊಟ್ಟ ಮಾದರಿಯಲ್ಲಿ ನಗಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದುತ್ತಾನೆ. ಯೌವನವು ಮುಗಿವುದರೊಳಗೆ ಪಾಂಡಿತ್ಯವನ್ನು ಹೊಂದಿ, ಸ್ವತಃ ಬುದ್ಧಿಯನ್ನು ಉಪಯೋಗಿಸಿ ಹೊಸಮಾರ್ಗದಲ್ಲಿ ಚಮತ್ಕಾರವಾಗಿ ನಗಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದುತ್ತಾನೆ. ಹೀಗೆಯೇ ವಿದ್ಯಾವ್ಯಾಸಂಗದಲ್ಲಿಯೂ, ಬಾಲ್ಯವು ಮುಗಿವುದರಲ್ಲಿ ವಿಷಯಗಳ ಸ್ವರೂಪವು ಸ್ವಲ್ಪ ಸ್ವಲ್ಪ ತಿಳಿದುಬಂದು, ಯೌವನವು ಮುಗಿವಷ್ಟರೊಳಗೆ ಪಾಂಡಿತ್ಯವನ್ನು ಹೊಂದಿ, ಸ್ವತಃ ಗ್ರಂಥಕಲ್ಪನೆಯನ್ನೂ ಅಥವಾ ಹಿತೋಪದೇಶವನ್ನೂ ಮಾಡುವ ಸಾಮರ್ಥ್ಯವನ್ನು ಹೊಂದಿರುವುದನ್ನು ನೋಡಿರುತ್ತೇವೆ. ಹೀಗೆಯೇ ಇತರಕಲೆಗಳಲ್ಲಿಯೂ ಊಹಿಸಿಕೊಳ್ಳಬಹುದು. ಬಾಲ್ಯದಲ್ಲಿ ಕೆಲವು ಕಲೆಗಳನ್ನು, ಯೌವನದಲ್ಲಿ ಬೇರೆ ಕಲೆಗಳನ್ನು ಅಭ್ಯಾಸಮಾಡುವವನು ಯಾವ ಕಲೆಯಲ್ಲಿಯೂ ಕಡೆತೇರುವುದಿಲ್ಲ. ಹೀಗಿರುವುದರಿಂದ, ಬಾಲ್ಯದಲ್ಲಿ ಯಾವ ಕಲೆಯನ್ನು ಅಭ್ಯಾಸಮಾಡುವನೋ, ಆ ಕಲೆಯನ್ನೇ ಯೌವನದಲ್ಲಿ ಅಭಿವೃದ್ಧಿಪಡಿಸಬೇಕು. ಹೀಗೆಯೇ ತಾನು ಪಾಂಡಿತ್ಯವನ್ನು ಹೊಂದಿದ ವಿಷಯದಲ್ಲಿ ವೃದ್ಧಾಪ್ಯದ ಕಾಲವನ್ನು ಸ್ವಸುಖಸಾಧನವಾಗಿಯೂ, ಪರಸುಖಸಾಧನವಾಗಿಯೂ ವ್ಯಯಮಾಡಬೇಕು.

ಆದರೆ ನಮ್ಮ ಜ್ಞಾನವು ಸರ್ವತೋಮುಖವಾಗಿಲ್ಲವಿದ್ದರೆ, ೭ನೆಯ ಪ್ರಬಂಧದಲ್ಲಿ ಸೂಚಿಸಿರುವಂತೆ ಅನೇಕ ತೊಂದರೆಗಳು ಸಂಭವಿಸಬಹುದು; ಬಾಲ್ಯದಲ್ಲಿ ಅಭ್ಯಾಸ ಮಾಡದ ಕಲೆಗಳಲ್ಲಿ ಆಮೇಲೆ ಎಂದಿಗೂ ಪ್ರವೇಶ

ವುಂಟಾಗಲಾರದೆಂಬುದು ಗೊತ್ತೇ ಇದೆ. ಅನೇಕ ಕಲೆಗಳಿಗೆ ಏಕದಾ ಬೀಜಾವಾಪ ಮಾಡಿದರೆ, ಯಾವುದೊಂದು ವೃಕ್ಷವನ್ನೂ ಪರಿಪೂರ್ಣವಾಗಿ ವೃದ್ಧಿಗೊಳಿಸುವುದಕ್ಕಾಗುವುದಿಲ್ಲ. ಹೀಗಿರಲು, ಇದಕ್ಕೇನು ಮಾಡಬೇಕು?— ಎಂದು ಆಕ್ಷೇಪಿಸಿದರೆ, ಇಷ್ಟವಿಷಯದಲ್ಲಿ ಪರಿಪೂರ್ಣ ಪಾಂಡಿತ್ಯವನ್ನು ಹೊಂದುವಂತೆಯೂ, ಇತರ ವಿಷಯಗಳಲ್ಲಿ ಸಾಮಾನ್ಯ ಪರಿಚಯವುಂಟಾಗುವಂತೆಯೂ ಯತ್ನಿಸಿದರೆ, ಸಕಲವೂ ಸಾಧ್ಯವಾಗಬಹುದು. ಆದುದರಿಂದ ಪ್ರತ್ಯವಸ್ಥೆಯಲ್ಲಿಯೂ ಯಾವುದೋ ಒಂದು ಕಲೆಗೆ ವಿಶೇಷಾವಧಾನವನ್ನು ಕೊಟ್ಟು, ಇತರ ಕಲೆಗಳಿಗೆ ಕಿಂಚಿತ್ಕಿಂಚಿದವಧಾನವನ್ನು ಕೊಡುತ್ತ ಬರಬೇಕು.

ಹಾಗಾದರೆ, ಮನುಷ್ಯನು ಹುಟ್ಟಿದುದು ಕಲಾಸಂಪಾದನೆಗಾಗಿಯೆ? ತನ್ನ ಕಾಲವನ್ನು ಕಲಾಸಂಪಾದನೆಯಲ್ಲಿಯೇ ಕಳೆಯಬೇಕೆ? ಆಯಾ ಅವಸ್ಥೆಗಳಿಗೆ ಹಿತವಾಗಿಯೂ ಸಂತೋಷಕರವಾಗಿಯೂ ಇರುವ ರೀತಿಯಲ್ಲಿ ಕಾಲವನ್ನು ಕಳೆಯಲೇಕೂಡದೆ? ಮನುಷ್ಯನಾಗಿ ಹುಟ್ಟಿದುದು ಮೋಕ್ಷಸಂಪಾದನೆಗಾಗಲ್ಲವೆ?——ಇವೇ ಮೊದಲಾದ ಅನೇಕಾಕ್ಷೇಪಣೆಗಳನ್ನು ಮಾಡಬಹುದು. ಈ ವಿಚಾರದಲ್ಲಿ ನಮ್ಮ ಹಿರಿಯರು ಒಂದು ಸೂತ್ರವನ್ನು ಕೊಟ್ಟಿರುವರು. ಅವರ ಆ ಶಾಸನವು ಆಕ್ಷೇಪಣೀಯಾಂಶಗಳಿಗೆ ಸಮಾಧಾನರೂಪವಾಗಿ ಇರುವುದೂ ಅಲ್ಲದೆ ಮನುಷ್ಯನು ಯಾವ ಯಾವ ಅವಸ್ಥೆಗಳಲ್ಲಿ ಯಾವ ಯಾವ ರೀತಿ ಕಾಲವನ್ನು ವಿನಿಯೋಗಿಸಬೇಕೆಂಬುದನ್ನು ನಿರೂಪಿಸುತ್ತದೆ. ಅದೇನೆಂದರೆ :—

"ಶತಾಯುರ್ವೈ ಪುರುಷಃ | ವಿಭಜ್ಯ ಕಾಲಮನ್ಯೋನ್ಯಾನುಬದ್ಧಂ ಪರಸ್ಪರಸ್ಯಾನುಪಘಾತಕಂ ತ್ರಿವರ್ಗಂ ಸೇವೇತ | ಬಾಲ್ಯೇ ವಿದ್ಯಾಗ್ರಹಣಾದೀನರ್ಥಾನ್ | ಕಾಮಂ ಚ ಯೌವನೇ | ಸ್ಥವಿರೇ ಧರ್ಮಂ ಮೋಕ್ಷಂ ಚ | ಅನಿತ್ಯತ್ವಾದಾಯುಷಃ ಯಥೋಪಪಾದಂ ವಾ ಸೇವೇತ ||

[ ಟೀಕು—ಪುರುಷಃ—ಪುರುಷನು, ಶತಾಯುರ್ವೈ—ನೂರುವರ್ಷ ವಯಸ್ಸುಳ್ಳವನಲ್ಲವೆ; ಕಾಲಂ— ಈ ಆಯುಃಕಾಲವನ್ನು, ವಿಭಜ್ಯ—ವಿಭಾಗ ಮಾಡಿಕೊಂಡು, ಅನ್ಯೋನ್ಯಾನುಬದ್ಧಂ—ಒಂದಕ್ಕೊಂದು ಅನುಕೂಲವಾಗಿ ಸೇರಿಕೊಂಡಿರುವಹಾಗೆಯೂ, ಪರಸ್ಪರಾನುಪಘಾತಕಂ—ಒಂದಕ್ಕೊಂದು ಪ್ರತಿಘಟಿಸದಹಾಗೆಯೂ, ತ್ರಿವರ್ಗಂ—ಧರ್ಮಾರ್ಥಕಾಮಗಳನ್ನು, ಸೇವೇತ—ಸೇವಿಸಬೇಕು, ಸಾಧಿಸಬೇಕು; ಎಂದರೆ, ಬಾಲ್ಯೇ—ಬಾಲ್ಯದಲ್ಲಿ, ವಿದ್ಯಾಗ್ರಹಣಾದೀನ್ ಅರ್ಥಾನ್—ವಿದ್ಯೆಯೇ ಮೊದಲಾದ ಇಷ್ಟಾರ್ಥಗಳ ಗ್ರಹಣವನ್ನು; ಯೌವನೇ—ಪ್ರಾಯಕಾಲದಲ್ಲಿ, ಕಾಮಂಚ—ಕಾಮವನ್ನೂ ಕೂಡ, ಎಂದರೆ, ಅರ್ಥಕಾಮಗಳನ್ನೂ; ಸ್ಥವಿರೇ—ಮುಪ್ಪಿನಲ್ಲಿ, ಧರ್ಮಂ ಮೋಕ್ಷಂಚ—ಧರ್ಮವನ್ನೂ ಮತ್ತು ಮೋಕ್ಷವನ್ನೂ, ಸೇವಿಸಬೇಕು. ಆಯುಷಃ ಅನಿತ್ಯತ್ವಾತ್—ಸಾವು ಬರುವ ಕಾಲವು ಗೊತ್ತಿಲ್ಲವಾದುದರಿಂದ, ಯಥೋಪಪಾದಂ—ಯಾವ ಯಾವ ಕಾಲದಲ್ಲಿ ಅವು ಹೇಗೆ ಹೇಗೆ ಲಭಿಸುತ್ತವೆಯೋ ಹಾಗೆ ಹಾಗೆ ಆ ಆ ಕಾಲದಲ್ಲಿ ಅವುಗಳನ್ನು, ಸೇವೇತ—ಸಂಪಾದಿಸಬೇಕು.

ವ್ಯಾಖ್ಯಾನ:—ಇಲ್ಲಿ "ತ್ರಿವರ್ಗ" ವೆಂದರೆ ಧರ್ಮಾರ್ಥಕಾಮಗಳು: 'ಧರ್ಮ' ಶಬ್ದಕ್ಕೆ ಕೃತ್ಯಕರಣ ಅಕೃತ್ಯಾಕರಣವೆಂದರ್ಥ. 'ಅರ್ಥ' ಶಬ್ದಕ್ಕೆ "ವಿದ್ಯಾಭೂಮಿ ಹಿರಣ್ಯ ಪಶುಧಾನ್ಯ ಭಂಡಾರೋಪಸ್ಕರಮಿತ್ರಾದಿ"ಗಳನ್ನು ಆರ್ಜಿಸುವುದು, ಆರ್ಜಿಸಿದುದನ್ನು ವೃದ್ಧಿಗೊಳಿಸುವುದು, ಎಂದರ್ಥ. ಶ್ರೋತ್ರಾದೀಂದ್ರಿಯಗಳಿಗೆ ತತ್ತದ್ವಿಷಯಗಳಲ್ಲಿ ಅನುಕೂಲವಾದ ಪ್ರವೃತ್ತಿಯೇ 'ಕಾಮ' ವೆನ್ನಿಸಿಕೊಳ್ಳುವುದು. "ವಿದ್ಯಾಗ್ರಹಣಾದೀನ್" ಎಂಬ ಕಡೆ 'ವಿದ್ಯಾದಿ' ಎಂಬ ಶಬ್ದಪ್ರಯೋಗದಿಂದ ಬಾಲ್ಯದಲ್ಲಿ ವಿದ್ಯೆಯನ್ನೇ ಮುಖ್ಯವಾಗಿ ಸಂಪಾದಿಸಬೇಕೆಂದೂ, 'ಗ್ರಹಣ' ಶಬ್ದದಿಂದ ವಿದ್ಯಾಭ್ಯಾಸಗಳಿಗೆ ಬಾಲ್ಯವೇ ಸಕಾಲವೆಂದೂ, ಅಭಿಪ್ರಾಯವಾಗುತ್ತದೆ. 'ಕಾಮಂಚ'

ಎಂಬ ಕಡೆ ' ಚ ' ಶಬ್ದದಿಂದ ಕಾಮದ ಜತೆಯಲ್ಲಿ ಅರ್ಥವನ್ನೂ ಕೂಡ ಸೇವಿಸಬೇಕೆಂಬ ಅರ್ಥವುಂಟಾಗುತ್ತದೆ. " ಸ್ಥವಿರೇ ಧರ್ಮಂ ಮೋಕ್ಷಂ ಚ " ಎಂದು ಹೇಳಿ, " ಧರ್ಮಂಚ ಮೋಕ್ಷಂಚ " ಎಂದು ಹೇಳದೆ ಇರುವು ದರಿಂದ, ತ್ರಿವರ್ಗಗಳೊಳಗೆ ಅರ್ಥಕಾಮಗಳನ್ನು ವೃದ್ಧಾಪ್ಯದಲ್ಲಿ ಸೇವಿಸ ಕೂಡದೆಂಬ ಅಭಿಪ್ರಾಯವು ತೋರಿಬರುತ್ತದೆ. ಮತ್ತು ' ಚ ' ಶಬ್ದವಿರು ವುದರಿಂದ ಪ್ರಾಯಶಃ ವೃದ್ಧಾಪ್ಯದಲ್ಲಿ ಅರ್ಥಕಾಮಗಳ ಸೇವನೆಗೆ ಸಾಮ ರ್ಥ್ಯಾಭಾವದಿಂದ ಅವಕಾಶವಿರುವುದಿಲ್ಲವೆಂತಲೂ, ಒಂದುವೇಳೆ ಅವುಗ ಳನ್ನು ಸೇವಿಸುವ ಸಾಮರ್ಥ್ಯವಿದ್ದರೆ ಸೇವಿಸಬಹುದೆಂದೂ ಸೂಚಿತವಾಗು ತ್ತದೆ. ಬಾಲ್ಯದಲ್ಲಿ " ವಿದ್ಯಾಗ್ರಹಣಾದೀನರ್ಥಾನ್ " ಎಂದು ಹೇಳಿರುವು ದರಿಂದ ಕಾಮಸೇವನೆಯನ್ನೂ ಧರ್ಮಾಚರಣವನ್ನೂ ಮಾಡಕೂಡದೆಂದು ಹೇಳಿದಂತಾಗುವುದು. ಆ ಕಾಲದಲ್ಲಿ ಮನುಷ್ಯನಿಗೆ ಕಾಮವನ್ನು ಸೇವಿ ಸಲು ಸಾಮರ್ಥ್ಯವಿಲ್ಲದುದರಿಂದಲೂ, ' ಧರ್ಮ ' ವನ್ನು ಆಚರಿಸಲು ಅಧಿ ಕಾರಾಭಾವದಿಂದಲೂ ಹೀಗೆ ಹೇಳಿ ಇದೆ; ಎಂದು ತಿಳಿಯಬೇಕು. " ಅನಿ ತ್ಯತ್ವಾತ್ " ಎಂಬುದರಿಂದ ಪುರುಷಾರ್ಥ ಸೇವನೆಗೆ ಕಾಲನಿಯಮಮಾಡು ವುದಕ್ಕಾಗುವುದಿಲ್ಲವೆಂದೂ, " ಯಥೋಪಪಾದಂ " ಎಂಬುದರಿಂದ ಆ ಆ ಅವಸ್ಥೆಗಳಲ್ಲಿ ಸೇವಿಸಬೇಕಾದ ಪುರುಷಾರ್ಥಗಳೊಡನೆ ಇತರ ಪುರುಷಾ ರ್ಥಗಳನ್ನೂ ಯಥಾಯೋಗ್ಯವಾಗಿ ಲಭಿಸಿದಹಾಗೆಲ್ಲಾ ಸೇವಿಸಬಹುದು ಎಂದೂ ಹೇಳಿದಂತಾಗುವುದು. " ಅನ್ಯೋನ್ಯಾನುಬದ್ಧಂ " ಎಂಬುದರಿಂದ ಸೇವಿಸಲ್ಪಡುವ ಪುರುಷಾರ್ಥಗಳಿಗೆ ಪರಸ್ಪರ ಆನುಕೂಲ್ಯವಿದ್ದಿರಬೇ ಕೆಂದೂ " ಪರಸ್ಪರಸ್ಯಾನುಪಘಾತಕಂ " ಎಂಬುದರಿಂದ ಒಂದು ಪುರುಷಾ ರ್ಥವನ್ನು ಮತ್ತೊಂದು ವಿರೋಧಿಸಿ ಕೆಡಿಸಕೂಡದೆಂದೂ ಅಭಿಪ್ರಾಯ ವಾಗುತ್ತದೆ.]

ತಾತ್ಪರ್ಯ :—ಯೌವನಾದ್ಯವಸ್ಥೆಗಳಲ್ಲಿ ಸೇವಿಸಬೇಕಾದ ಪುರುಷಾ

ರ್ಥಗಳಿಗೆ ಅವಶ್ಯಕವಾದ ವಿದ್ಯೆಯೇ ಮೊದಲಾದ ಉಪಕರಣಗಳನ್ನು ಬಾಲ್ಯದಲ್ಲಿಯೇ ಶೇಖರಿಸಿ ಇಟ್ಟುಕೊಳ್ಳಬೇಕು. ಯೌವನದಲ್ಲಿ ಈ ಉಪಕರಣಗಳನ್ನು ಯಥೋಚಿತವಾಗಿ ಅಭಿವೃದ್ಧಿ ಮಾಡಿಕೊಂಡು, ಸ್ವಧರ್ಮಪ್ರಾಪ್ತವಾದ ಅರ್ಥಕಾಮಗಳನ್ನು ಅನುಭವಿಸಬೇಕು. ಯೌವನವು ಕಳೆದ ಬಳಿಕ ಅರ್ಥಕಾಮಗಳಲ್ಲಿ ವಿಶೇಷ ದೃಷ್ಟಿಯಿಡದೆ ಧರ್ಮದಲ್ಲಿಯೂ ಮೋಕ್ಷದಲ್ಲಿಯೂ ಮನಸ್ಸನ್ನು ನೆಲೆಗೊಳಿಸಿ ಪುರುಷನು ತನ್ನ ಆಯುಸ್ಸನ್ನು ಸಾರ್ಥಕಗೊಳಿಸಬೇಕು. ಆದರೆ ಆಯುಸ್ಸು ಅನಿಯತವಾದುದರಿಂದ ಈ ಪುರುಷಾರ್ಥಗಳನ್ನೆಲ್ಲಾ ತತ್ತತ್ಕಾಲ ಒದಗುವವರೆಗೂ ಸೇವಿಸದೆ ಬಿಟ್ಟಿದ್ದರೆ ಕೆಲವು ಪುರುಷಾರ್ಥಗಳ ಸೇವನೆಯೇ ಇಲ್ಲದೆ ಹೋಗಿ ಪುರುಷಾರ್ಥನ್ಯೂನತೆಯುಂಟಾಗುವುದರಿಂದಲೂ, ಬಾಲ್ಯದಲ್ಲಿ ಯಾವ ಪುರುಷಾರ್ಥವನ್ನು ಸೇವಿಸುವುದಕ್ಕೂ ಅಧಿಕಾರವಿಲ್ಲದುದರಿಂದಲೂ, ಯೌವನ ಬಂದ ಕೂಡಲೇ ಈ ನಾಲ್ಕು ಪುರುಷಾರ್ಥಗಳನ್ನೂ ಯಥಾಯೋಗ್ಯವಾಗಿ ಸೇವಿಸುತ್ತ ಬರಬೇಕು.

ಈ ರೀತಿಯಲ್ಲಿ ನಮ್ಮ ಆಯುಃಕಾಲವನ್ನು ವಿಭಾಗಮಾಡಿಕೊಂಡು ವಿನಿಯೋಗಿಸುತ್ತ ಬಂದರೆ 'ಸುಖಂ ಮೇ ಭೂಯಾತ್', 'ಶ್ರೇಯೋ ಮೇ ಭೂಯಾತ್' ಎಂಬ ಆಜನ್ಮಸಿದ್ಧವಾಗಿ ಸರ್ವತ್ರ ಪ್ರಾಣಿಗತವಾಗಿರುವ ಇಷ್ಟಾರ್ಥವು ಸಿದ್ಧಿಸುವುದು.

## ೧೩. 'ಮೈತ್ರಿ.'

" ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಂ ।
ಆಪದಾಂ ಹಿ ಪರಿತ್ರಾಣಂ ಮನಸ್ಸಂತಾಪಭೇಷಜಂ ॥ "

ಎಂದು ಯಾವ ಆಶಯವನ್ನು ಇಟ್ಟುಕೊಂಡು ಕವಿಯು ಹೀಗೆ ಹೇಳಿರುವನು ? ಕವಿಯು ಇಲ್ಲಿ ' ಮಿತ್ರಂ ' ಎಂಬ ಅಕ್ಷರದ್ವಯವೇ ಒಂದು ಅಮೃತವೆಂದು ಹೇಳಿರುವನು. ಈ ಅಕ್ಷರಗಳೇ ಅಮೃತಪ್ರಾಯವಾಗಿರುವಾಗ, ಈ ಅಕ್ಷರಗಳಿಂದ ವಾಚ್ಯವಾದ ವಸ್ತುವು, ಜರಾಮರಣವನ್ನು ಹೋಗಲಾಡಿಸಿ ದೇವತಾತ್ವವನ್ನು ಉಂಟುಮಾಡುವ ಅಮೃತಕ್ಕಿಂತಲೂ ಆದರಣೀಯತರವಾಗಿಯೇ ಇರಬೇಕು. ಆ ಅಮೃತವನ್ನೇ ಪಡೆಯಲು ಸರ್ವರೂ ಯತ್ನಿಸುತ್ತಿರುವಾಗ, ಮಿತ್ರನೆಂಬ ಈ ಅಮೃತವನ್ನು ಪಡೆಯಲು ಯತ್ನಿಸಬೇಕೆಂದು ಹೇಳಲೂ ಬೇಕೆ ?

ಕವಿಯೇ ಉತ್ತರಾರ್ಧದಲ್ಲಿ ' ಆಪದಾಂ ಹಿ ಪರಿತ್ರಾಣಂ, ' ಮನಸ್ಸಂತಾಪಭೇಷಜಂ ' ಎಂಬ ಸ್ಪೃಹಣೀಯವಾದ ಆ ಅಮೃತದಲ್ಲಿಲ್ಲದ ವಿಶೇಷಗುಣಗಳೆರಡು ಈ ಅಮೃತದಲ್ಲಿ ಉಂಟೆಂದು ಹೇಳುತ್ತಾನೆ. ಈ ಅಮೃತವಾವುದು ? ಈ ಅಮೃತದಲ್ಲಿ ಅನ್ಯಾದೃಶವಾದ ಗುಣಗಳಾವುವಿರುವುವು ? ಇದರ ಲಾಭದಿಂದ ನಮಗೆ ಉಂಟಾಗುವ ಸೌಖ್ಯವೇನು ? 'ಮಿತ್ರಂ ಪ್ರಾಪ್ನುತ ಸಜ್ಜನಾಃ ' ಎಂದು ಹಿತೈಷಿಗಳು ಏಕೆ ಹೇಳುವರು ?—ಎಂಬ ಈ ವಿಚಾರಗಳನ್ನು ಈ ಪ್ರಬಂಧದಲ್ಲಿ ಮಾಡುತ್ತೇನೆ.

ಸೋಮದೇವನು ' ಮೇದ್ಯತಿ = ಸ್ನಿಹ್ಯತಿ ಇತಿ, ಮಿತ್ರಂ ' ಎಂದರೆ ಒಳ್ಳೆಯಕಾಲದಲ್ಲಿಯೂ, ಕಷ್ಟಕಾಲದಲ್ಲಿಯೂ ಏಕರೀತಿಯಾಗಿ ಯಾವನು ಅಂಟಿಕೊಂಡಿರುತ್ತಾನೆಯೋ, ಅವನೇ ಮಿತ್ರನು ಎಂದು, ಹೇಳುತ್ತಾನೆ. ಈ ಅರ್ಥವು ' ಸ್ನೇಹ ' ' ಸ್ನೇಹಿತ ' ಎಂಬ ಶಬ್ದಗಳಿಂದಲೂ ಲಭಿಸುತ್ತದೆ ಈ ಅರ್ಥವನ್ನೇ ಎಷ್ಟು ಸ್ಪಷ್ಟವಾಗಿಯೂ, ಹೃದ್ಯವಾಗಿಯೂ

ಮತ್ತೊಬ್ಬನು ತಿಳಿಸುವನು ? "ಹೃದಯಗಳಿಗಿರುವ ಪರಸ್ಪರಾನುರಾಗವೇ ಮೈತ್ರಿ" ಎನ್ನುವನು. ಹೇಗೆ ವೀಣೆಯ ತಂತಿಗಳಲ್ಲಿ ನಾದಗಳು ಅನುಕೂಲವಾಗಿ ಹೊರಟರೆ ರಾಗವು ಇಂಪಾಗಿರುವುದೋ, ಹೇಗೆ ನಾದಗಳಲ್ಲಿ ಹೆಚ್ಚು ಕಡಮೆ ಇದ್ದರೂ ಅಥವಾ ಅವುಗಳನ್ನು ಒಂದೊಂದನ್ನೇ ಸ್ವರ ಮಾಡಿದರೂ ಇಂಪು ತೋರದೋ, ಹಾಗೆಯೇ ಹೃದಯಗಳಲ್ಲಿ ಅನುಕೂಲವಾದ ಅನುಪಘಾತಕವಾದ ಪರಸ್ಪರ ಪ್ರವೃತ್ತಿಯು ಇದ್ದಲ್ಲಿ, ಅದೇ ಮೈತ್ರಿ ಎನ್ನಿಸಿಕೊಳ್ಳುವುದು. ಒಂದೇ ಒಂದೇ ತಂತಿಯ ನಾದವು ಹೇಗೆ ಸಂಪೂರ್ಣವಾಗಿ ಇರದೋ, ಹಾಗೆಯೇ ಮಿತ್ರನಿಲ್ಲದವನು ಶೋಭಿಸನು. ಹೀಗಿರಲು, ಮೈತ್ರಿಯೆಂಬುದು ಹೃದಯಗಳಲ್ಲಿ ಪರಸ್ಪರವಾಗಿ ಉಂಟಾಗುವ ಅನುಕೂಲ್ಯಪ್ರವೃತ್ತಿಯೇ ಆಗಿರಬೇಕು. ಈ ವಿಧವಾದ ಅನುಕೂಲ್ಯಪ್ರವೃತ್ತಿರೂಪವಾದ ನೈಜಗುಣವು ಯಾವ ಮನುಷ್ಯನಲ್ಲಿ ಕಂಡುಬರುವುದಿಲ್ಲವೋ, ಆ ಮನುಷ್ಯನು, ಒಬ್ಬ ಕವಿಯು ಹೇಳುವಂತೆ, "ದೇವನಾಗಿಯೇ ಇರಬೇಕು ; ಇಲ್ಲವೆ ಕಾಡುಮೃಗಕ್ಕಿಂತಲೂ ನಿಕೃಷ್ಟನಾಗಿಯೇ ಇರಬೇಕು." ಮನುಷ್ಯನು ತನ್ನ ಅಭಿಮಾನವನ್ನು ಯಾವುದಾದರೂ ಒಂದು ವಸ್ತುವಿನಲ್ಲಿ ಇರಿಸದಿದ್ದರೆ, ಎಂದಿಗೂ ಇರಲಾರನು. ಕೆಲವರು ಲೋಕವನ್ನು ಬಿಟ್ಟು ನಿರ್ಜನಪ್ರದೇಶದಲ್ಲಿರುತ್ತಿದ್ದರೂ, ಒಂದು ಜಿಂಕೆಯನ್ನೋ, ಒಂದು ಗಿಣಿಯನ್ನೋ, ಒಂದು ನಾಯನ್ನೋ, ಇಲ್ಲವೆ ಒಂದು ಹಸುವನ್ನೋ, ಕಪಿಯನ್ನೋ, ಯಾವುದೋ ಒಂದು ಜೀವಜಂತುವನ್ನು ಸಾಕಿಕೊಂಡು, ಅದರ ಸಂತೋಷದಲ್ಲಿ ತಾವೂ ಸಂತೋಷಿಸುತ್ತಲೂ, ಅದರ ದುಃಖದಲ್ಲಿ ತಾವೂ ದುಃಖಿಸುತ್ತಲೂ, ತಾವು ಹುಟ್ಟಿದುದೇ ಅದರ ಸೇವೆಗಾಗಿಯೋ ಎಂಬಂತೆ ಕಾಲಕಳೆದಿರುವುದನ್ನು ಕೇಳಿರುತ್ತೇವೆ. ಇದಕ್ಕೆ ಕಾರಣವೇನಿರಬಹುದು ? ಮೈತ್ರಿಯಲ್ಲಿ ಯಾವುದೋ ಅನಿರ್ವಚನೀಯವಾದ ಒಂದು ಸೌಖ್ಯವಿದ್ದಿರಬೇಕು. ಹಾಗಿಲ್ಲದಿದ್ದರೆ

ಅವರು ಪಟ್ಟಣವನ್ನೂ ಬಂಧುಬಳಗವನ್ನೂ ಐಶ್ವರ್ಯವನ್ನೂ, ಒಟ್ಟೇನು, ಸರ್ವಸೌಖ್ಯವನ್ನು ಬಿಟ್ಟಿದ್ದರೂ ಏಕೆ ಹೀಗೆ ಮಾಡಾರು? ಮತ್ತೆ ಕೆಲರು ಪ್ರಾಪಂಚಿಕ ಸೌಖ್ಯವನ್ನು ತೊರೆದು, ಗೆಡ್ಡೆಗೆಣಸುಗಳನ್ನು ತಿನ್ನುತ್ತ, ನಿರ್ಜನಪ್ರದೇಶದಲ್ಲಿ ಎಲ್ಲಿಯೋ ಒಂದು ಬಂಡೆಯ ಮೇಲೆ ಕುಳಿತುಕೊಂಡು ತಪಸ್ಸು ಮಾಡುತ್ತ ಕಾಲವನ್ನು ಕಳೆವರು. ಇವರು ಪ್ರಾಪಂಚಿಕವಾದ, ಕ್ಷಣಿಕವಾದ, ಆತ್ಮನಿಷ್ಠವಾದ ಮೈತ್ರಿಯಲ್ಲಿರುವ ಈ ಅನ್ಯಾದೃಶ ಸೌಖ್ಯವನ್ನು ಭಗವಂತನಲ್ಲಿ ಸಂಪಾದಿಸಬೇಕೆಂಬ ಆಶೆಯಿಲ್ಲದಿದ್ದರೆ ಏಕೆ ಹೀಗೆ ಮಾಡುವರು? ಹೀಗೆ ಮಾಡಿ ಇವರು ಅನಿತ್ಯವಾದ, ಮಿತವಾದ, ಕ್ಷುದ್ರವಾದ ಈ ಸುಖಕ್ಕೆ ಪ್ರತಿಯಾಗಿ, ನಿತ್ಯವಾದ ಅಪರಿಮಿತವಾದ ಶ್ರೇಷ್ಠವಾದ ಆನಂದವನ್ನು ಹೊಂದುವರು. ಹೀಗಿರುವುದರಿಂದ ಪ್ರಾಪಂಚಿಕ ವಸ್ತುವಿನಲ್ಲಿ 'ಸ್ನೇಹಗುಣವಿಲ್ಲದವನು ದೇವನಾಗಿಯೇ ಇರಬೇಕು' ಎಂಬ ಕವಿವಾಕ್ಯದಲ್ಲಿ ಎಷ್ಟು ತಾತ್ಪರ್ಯವಡಗಿರಬೇಕು? ಮೃಗಾದಿಗಳಲ್ಲಿಯೂ ಮೈತ್ರಿಯನ್ನು ವಿಶೇಷವಾಗಿ ಕಾಣುತ್ತೇವೆ. ಮೈತ್ರಿಯು ಪ್ರಾಣಿಸಾಮಾನ್ಯವಾದ ಒಂದು ಗುಣವು. ಹೀಗಿರಲು ಹಸಿದಾಗ ತಿಂದು ನಿದ್ರೆಬಂದಾಗ ಮಲಗಿ ತಾನೇ ತಾನೆಂದು ತಿಳಿದಿರುವ ಮನುಷ್ಯನನ್ನು-ಕಷ್ಟಪಟ್ಟಾದರೂ ಹಸಿವನ್ನು ತಡೆದುಕೊಂಡಾದರೂ ಪರಸುಖವೇ ಸ್ವಸುಖವೆಂದೂ ಪರದುಃಖವೇ ಸ್ವದುಃಖವೆಂದೂ ತಿಳಿದು ಮಾಡುತ್ತಿವೆಯೋ ಎನ್ನುವಹಾಗೆ ತಮ್ಮ ಮರಿಗಳನ್ನೂ ತಮ್ಮ ಜತೆಯ ಪ್ರಾಣಿಗಳನ್ನೂ ಕಾಪಾಡಲು ಯತ್ನಿಸುವ, ಮೃಗಾದಿಗಳ ಗುಂಪಿಗೆ ಹೇಗೆತಾನೇ ಸೇರಿಸುವುದಕ್ಕಾದೀತು! ಹೀಗಿರುವುದರಿಂದ 'ಸ್ನೇಹವಿಲ್ಲದ ಮನುಷ್ಯನು ಮೃಗಕ್ಕಿಂತಲೂ ನಿಕೃಷ್ಟನೆಂದು' ಹೇಳಿದ ಆ ಕವಿಯ ಆಶಯವು ಎಷ್ಟು ದೊಡ್ಡದು! ಏವಂಚ, ಆತ್ಮಗಳಿಗಿರುವ ಪರಸ್ಪರಾನುರಾಗವೇ ಮೈತ್ರಿಯೆಂದೂ, ಅದು ಪ್ರತಿಕ್ರಿಯೆಯನ್ನು ಅಪೇಕ್ಷಿಸದ ಪ್ರಾಣಿಸಾಮಾನ್ಯವಾದ ಒಂದು ಗುಣವೆಂದೂ, ಅಂಥ ಗುಣವಿಲ್ಲ

ದಿದ್ದರೆ ಪ್ರಾಣೋತ್ಸವಕ್ಕೇನೆ ಹಾನಿ ಬರುವುದೆಂದೂ ಹೇಳದಂತಾಯಿತು. ಹೀಗೆಯೇ ಭವಭೂತಿಯೂ ಕೂಡ ಉತ್ತರರಾಮಚರಿತ್ರೆಯಲ್ಲಿ—" ಒಬ್ಬನಲ್ಲಿ ಒಬ್ಬನಿಗೆ ಸ್ವರಸವಾಗಿ ಸ್ವತಪಿನ ಪ್ರೀತಿಯುಂಟಾಗುವುದು ಯಾವುದುಂಟೋ, ಅದು ಬಹುತರವಾಗಿ ಪ್ರಾಣಿಗಳ ಧರ್ಮವೇ ಸರಿ. ಮತ್ತು ಒಬ್ಬನಿಗೆ ಮತ್ತೊಬ್ಬನಲ್ಲಿ ಕಾರಣವಿಲ್ಲದೆ ಉಂಟಾಗುವ ಯಾವ ಪಕ್ಷಪಾತವುಂಟೋ, ಆ ಪಕ್ಷಪಾತಕ್ಕೆ ಪ್ರತಿಕ್ರಿಯೆ ಇಲ್ಲ; ಆ ಪಕ್ಷಪಾತವು ಸ್ನೇಹರೂಪದಿಂ ಸೂತ್ರವಾಗಿ ಪ್ರಾಣಿಗಳ ಅಂತಃಕರಣವಂ ಕೂಡಿಸಿ ಬಂಧನಂಗೆಯ್ಯುತ್ತಲಿದೆ" ಎಂದು ಹೇಳಿರುವನು. ಆದುದರಿಂದಲೇ,

"ಯಸ್ಯ ಮಿತ್ರೇಣ ಸಂಭಾಷಾ ಯಸ್ಯ ಮಿತ್ರೇಣ ಸಂಸ್ಥಿತಿಃ |
ಯಸ್ಯ ಮಿತ್ರೇಣ ಸಂಲಾಪಃ ತತೋ ನಾಸ್ತೀಹ ಪುಣ್ಯವಾನ್ ||"

ಎಂದು ಎಲ್ಲರೂ ತಿಳಿಯುತ್ತಾರೆ.

* " ಕರಾವಿವ ಶರೀರಸ್ಯ ಪಕ್ಷ್ಮಣೀ ಇವ ನೇತ್ರಯೋಃ |
ಅಪ್ರೇರಿತೋ ಹಿತಂ ಕುರ್ಯಾತ್ ಯಸ್ತಂ ಮಿತ್ರಂ ವಿದುರ್ಬುಧಾಃ ||"

ಎಂದರೆ, ಶರೀರಕ್ಕೆ ಕೈಗಳಹಾಗೆಯೂ, ಕಣ್ಣುಗಳಿಗೆ ರೆಪ್ಪೆಗಳಹಾಗೆಯೂ ಅಪ್ರಾರ್ಥಿತವಾಗಿ ಯಾವನು ಕಷ್ಟವನ್ನು ನಿವಾರಿಸಿ ಹಿತವನ್ನು ಮಾಡುವನೋ, ಅವನೇ ಮಿತ್ರನು—ಎಂದು ಒಬ್ಬ ಕವಿಯು ಅಭಿಪ್ರಾಯಪಡುತ್ತಾನೆ. ಇಲ್ಲಿ ಕವಿಯು " ಆಪದಾಂ ಹಿ ಪರಿತ್ರಾಣಂ " ಎಂಬ ಮೈತ್ರಿಯ ಗುಣವನ್ನು ಎಷ್ಟು ಹೃದಯಂಗಮವಾಗಿ ವಿವರಿಸಿರುವನು.

---

* ಟೀಕು — " ಕರಾವಿವ ಶರೀರಸ್ಯ " — ಶರೀರಕ್ಕೆ ಕೈಗಳಹಾಗೆಯೂ, ಎಂದರೆ — ಶರೀರದ ಮೇಲೆ ಯಾವುದಾದರೂ ಬೀಳುವುದಕ್ಕೆ ಬಂದರೆ, ಶರೀರದ ಪ್ರೇರಣೆಯಿಲ್ಲದೆಯೇ ಕೈಗಳು ತಮಗೆ ತಾವೇ ಮುಂದು ಬರುತ್ತವೆ; ಯಾರಾದರೂ ಹೊಡೆವುದಕ್ಕೆ ಬಂದರೆ, ಮೊದಲು ತಾವೇ ಆ ಪೆಟ್ಟನ್ನು ಆತುಕೊಳ್ಳುತ್ತವೆ. ಅಲ್ಲದೆ ಶರೀರಕ್ಕೆ ಹಿತವಾದ ಆಹಾರಾದಿಗಳನ್ನು ತಾವೇ ಶ್ರಮಪಟ್ಟು ಒದಗಿಸಿಕೊಡುತ್ತವೆ. ಹೀಗೆಯೇ ಎಂದರ್ಥ. " ಪಕ್ಷ್ಮಣೀ ಇವ ನೇತ್ರಯೋಃ " — ಕಣ್ಣುಗಳಿಗೆ ರೆಪ್ಪೆಗಳಹಾಗೆಯೂ, ಎಂದರೆ — ಕಣ್ಣಿಗೆ

ಭರ್ತೃಹರಿಯು—

'ಪಾಪಾನ್ನಿವಾರಯತಿ ಯೋಜಯತೇ ಹಿತಾಯ ।
ಗುಹ್ಯಂ ನಿಗೂಹತಿ ಗುಣಾನ್ ಪ್ರಕಟೀಕರೋತಿ ॥
ಆಪದ್ಗತಂ ಚ ನ ಜಹಾತಿ ದದಾತಿ ಕಾಲೇ ।
ಸನ್ಮಿತ್ರಲಕ್ಷಣಮಿದಂ ಪ್ರವದಂತಿ ಸಂತಃ ॥'

ಎಂದರೆ—ಯಾವನು ನಮ್ಮನ್ನು ಪಾಪದ ದೆಸೆಯಿಂದ ತಪ್ಪಿಸಿ ಹಿತದಲ್ಲಿ ಸೇರಿಸುತ್ತಾನೆಯೋ, ಯಾವನು ನಮ್ಮ ಅಂತರಂಗವನ್ನು ಗೋಪ್ಯವಾಡಿ ನಮ್ಮ ಗುಣಗಳನ್ನು ಪ್ರಕಾಶಪಡಿಸುತ್ತಾನೆಯೋ, ಮತ್ತು ಯಾವನು ಆಪತ್ತು ಒದಗಿದ ಕಾಲದಲ್ಲಿಯೂ ನಮ್ಮನ್ನು ಬಿಡದೆ ಇದ್ದುಕೊಂಡು ಸಮಯದಲ್ಲಿ ಸಹಾಯಮಾಡುತ್ತಾನೆಯೋ, ಅವನೇ ಸನ್ಮಿತ್ರನು ಎಂದು ಹೇಳುತ್ತಾನೆ. ಇಲ್ಲಿಯೂ 'ಆಪದಾಂ ಹಿ ಪರಿತ್ರಾಣಂ' ಎಂಬ ಗುಣವೇ ವಿಸ್ತೃತವಾಯಿತು.

ಮತ್ತೊಬ್ಬನು—'ಮೈತ್ರಿಯು ಸಂತೋಷವನ್ನು ಹೆಚ್ಚಿಸಿ, ದುಃಖವನ್ನು ತಗ್ಗಿಸಿ, ಮನುಷ್ಯನನ್ನು ಧರಿಸುತ್ತದೆ' ಎಂದು ಹೇಳುತ್ತಾನೆ.

---

ದೂಳು ಬೀಳುವಹಾಗಿದ್ದರೆ, ತಟ್ಟನೆ ರೆಪ್ಪೆಗಳು ಮುಚ್ಚಿಕೊಂಡು, ಕಣ್ಣನ್ನು ಕಾಪಾಡುತ್ತವೆ. ಕಣ್ಣಿಗೆ ಏನಾದರೂ ಅಪಾಯ ಬರುವುದಾಗಿದ್ದರೆ, ನಮಗೆ ತಿಳಿಯದೆಯೇ ಅದನ್ನು ರೆಪ್ಪೆಗಳು ಕಾಪಾಡುತ್ತವೆ. ಹೀಗೆಯೇ ಎಂದರ್ಥ. "ಅಪ್ರೇರಿತಃ"—ಅಪ್ರಾರ್ಥಿತವಾಗಿ, ಎಂದರೆ—ಹೇಳಿಸಿಕೊಳ್ಳದೆಯೇ. "ಹಿತಂ"—ತಾತ್ಕಾಲಿಕ ಸುಖವಲ್ಲ; ಸದ್ಯಃ ದುಃಖರೂಪವಾಗಿದ್ದರೂ ಉತ್ತರೋತ್ತರ ಸುಖವಾಗಿ ಪರಿಣಮಿಸುವುದನ್ನು. "ಯಃ"—ಯಾವನು. "ಕುರ್ಯಾತ್"—ಮಾಡುತ್ತಾನೆಯೋ. "ತಂ"—ಅವನನ್ನು, "ಮಿತ್ರಂ"—ಮಿತ್ರನೆಂದು, "ಬುಧಾಃ ವಿದುಃ" ವಿದ್ವಾಂಸರು ತಿಳಿವರು. ಹೇಗೆ ಕೈಗಳೂ ರೆಪ್ಪೆಗಳೂ ಪರಪ್ರೇರಣೆಯಿಲ್ಲದೆ ಹಿತಮಾಡುವುದರಲ್ಲಿ ಪ್ರವರ್ತಿಸುವುವೋ, ಹಾಗೆಯೇ ಸನ್ಮಿತ್ರರು ಸ್ವಾಭಾವಿಕವಾಗಿ ಸ್ನೇಹಿತರ ಕಷ್ಟವನ್ನು ನಿವಾರಣೆ ಮಾಡುವುದೂ ಅಲ್ಲದೆ ಹಿತವನ್ನೂ ಮಾಡುವರು, ಎಂದು ತಾತ್ಪರ್ಯ.

ಇದು ಸ್ನೇಹದಿಂದುಂಟಾಗುವ ಮತ್ತೊಂದು ವಿಶೇಷ ಪ್ರಯೋಜನವು. ಅಲ್ಲಿ ಸುಖ ದುಃಖಗಳ ದಾಂದಲೆಗೆ ಸಿಕ್ಕಿ ಅಲ್ಲೋಲಕಲ್ಲೋಲವಾಗದಂತೆ ಒಂದೇ ಸ್ಥಿತಿಯಲ್ಲಿಟ್ಟು ಮನುಷ್ಯನನ್ನು ಕಾಪಾಡುವ ತ್ರಾಣವು ಮೈತ್ರಿಯಲ್ಲಿ ಉಂಟೆಂದು ಹೇಳಿದಂತಾಯಿತು.

ಮತ್ತೊಬ್ಬ ಕವಿಯು ಮೈತ್ರಿಯಲ್ಲಿ ಲಭಿಸುವ 'ಫಲ' ಗಳನ್ನೆಲ್ಲಾ ಪರಾಮರ್ಶಿಸಿ, ಅವುಗಳು ಮೂರೇ ಎಂದು ವಿಂಗಡಿಸಿ ಹೇಳುತ್ತಾನೆ. ಅವುಗಳು ಯಾವುವೆಂದರೆ:—

ಒಂದನೆಯ ಫಲ :—ಅತ್ಯಂತ ಸಂತೋಷಕಾಲದಲ್ಲಿಯೂ ಅತ್ಯಂತ ದುಃಖಕಾಲದಲ್ಲಿಯೂ ಯಾವುದೋ ಒಂದು ವಿಧವಾದ ಭಾರವು ಹೃದಯದಲ್ಲಿ ತೋರುವುದಷ್ಟೆ. ಆ ಭಾರವನ್ನು ಇಳಿಸುವುದಕ್ಕೆ ಸ್ನೇಹಿತನು ಬೇಕು. ಮನೋಗತವಾದ ಭಾರನಿವಾರಣೆಯಲ್ಲಿ ಸ್ನೇಹಿತನು ಹೆಗಲನ್ನು ಕೊಡುವನು. ನೀರು ತುಂಬಿ ತುಳುಕುತ್ತಿರುವ ಕೆರೆಗೆ ಕೋಡಿಯಂತೆ, ರಾಗದ್ವೇಷಾದಿಗಳಿಂದ ತುಂಬಿ ತುಳುಕುತ್ತಿರುವ ಹೃದಯಕ್ಕೆ ಮಿತ್ರನೆಂಬ ಕೋಡಿಯು ಅವಶ್ಯಕವು. ಮಿತ್ರನಲ್ಲಿ ನಮ್ಮ ಸುಖ, ದುಃಖ, ಭಯ, ಉತ್ಸಾಹ, ಅಭಿನಿವೇಶ, ಸಂಶಯ, ಆಶೆ, ಅಂತರಂಗ, ಮುಂತಾದುವುಗಳನ್ನು ತಿಳಿಸುತ್ತ ಬಂದರೆ ಹೃದಯದ ಭಾರವು ಕಡಮೆಯಾಗಿ ಹೃದಯಕ್ಕೆ ಒಂದು ನೆಮ್ಮದಿಯುಂಟಾಗುವುದು. ಇಂಥ ಕೋಡಿಯು ಇಲ್ಲದಿದ್ದರೆ ಮನುಷ್ಯನು ಬದುಕಲಾರನು. ಆದುದರಿಂದಲೆ ಅಲ್ಲವೆ ಅನೇಕ ರಾಜರುಗಳು ತಮಗೆ ಅನರ್ಥಗಳುಂಟಾಗಬಹುದೆಂದು ತಿಳಿದೂ ತಿಳಿದೂ, ಅಯೋಗ್ಯನಾದ ಮಿತ್ರನಲ್ಲಿಯೂ ಸ್ನೇಹವನ್ನು ಬಳೆಯಿಸಿ, ತಮ್ಮ ಅಂತರಂಗವನ್ನು ಹೊರಪಡಿಸಿರುವರು ? ಇದೇ ಮೊದಲನೆಯ ಪ್ರಯೋಜನವು.

ಎರಡನೆಯದು:— ಶರೀರಸೌಖ್ಯಕ್ಕೆ ಆರೋಗ್ಯವು ಹೇಗೋ, ಹಾಗೆ ಹೃದಯದ ಕ್ಷೇಮಕ್ಕೆ ಮೈತ್ರಿಯು. ಮೈತ್ರಿಯು ಬುದ್ಧಿಗೆ ಆರೋಗ್ಯವ

ನ್ನುಂಟುಮಾಡುವ ಒಂದು ಸಂಸ್ಕಾರವಾಗಿರುವುದು. ಸ್ನೇಹಿತನು ಸಂಶಯ ವಿಪ್ರಲಂಭಾದಿಗಳನ್ನು ಹೋಗಲಾಡಿಸಿ ಬುದ್ಧಿಯನ್ನು ಸರಿಯಾದ ಮಾರ್ಗದಲ್ಲಿ ನಡೆಸುವನು. ಮತಿಭೇದವೆಂಬ ಅಂಧಕಾರದಲ್ಲಿ ತೊಳಲುವ ಬುದ್ಧಿಯನ್ನು ವಿವೇಕವೆಂಬ ಸೂರ್ಯೋದಯಕ್ಕೆ ತಂದುಬಿಡುವನು. ಅನೇಕ ವಿಧವಾದ ಸಂಶಯಗಳೆಂಬ ಬಲೆಯಲ್ಲಿ ಸಿಕ್ಕುಬಿದ್ದು ನರಳುತ್ತಿರುವಾಗ, ಬುದ್ಧಿಯೂ ಮಲಿನವಾಗುವುದು ; ವಿವೇಕವೂ ತೊಲಗುವುದು. ಬುದ್ಧಿಗತವಾದ ವಿಷಯಗಳಿಗೆ ಪರಸ್ಪರಾಘಾತವುಂಟಾಗಿ ಬುದ್ಧಿಯೂ ಸ್ತಬ್ಧವಾಗುವುದು. ಇಂಥ ಕಾಲದಲ್ಲಿ ಸ್ನೇಹಿತನು ಬುದ್ಧಿಯ ಸಿಕ್ಕುಗಳನ್ನು ಬಿಡಿಸಿ, ಆ ವಿಷಯಗಳನ್ನು ಒಂದು ಕ್ರಮಕ್ಕೆ ತಂದು, ಅವುಗಳಿಗೆ ಸುಂದರವಾದ ವಾಙ್ಮಯವಾದ ಉಡುಪನ್ನು ಕೊಟ್ಟು, ನಮಗೆ ತೋರಿಸುವನು. ಆಗ ನಮ್ಮ ಬುದ್ಧಿಯೂ ಹೆಚ್ಚಾದ ಪ್ರಕಾಶವನ್ನು ಹೊಂದುವುದು; ವಿವೇಕವು ಪ್ರಕಾಶಿಸುವುದು; ನಮ್ಮ ಅಭಿಪ್ರಾಯಗಳಿಗೆ ನಾವೇ ವಿಸ್ಮಿತರಾಗಿ ನಾವು ಬೇರೆ ಒಬ್ಬ ಬುದ್ಧಿವಂತನಾದ ಮನುಷ್ಯನೆಂಬ ಭಾವವೂ ಹುಟ್ಟುವುದು. ಇವುಗಳೆಲ್ಲವೂ ಸ್ನೇಹಿತನಲ್ಲಿ ನಮ್ಮ ಮನೋಗತವನ್ನು ತಿಳಿಸುವುದರಿಂದಲ್ಲವೆ ಉಂಟಾಗುವುವು ? ಇದೇ ಮೈತ್ರಿಯ ಎರಡನೆಯ ಪ್ರಯೋಜನವು.

ಮೈತ್ರಿಯ ಮೂರನೆಯ ಫಲವು "ಅನೇಕ ಬಿತ್ತುಗಳನ್ನುಳ್ಳ ದಾಳಿಂಬದ ಹಣ್ಣಿನಂತಿರುವುದು" ಎಂದು ಆವನು ಹೇಳುತ್ತಾನೆ. ಸರ್ವಕಾಲದಲ್ಲಿಯೂ ಸರ್ವಕೃತ್ಯಗಳಲ್ಲಿಯೂ ಮಿತ್ರನು ಸಹಾಯಕನಾಗಿರುವನೆಂಬುದೇ ಆ ಫಲವು. ಆ ಫಲದ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ, ಮನುಷ್ಯನಿಗೆ ತನ್ನ ಕೈಯಲ್ಲಿ ಸಾಧ್ಯವಾಗದ, ತನಗೆ ಅವಶ್ಯಕವಾಗಿ ಬೇಕಾಗಿರುವ ಕಾರ್ಯಗಳೆಷ್ಟಿರುವುವೆಂಬುದನ್ನು ವಿಚಾರಮಾಡಬೇಕಾಗಿದೆ. ಆಗಲಲ್ಲವೆ ಪೂರ್ವಿಕರು ಹೇಳುವ 'ಮಿತ್ರನು ಹೊರಗಣ

ಪ್ರಾಣವು' ಎಂಬ ಮಾತಿನ ಅರ್ಥವು ಗೊತ್ತಾಗುವುದು. ಅವರು 'ಮಿತ್ರನು ತನಗಿಂತ ಶ್ರೇಷ್ಠವಾದ ಹೊರಗಣ ಪ್ರಾಣವು' ಎಂದು ಹೇಳಿದ್ದರೆ, ಇನ್ನೂ ಚೆನ್ನಾಗಿದ್ದಿತು. ಅನೇಕರು ಆರಂಭಮಾಡಿದ ಇಷ್ಟಕೃತ್ಯವನ್ನು ಪೂರ್ತಿಮಾಡಲಾರದೆ ಪ್ರಾಣಬಿಡುವರು. ಇಷ್ಟಾರ್ಥವನ್ನು ಸಾಧಿಸಿಕೊಳ್ಳುವುದಕ್ಕೆ ಸಾವು ಅವರಿಗೆ ಅವಕಾಶ ಕೊಡದೆ ಹೋಗುವುದು; ಆರಂಭಿಸಿದ ಕೆಲಸವು ಅರ್ಧದಲ್ಲಿಯೇ ನಿಂತುಹೋಗುವುದು. ಅಂಥವರಿಗೆ ಸ್ನೇಹಿತನೊಬ್ಬನಿದ್ದರೆ, ಆರಂಭಮಾಡಿದ ಕೆಲಸವನ್ನು ಆತನಿಗೆ ಒಪ್ಪಿಸಿ, ಆತನು ತಮ್ಮ ಮನೋರಥವನ್ನು ಇತೋಽಪ್ಯತಿಶಯವಾಗಿ ಪೂರ್ತಿಮಾಡುವನೆಂಬ ನಂಬಿಕೆಯಲ್ಲಿ ಸುಖವಾಗಿ ಪ್ರಾಣಬಿಡಬಹುದು. ಮನುಷ್ಯನಿಗೆ ಇರುವುದು ಒಂದೇ ಶರೀರವಾದರೂ, ಆ ಶರೀರದೊಡನೆ ಒಂದೇ ಕಡೆಯಲ್ಲಿ ಇರಬಹುದಾದರೂ, ಮಿತ್ರನೆಂಬ ಶರೀರವಿದ್ದಲ್ಲಿ ಏಕಕಾಲದಲ್ಲಿ ಅನೇಕಕಡೆ ಇರಬಹುದು. ಮನುಷ್ಯನು ನಡೆನುಡಿಗಳಲ್ಲಿ ಕೆಲಕೆಲವು ಮರ್ಯಾದೆಗಳನ್ನು ಮೀರಲರಿಯನು. ಎಷ್ಟೋ ವಿಷಯಗಳು ತಾನೇ ಹೇಳಿದರೂ, ತಾನೇ ಮಾಡಿಕೊಂಡರೂ, ಹೇಯವಾಗಿ ಪರಿಣಮಿಸುವುವು. ಅಂಥ ವಿಷಯಗಳನ್ನು ಸ್ನೇಹಿತನ ಮುಖಾಂತರ ಮಾಡಿಸಿದರೆ ಅವುಗಳು ಎಷ್ಟೋ ರಮಣೀಯವಾಗುವುವು. ಹಿರಿಯರಲ್ಲಿ ನಮ್ಮ ಯೋಗ್ಯತೆಯನ್ನು ನಾವೇ ಹೇಳಿಕೊಳ್ಳುವುದಕ್ಕಾದೀತೆ? ಅನ್ಯರಲ್ಲಿ ಹೋಗಿ ನಮಗೆ ಬೇಕಾಗುವ ವಸ್ತುವನ್ನು ಬೇಡಿಕೊಳ್ಳುವುದಕ್ಕಾದೀತೆ? ಸ್ನೇಹಿತನಾದರೋ, ದೊಡ್ಡವರ ಮುಂದೆಯೂ ನಮ್ಮನ್ನು ಕೊಂಡಾಡುವನು; ಅದರಿಂದ ನಮಗೂ ಹೇಳನವಿಲ್ಲ, ಅವನಿಗೂ ಕೊರತೆಯಿಲ್ಲ, ನಮಗೂ ಮೇಲ್ಮೆಯುಂಟಾಗುವುದು. ನಮ್ಮ ಇಷ್ಟಾರ್ಥವೂ ಕೈಗೂಡುವುದು. ಹೀಗೆಯೇ ಬಂಧುಗಳಲ್ಲಿಯೂ ಸಮರ್ಪಕವಾಗಿಯೂ ಸಂಪೂರ್ಣವಾಗಿಯೂ ಇರುವ ರೀತಿಯಲ್ಲಿ ಅನೇಕ ಕಾರ್ಯಗಳನ್ನು ನಾವೇ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅಂಥವುಗ

ಳನ್ನು ಸ್ನೇಹಿತನ ಮುಖಾಂತರವಾಗಿಯೇ ಮಾಡಿಸಿಕೊಳ್ಳಬೇಕಾಗುವುದು. ಪ್ರತಿಯೊಬ್ಬ ಮನುಷ್ಯನೂ ತಾನು ತನ್ನ ಮಗನೊಡನೆ ತಂದೆಯಹಾಗೂ, ಪತ್ನಿಯೊಡನೆ ಪತಿಯಹಾಗೂ, ಗುರುವಿನೊಡನೆ ಶಿಷ್ಯನಹಾಗೂ ನಡೆನುಡಿ ವ್ಯವಹಾರಗಳಲ್ಲಿ ಆಚರಿಸಬೇಕೇ ಹೊರತು, ಅನ್ಯಥಾ ಆಗುವುದಿಲ್ಲ. ಸ್ನೇಹಿತನಾದರೋ ಹಾಗಲ್ಲ. ಎಲ್ಲಾ ವಿಷಯಗಳನ್ನು ಎಲ್ಲಾ ಸ್ಥಿತಿಯ ಲ್ಲಿಯೂ ಆತನೊಡನೆ ಹೇಳಬಹುದು; ಆತನಿಂದ ಕೇಳಲೂ ಬಹುದು. ಸ್ನೇಹಿತನು ನಮ್ಮ ವಿಷಯದಲ್ಲಿ ಕೆಲವುವೇಳೆ ತಂದೆಯಹಾಗೂ, ಕೆಲವು ವೇಳೆ ತಾಯಿಯಹಾಗೂ, ಕೆಲವುವೇಳೆ ಪತ್ನಿಯಹಾಗೂ, ಕೆಲವುವೇಳೆ ಮಗನಹಾಗೂ, ಕೆಲವುವೇಳೆ ಇತರ ಬಂಧುಗಳ ಹಾಗೂ, ಕೆಲವುವೇಳೆ ಗುರುವಿನಹಾಗೂ, ಕೆಲವುವೇಳೆ ಶಿಷ್ಯನಹಾಗೆಯೂ ಇದ್ದುಕೊಂಡು, ನಮ್ಮನ್ನು ಶಿಕ್ಷಿಸಲು ಸಾಧ್ಯವು. ಈ ರೀತಿಯಾಗಿ ಈ ಮೂರನೆಯ ಫಲ ವನ್ನು ವಿಸ್ತರಿಸುತ್ತ ಬಂದರೆ ಮುಕ್ತಾಯವೇ ಇರುವುದಿಲ್ಲ. ಆದುದರಿಂದ ಮನುಷ್ಯನು ಸನ್ಮಿತ್ರನನ್ನು ಪಡೆವ ಅದೃಷ್ಟವನ್ನು ಹೊಂದದಿದ್ದರೆ, ಅವನು ಜನಗಳ ಮಧ್ಯದಲ್ಲಿದ್ದರೂ ಶೂನ್ಯಾರಣ್ಯದಲ್ಲಿ ಸಾವನನಂತಿರುವನು.

ಈ ಕವಿಯು ವಿಂಗಡಿಸಿದ ಈ ಮೂರು ಪ್ರಯೋಜನವೂ, ಪರ್ಯಾಲೋಚನೆ ಮಾಡಿ ನೋಡಿದರೆ, 'ಆಪದಾಂ ಹಿ ಪರಿತ್ರಾಣಂ' 'ಮನಸ್ಸಂತಾಪಭೇಷಜಂ' ಎಂಬ ಎರಡು ಗುಣಗಳಲ್ಲಿಯೇ ಅಡಕವಾಗಿ ದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಮತ್ತೊಬ್ಬನು—"ಮಿತ್ರನೊಬ್ಬನಿದ್ದರೆ, ಕೋಟಿಯ ನಿಧಿಯೂ ಇದ್ದಂತೆ" ಎಂದು ಮಿತ್ರನ ಮಹಿಮಾತಿಶಯವನ್ನು ಹೇಳಿ, ಆತನಿಗೆ ಸಮ ವಾದ ಪದಾರ್ಥವಸ್ತುವೇ ಇಲ್ಲವೆಂದು ಹೇಳುತ್ತಾನೆ. ಆ ಕವಿಯೇ ಮತ್ತೊಂ ದು ಕಡೆಯಲ್ಲಿ "ಸನ್ಮಿತ್ರಂ ಜೀವನೌಷಧಂ" ಎಂದು ಹೇಳಿ, ಮಿತ್ರನು ಆಪ ತ್ತನ್ನು ತಪ್ಪಿಸಿ ಸಂಪತ್ತನ್ನು ಒದಗಿಸಿಕೊಡುತ್ತಾನೆಂದು ಹೇಳುತ್ತಾನೆ.

ಇಲ್ಲಿ ಕವಿಯು ಪ್ರಪಂಚದಲ್ಲಿ ಹುಟ್ಟಿದವರಿಗೆಲ್ಲಾ ಸಹಜವಾದ ಮನೋವ್ಯಾಧಿಯನ್ನು ಗುಣಮಾಡುವುದರಲ್ಲಿ ಮಿತ್ರನಿಗಿರುವ ಸಾಮರ್ಥ್ಯವನ್ನು "ಜೀವನದ ಔಷಧಂ" ಎಂಬ ಮಾತಿನಿಂದ ಸ್ಪಷ್ಟಪಡಿಸಿ, ಎಷ್ಟು ಆಹ್ಲಾದವನ್ನುಂಟುಮಾಡಿರುವನು !

ಹೀಗಿರುವುದರಿಂದ ಮನುಷ್ಯನಿಗೆ ಅಮೃತಪ್ರಾಯವಾಗಿಯೂ, ಪ್ರಾಕಾರರೂಪವಾಗಿಯೂ, ಜೀವನೌಷಧವಾಗಿಯೂ ಇರುವ ಸ್ನೇಹಿತನು ಅವಶ್ಯಕವಾಗಿ ಬೇಕಾಗಿರುವ ವಸ್ತುವೇ ಸರಿ. ಅಂಥ ಸ್ನೇಹಿತನೆಂಬ ರತ್ನವನ್ನು ಎಲ್ಲಿ ಹುಡುಕಬೇಕು ? ಸಮುದ್ರದಲ್ಲಿ ರತ್ನಗಳು ಅಡಗಿಕೊಂಡಿರುವಂತೆ, ಎಲ್ಲಿಯೋ ಸ್ನೇಹಿತರು ಕಾಣವಹಾಗಿರುವರು. ಸವಿಮಾತುಗಳಾಡುವವರೆಲ್ಲರೂ ಸ್ನೇಹಿತರಾಗುವುದಿಲ್ಲ.' ಮಾತು ಬಳ್ಳಿಯದಾಗಿದ್ದರೆ, ಊರೇ ಬಳ್ಳಿಯದು.' 'ಸರಿಸರಿಯಾಗಿದ್ದರೆ, ಪರಿಪರಿಯಾಗಿ ನೆಂಟರು.' 'ಬಳ್ಳಿಯಮಾತು ಬಹುಮಂದಿ ಸ್ನೇಹಿತರನ್ನು ಕೊಡುವುದು.' ಆದರೂ ಸಾವಿರ ಜನಗಳಲ್ಲಿ ಹೃದಯಕ್ಕೆ ಹಿತನಾಗಿರುವ ಒಬ್ಬ ಮಿತ್ರನು ಕೂಡ ಸಿಕ್ಕುವನೋ ಇಲ್ಲವೋ ? ಅನೇಕರು ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ನಮ್ಮಲ್ಲಿ ಬಂದು ಸೇರುವರು. ಆ ಉದ್ದೇಶವು ಕೈಗೂಡಿದ ಕೂಡಲೆ ಅವರು ಎಲ್ಲಿಯೋ ಮಾಯವಾಗುವರು. ಅಗುಳಿದ್ದಾಗ ಬಂದು ಮುತ್ತುವ ಕಾಗೆಗಳಂತೆ ಧನವಿದ್ದಾಗ ಹತ್ತಿರಬರುವರು; ಅಗುಳು ತೀರಿದಮೇಲೆ ಪರೆದುಹೋಗುವ ಕಾಗೆಗಳಂತೆ ಕಷ್ಟಕಾಲದಲ್ಲಿ ನಮ್ಮನ್ನು ಬಿಟ್ಟು ತೊಲಗುವರು. ಅನೇಕರು ಅಂತಶ್ಶತ್ರುಗಳಾಗಿದ್ದು ನಮ್ಮೊಡನೆ ಏಕದೇಹನ್ಯಾಯದಿಂದ ಬೆರಸಿರುವಂತೆ ನಟಿಸಿಕೊಂಡಿದ್ದು, ಕಾರ್ಯವನ್ನು ಸಾಧಿಸಿಕೊಂಡಮೇಲೆ ನಮ್ಮ ಹತ್ತಿರ ನಿಲ್ಲದೆ ಓಡಿಹೋಗುವರು. ಇನ್ನು ಕೆಲವರು ಊಟ ಉಪಚಾರಕ್ಕಿಲ್ಲದೆ ಸ್ನೇಹಿತರಂತೆ ನಮ್ಮಲ್ಲಿ ಬಂದು ಸೇರುವರು. ಮತ್ತೆ ಕೆಲವರು ಕೆರೆಯಲ್ಲಿ ನೀರಿದ್ದಾಗ ಕಪ್ಪೆಗಳಂತೆ ಸೇರಿ,

ಆರ್ಘಟಿಸಿ, ನಮ್ಮನ್ನು ಹೊಗಳಿ, ಕೊಂಡಾಡಿ, ಇಷ್ಟು ಅಲ್ಲದೆ ನಮ್ಮ ಸೇವಕರ ಮೇಲೆ ನಮಗಿಂತ ಹೆಚ್ಚಾದ ಅಧಿಕಾರವನ್ನು ತೋರಿಸುವರು. ಇವರೆಲ್ಲರೂ ನಮಗೆ ಕಷ್ಟಪ್ರಾಪ್ತವಾದಾಗ,

" ಅರ್ಥಪ್ರಾರ್ಥನಶಂಕಯಾ ನ ಕುರುತೇ ಸಂಲಾಪಮಾತ್ರಂ "

ಎಂಬ ಮರ್ಯಾದೆಯಲ್ಲಿ, ಎಲ್ಲಿ ಕಂಡರೆ ಧನವನ್ನು ಯಾಚಿಸುವರೋ ಎಂದು ಹೆದರಿ, ಕಂಡರೂ ಕಾಣದವರಂತೆ, ತಲೆತಪ್ಪಿಸಿಕೊಂಡು ಮರೆಯಾಗು ವರು. ಇಂಥ ಕಪಟ ಮಿತ್ರರನ್ನು ತಿಳಿವುದಕ್ಕೆ

" ತತ್ರ್ಯನಿಕಷಗ್ರಾವಾ ತು ತೇಷಾಂ ವಿಪತ್ "

ಎಂಬಂತೆ, ನಮ್ಮ ವಿಪತ್ತೇ ಒಂದು ಒರೆಗಲ್ಲಾಗಿರುವುದು. ಆದುದರಿಂದಲೇ " ಆಪತ್ಸು ಮಿತ್ರಂ ಜಾನೀಯಾತ್ " ಎಂಬ ಲೋಕ ವಾರ್ತೆಯು ಹುಟ್ಟಿ ರುವುದು.

ಕೃತ್ರಿಮಮಿತ್ರರನ್ನು ತಿಳಿದುಕೊಳ್ಳುವುದಕ್ಕೆ ಭರ್ತೃಹರಿಯು ಸರ್ವ ವಿದಿತವಾದ ಒಂದು ದೃಷ್ಟಾಂತವನ್ನು ಹೇಳುತ್ತಾನೆ. ಅದೇನೆಂದರೆ:—

" ಆರಂಭಗುರ್ವೀ ಕ್ಷಯಿಣೀ ಕ್ರಮೇಣ ।
ಲಘ್ವೀ ಪುರಾ ವೃದ್ಧಿಮುಪೈತಿ ಪಶ್ಚಾತ್ ॥
ದಿನಸ್ಯ ಪೂರ್ವಾರ್ಧಪರಾರ್ಧಭಿನ್ನಾ ।
ಛಾಯೇವ ಮೈತ್ರೀ ಖಲಸಜ್ಜನಾನಾಂ ॥ "

(ಟೀಕು—ಪ್ರಾರಂಭದಲ್ಲಿ ಮಹತ್ತಾಗಿದ್ದು ಕ್ರಮೇಣ ಕ್ಷಯಿಸಿಹೋ ಗುವುದು, ಮೊದಲು ಲಘುವಾಗಿದ್ದು ಬರುತ ಬರುತ ವೃದ್ಧಿಹೊಂದುವುದು. ಈ ಸ್ವಭಾವಗಳುಳ್ಳ ಪೂರ್ವಾಹ್ನದ ಮತ್ತು ಅಪರಾಹ್ನದ ನೆರಳುಗಳ ಹಾಗೆ ದುರ್ಜನರ ಮತ್ತು ಸಜ್ಜನರ ಸ್ನೇಹವಿರುವುದು. ಎಂದರೆ—ಹೇಗೆ ನಮ್ಮ ನೆರಳು ಬೆಳಗ್ಗೆ ಅತಿದೀರ್ಘವಾಗಿದ್ದರೂ ಕ್ರಮಕ್ರಮವಾಗಿ ಹ್ರಾಸಹೊಂ ದುತ್ತ, ಮಧ್ಯಾಹ್ನದ ವೇಳೆಗೆ ಕಾಲಿನ ಹತ್ತಿರಕ್ಕೆ ಬಂದು, ಕೊನೆಗೆ ಕಾಣ

ಸದೆ ಹೋಗುವುದೋ, ಹಾಗೆಯೇ ದುರ್ಜನರ ಸ್ನೇಹವು ಆರಂಭದಲ್ಲಿ ಹೆಚ್ಚಾಗಿ ಕಾಣಿಸಿಕೊಂಡು ಕ್ರಮವಾಗಿ ಕಡಮೆಕಡಮೆಯಾಗುತ್ತಾ ಕೊನೆಗೆ ನಿರ್ನಾಮವಾಗಿ ಹೋಗುತ್ತದೆ; ಸಜ್ಜನರ ಸ್ನೇಹವು ಮಧ್ಯಾಹ್ನದಮೇಲೆ ಸ್ವಲ್ಪವಾಗಿ ಆರಂಭಿಸಿ ಉತ್ತರೋತ್ತರ ಹೆಚ್ಚುವ ನೆರಳಿನಂತೆ, ನಮ್ಮ ಕಷ್ಟಕಾಲದಲ್ಲಿ ಅತ್ಯಲ್ಪವಾಗಿ ಜನಿಸಿ, ವಿಶೇಷವಾಗಿ ಬೆಳೆಯುತ್ತಾ ಬರುತ್ತಿರುವುದು.)

ಆದರೆ ಸನ್ಮಿತ್ರರನ್ನು ಯಾವ ಕಡೆ ಹುಡುಕಬೇಕು, ಎಂದು ಕೇಳಿದರೆ—

" ಯಯೋರೇವ ಸಮಂ ವಿತ್ತಂ ಯಯೋರೇವ ಸಮಂ ಶ್ರುತಂ ।
ತಯೋರ್ವಿವಾಹಸ್ಸಖ್ಯಂ ಚ ನ ತು ಪುಷ್ಟವಿಪುಷ್ಟಯೋಃ ॥
ನ ದರಿದ್ರೋ ವಸುಮತೋ ನಾವಿದ್ವಾನ್ ವಿದುಷಸ್ಸಖಾ ।
ನ ಶೂರಸ್ಯ ಸಖಾ ಕ್ಲೀಬಃ ... .... .. . .... .... ।
ನಾಶ್ರೋತ್ರಿಯ ಶ್ಶ್ರೋತ್ರಿಯಸ್ಯ ನಾರಥೀ ರಥಿನ ಸ್ಸಖಾ ॥
ಸಾಮ್ಯದ್ಧಿ ಸಖ್ಯಂ ಭವತಿ ವೈಷಮ್ಯಾನ್ನೋಪಪದ್ಯತೇ ॥ "

ಎಂದು ದ್ರುಪದನು ದ್ರೋಣಾಚಾರ್ಯರಿಗೆ ಹೇಳಿದ ಮಾತಿನಪ್ರಕಾರ, ಎಲ್ಲೆಲ್ಲಿ ಗುಣ, ಜ್ಞಾನ, ಐಶ್ವರ್ಯ, ಅಧಿಕಾರ, ಆಚಾರ, ವಯಸ್ಸು ಮೊದಲಾದ ವಿಷಯಗಳಲ್ಲಿ ಸಾಮ್ಯವಿರುವುದೋ ಆ ಕಡೆ ಮಾತ್ರವೇ ಉಂಟಾದ ಸ್ನೇಹವು ಸ್ನೇಹವಾಗಿ ಪರಿಣಮಿಸುವುದು; ಉಳಿದ ಕಡೆ ಉಂಟಾದ ಸ್ನೇಹವು ಯಾವುದೋ ಒಂದು ವ್ಯಾಜಾಂತರದಿಂದ ಉಂಟಾದುದೆಂದೇ ತಿಳಿಯಬೇಕು. ಆದುದರಿಂದಲೇ ಒಬ್ಬನು

" ದದಾತಿ ಪ್ರತಿಗೃಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ ।
ಭುಂಕ್ತೇ ಭೋಜಯತೇ ಚೈವ ಷಡ್ವಿಧಂ ಮಿತ್ರಲಕ್ಷಣಂ " ॥

( ಎಂದರೆ — ೧ ಕೊಡೋಣ, ೨ ಕೊಳ್ಳೋಣ, ೩ ಗೋಪ್ಯವನ್ನು ಹೇಳೋಣ, ೪ ಕೇಳೋಣ, ೫ ಊಟಮಾಡೋಣ, ೬ ಊಟಕ್ಕಿಡೋಣ —

ಇವಾರು ಲಕ್ಷಣಗಳು ಎಲ್ಲಿರುವುವೋ, ಅಲ್ಲಿ ಮೈತ್ರಿಯು ನೆಲೆಗೊಂಡಿರುವುದು.) ಎಂದು ಮೈತ್ರಿಗೆ ಸಾಮಾನ್ಯ ಲಕ್ಷಣವನ್ನು ಹೇಳುತ್ತಾನೆ. ಇಂಥ ಕಡೆ ಉಂಟಾದ ಸ್ನೇಹಕ್ಕೆ ಬಾಧುವೇಳೆ ಕುಂದಕ ಬಂದರೂ, ಕೊಳೆ ತೆಗೆದ ರತ್ನದಂತೆ, ಕುಂದಕ ನಿವಾರಣವಾಗಲು, ಅದು ಪೂರ್ವದಂತೆ ನೇರವಾಗುವುದು.

ಒಟ್ಟು, ಆಲೋಚನೆ ಮಾಡಿ ನೋಡಿದರೆ, ಸೋಮದೇವನು ತನ್ನ ನೀತಿವಾಕ್ಯಾಮೃತವೆಂಬ ಗ್ರಂಥದಲ್ಲಿ ಹೇಳುವಂತೆ—

೧ ಕಷ್ಟಕಾಲದಲ್ಲಿ ಸಹಾಯಮಾಡಲು ಹತ್ತಿರಬರುವುದೂ,

೨ ಪರಸ್ಪರ ಆಶಯವನ್ನು ಕಪಟವಿಲ್ಲದೆ ತಿಳಿಸುವುದೂ,

೩ ಸ್ತ್ರೀಯರ ವಿಷಯದಲ್ಲಿ ತ್ರಿಕರಣಶುದ್ಧಿ,

೪ ಕೋಪಪ್ರಸಾದನ ವಿಷಯದಲ್ಲಿ ಅನುಕೂಲತೆ,

ಎಂಬ ಈ ನಾಲ್ಕು ಗುಣಗಳೂ ಸನ್ಮಿತ್ರರುಗಳಲ್ಲಿ ಅವಶ್ಯಕವಾಗಿರಬೇಕು.

೧ ದಾನಕ್ಕಾಗಿ ಪ್ರೀತಿಸೋಣ,

೨ ಸ್ವಪ್ರಯೋಜನದಲ್ಲಿಯೇ ದೃಷ್ಟಿ ಇಡೋಣ,

೩ ಕಷ್ಟಕಾಲಗಳಲ್ಲಿ ಅನಾದರಣೆ ಮಾಡೋಣ,

೪ ಅಹಿತವನ್ನು ತಾನು ಮಾಡೋಣ,

೫ ಇತರರಿಂದ ಮಾಡಿಸೋಣ,

೬ ಕಪಟವಿನಯ—

ಇವು ಆರೂ, ಮಿತ್ರರಲ್ಲಿ ಉಂಟಾಗುವ ದೋಷಗಳು. ಇವುಗಳನ್ನು ಅವಶ್ಯಕವಾಗಿ ಬಿಡಲು ಯತ್ನಿಸಬೇಕು.

೧ ಸ್ತ್ರೀಸಂಗತಿ,

೨ ವಿರುದ್ಧಭಾಷಣ

೩ ಪದೇ ಪದೇ ಯಾಚಿಸುವಿಕೆ,

೪ ಕೇಳದುದನ್ನು ಕೊಡದೆ ಇರೋಣ,

೫ ಅರ್ಥಸಂಬಂಧ,

೬ ದೋಷಗಳನ್ನೇ ಎಣಿಸುವಿಕೆ,

೭ ನಿಂದೆ ಕೇಳೋಣ,—

ಇವು ಏಳೂ ಇದ್ದ ಮೈತ್ರಿಯು ಕೆಡುವುದಕ್ಕೆ ಕಾರಣಗಳಾಗುವುವು.

ಕವಿಗಳು ಸನ್ಮಿತ್ರರನ್ನು ಹಾಲಿಗೂ ನೀರಿಗೂ ಹೋಲಿಸಿ ಹೇಳುವರು. ಹಾಲಿಗಿಂತ ಉತ್ತಮನಾದ ಸ್ನೇಹಿತನು ಯಾರೂ ಇಲ್ಲವೆಂದು, ಹೇಳುವರು. ಹಾಲು ತನ್ನೊಡನೆ ಸೇರಿದಕೂಡಲೆ ನೀರನ್ನು ತನ್ನಂತೆ ಮಾಡಿಕೊಳ್ಳುವುದು. ನೀರಿಗೆ ಸಮವಾದ ಮಿತ್ರನೂ, ಯಾರೂ ಇಲ್ಲವೆಂದೂ ಹೇಳುವರು. ನೀರು ತನ್ನೊಡನೆ ಸೇರಿದಮಾತ್ರದಿಂದಲೇ ಹಾಲನ್ನು ಹೆಚ್ಚಿಸುತ್ತದೆ. ಮತ್ತು ಸ್ನೇಹಿತನಿಗೆ ಸಂತಾಪವುಂಟಾದರೆ ತಾನು ಸುಂಡಿಹೋಗುವುದೂ ಅಲ್ಲದೆ ಪ್ರಾಣಕೊಟ್ಟು ಆತನನ್ನು ರಕ್ಷಿಸುತ್ತದೆ. ನೀರೂ ಹಾಲೂ ಹೇಗೆ ಇರುವುವೋ, ಹಾಗೆಯೇ ಸ್ನೇಹಿತರಿರಬೇಕೆಂದು ಕವಿಗಳ ತಾತ್ಪರ್ಯ.

ವಿವೇಕವಿಲ್ಲದ ಮೃಗಾದಿಗಳೂ ಕೂಡ ಉಪಕಾರಹೊಂದಿದ ಕಡೆ ಯಾವುದೋ ವ್ಯಾಜವನ್ನಿಟ್ಟುಕೊಂಡಾದರೂ ಪ್ರತ್ಯುಪಕಾರ ಮಾಡುತ್ತವೆ; ಎಂದಿಗೂ ಅಪಕಾರ ಮಾಡುವುದಿಲ್ಲ. ಆದರೆ ಮನುಷ್ಯರು ಪ್ರಾಯಶಃ ಹಾಗಲ್ಲ. ಈ ವಿಷಯದಲ್ಲಿ ಅನೇಕ ಇತಿಹಾಸಗಳು ಹುಟ್ಟಿರುವುವು. ಇದರಿಂದ ಮನುಷ್ಯರಲ್ಲಿ ಸನ್ಮಿತ್ರರು ಇಲ್ಲವೇ ಇಲ್ಲವೆಂದು ತಾತ್ಪರ್ಯವಲ್ಲ. ಮನುಷ್ಯಸ್ವಭಾವವು ಅಸೂಯಾವಿಷ್ಟವಾದುದರಿಂದ ಸನ್ಮಿತ್ರರು ಬಹಳ ವಿರಳವೆಂದೂ ಪ್ರಯತ್ನಪಟ್ಟಾದರೂ ಸನ್ಮಿತ್ರರನ್ನು ಪಡೆದುಕೊಂಡು ನಾವು ಬಾಳಬೇಕೂ ಎಂಬ ಭಾವದಿಂದ ಹಿತೈಷಿಗಳು ಹೀಗೆ ತಿಳಿಸಿರಬಹುದು.

ಕರ್ಣದುರ್ಯೋಧನರ ಸ್ನೇಹವು ಉತ್ಕೃಷ್ಟವಾದ ಮೈತ್ರಿಗೆ ದೃಷ್ಟಾಂತವೆಂಬುದು ಜಗದ್ವಿಖ್ಯಾತವಾಗಿದೆಯಷ್ಟೆ. ಹಾಗೆಯೇ ಚಂದನದಾಸ ಅಮಾತ್ಯರಾಕ್ಷಸರ ನಡತೆಯೂ ಮೈತ್ರಿಗೆ ಸರ್ವೋತ್ತಮವಾದ ನಿದರ್ಶನವಾಗಿರುವುದು.

ಚಂದನದಾಸನು ತನ್ನ ವಶದಲ್ಲಿ ಅಮಾತ್ಯರಾಕ್ಷಸನು ಬಿಟ್ಟುಹೋಗಿದ್ದ ಅವನ ಪತ್ನೀಪುತ್ರರನ್ನು ಮಹತ್ತರವಾದ ಆಪತ್ಕಾಲದಲ್ಲಿಯೂ ಗೋಪ್ಯವಾಗಿ ಸಂರಕ್ಷಿಸಿ, ಚಾಣಕ್ಯನ ಭಿನ್ನತಂತ್ರಗಳಿಗೆಲ್ಲಾ ಹೆದರಿ ಶತ್ರುಗಳ ಕೈಗೆ ಒಪ್ಪಿಸದೆ, ತನ್ನ ಪ್ರಾಣವನ್ನೇ ಬಿಡುವುದಕ್ಕೆ ಸಿದ್ಧನಾದುದೂ,-ಹಾಗೆಯೇ ಅಮಾತ್ಯರಾಕ್ಷಸನೂ ಚಂದನದಾಸನಲ್ಲಿ ತನ್ನ ಸಂಸಾರವನ್ನಿಟ್ಟು ದೇಶಭ್ರಷ್ಟನಾಗಿ, ಸಹಿಸಲಶಕ್ಯವಾದ ಕಷ್ಟಗಳನ್ನು ಸಹಿಸಿಯೂ, ಅಸೇವ್ಯಸೇವನೆಮಾಡಿಯೂ, ಭಗ್ನಮನೋರಥನಾಗಿ ಅರಣ್ಯದಲ್ಲಿ ಕಾಲನಿರೀಕ್ಷಣೆ ಮಾಡುತ್ತಿದ್ದು, ಚಂದನದಾಸನು ತನ್ನ ನಿಮಿತ್ತವಾಗಿ ವಿಧಿಸಲ್ಪಡುವನೆಂಬ ಸಮಾಚಾರವು ಕಿವಿಗೆ ಬೀಳುತಲೆ ಕಮಬುಗೂಡಿ, ಹೇಗಾದರೂ ಮಿತ್ರನನ್ನು ರಕ್ಷಿಸಿಕೊಳ್ಳಬೇಕೆಂಬ ಅಭಿನಿವೇಶದಿಂದ ರಾಜಧಾನಿಯನ್ನು ಕುರಿತು ಹೊರಟು, ಪ್ರತಿಜ್ಞಾಭಂಗವನ್ನೂ ಲಕ್ಷ್ಯಮಾಡದೆ ಕೀಳುಜಾತಿಯವನಾಗಿಯೂ, ಶತ್ರುವಾಗಿಯೂ ಇದ್ದ ಚಂದ್ರಗುಪ್ತನಲ್ಲಿಯೂ ದೀನಭಾವದಿಂದ ತನ್ನನ್ನು ಕೊಂದು ಸ್ನೇಹಿತನನ್ನು ಬದುಕಿಸಿಕೊಡುವಂತೆ ಪ್ರಾರ್ಥನೆಮಾಡಿಯೂ, ಅದು ಸಾಗದೆ ಹೋಗಲು, ಕೊನೆಗೆ ಶತ್ರುವಿನಲ್ಲಿ ಆಶ್ರಯಿಸಿ ನಿಂತಿರುದಲ್ಲದೆ ತನ್ನ ಅಭಿನಿವೇಶಕ್ಕೆ ವಿರೋಧನಾಗಿ ಶತ್ರುವಿಗೆ ಪೋಷಕನಾಗಿಯೂ, ಮಂತ್ರಿಯಾಗಿಯೂ ಬದ್ಧಕಂಕಣನಾಗಿ ನಿಂತುದೂ—ಎಂಥ ಉದಾರಚರಿತವು!

---

ಭವಭೂತಿಯು ಉತ್ತರರಾಮಚರಿತ್ರದಲ್ಲಿ ಮೈತ್ರಿಯ ವಿಷಯದಲ್ಲಿ ಹೀಗೆ ಅಭಿಪ್ರಾಯಪಡುತ್ತಾನೆ :—

" ಸ್ನೇಹಶ್ಚ ನಿಮಿತ್ತ ಸವ್ಯಪೇಕ್ಷ ಇತಿ ವಿಪ್ರತಿಷಿದ್ಧಮೇತತ್ ।
ತಥಾಹಿ,

ವ್ಯತಿಷಜತಿ ಪದಾರ್ಥಾನಾನ್ತರಃ ಕೋಽಪಿ ಹೇತುಃ ।
ನಖಲು ಬಹಿರುಪಾಧೀನ್ ಪ್ರೀತಯಸ್ಸಂಶ್ರಯಂತೇ ॥
ವಿಕಸತಿ ಹಿ ಪತಂಗಸ್ಯೋದಯೇ ಪುಂಡರೀಕಂ ।
ದ್ರವತಿ ಚ ಹಿಮರಶ್ಮಾವುದ್ಗತೇ ಚಂದ್ರಕಾಂತಃ ॥ "

* [ಟೀಕೆ—" ಲೋಕದಲ್ಲಿ ಸ್ನೇಹವು ನಿಮಿತ್ತವನ್ನಪೇಕ್ಷಿಸಿ ಉಂಟಾಗುವುದೆಂಬ ವಚನವು ಅಸತ್ಯವಾದ ಅರ್ಥವುಳ್ಳುದೇ ಸರಿ. ಮತ್ತೇನೆಂದರೆ— ಅಂತಃಕರಣದಲ್ಲಿ ಹೇಳಲಶಕ್ಯವಾದ ಬಂದಾನೊಂದು ಕಾರಣವು ವಸ್ತುಗಳಂ ಅನ್ಯೋನ್ಯವಾಗಿ ಕೂಡಿಸುತ್ತಲಿದೆಯೇ ಹೊರತು ಪ್ರೀತಿಗಳ ಪಿತೃತ್ವ ಪುತ್ರತ್ವ ಭ್ರಾತೃತ್ವ ಬಂಧುತ್ವಗಳೆಂಬ ಬಹಿರಂಗಗಳಾದ ನಿಮಿತ್ತಗಳಂ ಅಪೇಕ್ಷಿಸುವುದಿಲ್ಲ. ಅದು ಹೇಗೆಂದರೆ :—ಆಕಾಶದಲ್ಲಿ ಸೂರ್ಯನು ಉದಯಿಸಲು, ಸರಸ್ಸಿನಲ್ಲಿ ಕಮಲವು ವಿಕಾಸವನ್ನೈದುತ್ತಲಿದೆ; ಚಂದ್ರನು ಉದಯಿಸಲು, ಭೂಮಿಯಲ್ಲಿ ಚಂದ್ರಕಾಂತಶಿಲೆಯು ದ್ರವಿಸುತ್ತಲಿದೆ : ಆ ಸೂರ್ಯ ಕಮಲಂಗಳಿಗೂ, ಆ ಚಂದ್ರ ಚಂದ್ರಕಾಂತಶಿಲೆಗಳಿಗೂ ಸಹ ಪಿತೃತ್ವ ಪುತ್ರತ್ವಾದಿ ಸಂಬಂಧಗಳಿಲ್ಲದಿದ್ದರೂ ಸೂರ್ಯ ಚಂದ್ರರ ದರ್ಶನದಿಂ ಕಮಲಕ್ಕೆ ಚಂದ್ರಕಾಂತ ಶಿಲೆಗೆ ಸಹ ಆ ರೀತಿ ಉಲ್ಲಾಸದಿಂ ವಿಕಾಸವು ದ್ರವಿಸುವುದು ಸಹ ಉಂಟಾಗುವುವಾದ ಕಾರಣ ವಸ್ತುಗಳಿಗೆ ಪರಸ್ಪರ ಪ್ರೇಮಾನುಬಂಧ ಉಂಟಾಗುವುದರಲ್ಲಿ ಅಂತರಂಗದಲ್ಲಿರುವ ಬಂದಾನೊಂದು ವಾಸನಾವಿಶೇಷವೇ ಕಾರಣವಾಗುತ್ತದೆಯೇ ಹೊರತು ಮತ್ತೊಂದಿಲ್ಲ. "

" ಉತ್ತರರಾಮಚರಿತ್ರ " ಕಥೆಯಿಂದ ಅನುವಾದಿಸಿದುದು.

## ೧೪. “ ಸುಖಗಳಲ್ಲೆಲ್ಲಾ ಉತ್ತಮವಾವುದು? —ತುಷ್ಟಿ ”

ಯಮಧರ್ಮರಾಯನು ಯಕ್ಷರೂಪದಲ್ಲಿ ಕಾಣಿಸಿಕೊಂಡು ತನ್ನ ಪುತ್ರನಾದ ಧರ್ಮರಾಯನ ಯೋಗ್ಯತೆಯನ್ನು ಪರೀಕ್ಷಿಸಲು ಕೇಳಿದ ಅನೇಕ ಪ್ರಶ್ನೆಗಳಲ್ಲಿ, “ ಸುಖಾನಾಂ ಸ್ಯಾತ್ ಕಿಮುತ್ತಮಂ ” ಎಂಬು ದೊಂದು ಮುಖ್ಯವಾದ ಪ್ರಶ್ನೆ. ಆ ಪ್ರಶ್ನೆಗೆ ಬಹುಶ್ರುತನಾದ ಧರ್ಮರಾಯನು “ ಸುಖಾನಾಂ ತುಷ್ಟಿರುತ್ತಮಾ ” ಎಂಬ ಉತ್ತರವನ್ನು ಕೊಟ್ಟನು. ಇದು ಸಾಮಾನ್ಯನ ಮಾತಲ್ಲ, ಬಹುಶ್ರುತನಾದವನು ಪರ್ಯಾಲೋಚಿಸಿ ಆಡಿದ ಮಾತು. ಬಾಲ್ಯವನ್ನು ಋಷಿಗಳ ಮಧ್ಯದಲ್ಲಿ ಋಷಿಚರ್ಯೆಯಲ್ಲಿಯೂ, ಕೌಮಾರವನ್ನು ಯುವರಾಜನಾಗಿ ರಾಜಭೋಗಗಳಲ್ಲಿಯೂ ಕಳೆದು, ಈರೀತಿಯಲ್ಲಿ ವಿಧವಿಧವಾದ ಸುಖಗಳನ್ನು ಅನುಭವಿಸಿ, ಅವುಗಳ ತಾರತಮ್ಯವನ್ನು ಚೆನ್ನಾಗಿ ಬಲ್ಲ ಧರ್ಮರಾಯನ ಮಾತಾದುದರಿಂದ, ಇದು ಸಿದ್ಧಾಂತವೆಂದೇ ತಿಳಿಯಬೇಕು. ಆತನಿಂದ ಸೌಖ್ಯೋತ್ತಮವೆಂದು ನಿರ್ಗಣಿತವಾದುದರಿಂದ. ತುಷ್ಟಿಯೆಂಬುದು ಸರ್ವಸಮನಾಗಿಯೂ ಎಂದರೆ—ಸಂಕಲ್ಪಮಾತ್ರದಿಂದಲೇ ಐಹಿಕಸುಖಸಂಪತ್ತಿಯನ್ನೆಲ್ಲಾ ಕೈವಶಮಾಡಿಕೊಳ್ಳಬಲ್ಲ ಚಕ್ರವರ್ತಿಯೇ ಮೊದಲಾಗಿ ಅಹನ್ಯಹನಿಕಾಲಕ್ಷೇಪಮಾಡುವ ತಿರಿಕೆಯವನವರೆಗೂ ಎಲ್ಲರಿಗೂ ಅವಶ್ಯಕವಾಗಿ ಬೇಕಾಗಿಯೂ, ಸುಲಭಸಾಧ್ಯವಾಗಿಯೂ, ಇದ್ದಿರಬೇಕು. “ ಸುಖಂ ಮೇ ಭೂಯಾತ್ ” ಎಂಬದಾಗಿ, ಆಜನ್ಮಪ್ರಭೃತಿ ಪ್ರಾಣಿಗಳ ಪ್ರವೃತ್ತಿ ಇರುವಾಗ—ತುಷ್ಟಿಯೆಂಬುವು ಸುಖೋತ್ತಮವೆಂದೂ, ಸುಲಭಸಾಧ್ಯವೆಂದೂ ತಿಳಿದುಬಂದರೆ, ಅದನ್ನು ಸಂಪಾದಿಸಲು ಯಾರುತಾನೆ ಪ್ರವರ್ತಿಸರು ?

ಹೀಗಿರಲು, ಆತುಷ್ಟಿಯೆಂಬುದೇನು ? ತುಷ್ಟಿಯು ಒಂದು ವಿಧವಾದ ಚಿತ್ತವೃತ್ತಿಯು. ಅದು ಮನಸ್ಸಿಗೆ ಶಾಂತಿಯನ್ನುಂಟುಮಾಡುವಂ

ಥದು; ಮನಸ್ಸಿನಲ್ಲಿ ತನಗೆತಾನೆ ಉಂಟಾಗುವ ಧರ್ಮವು; ಧನಕನಕವಿದ್ಯಾದಿ ಪರಿಕರಗಳಿಂದ ಲಭಿಸತಕ್ಕದಲ್ಲ. ಮನಸ್ಸಿಗೆ ಸುಖವನ್ನು ಕೊಡತಕ್ಕದು, ಮತ್ತು ಸರ್ವಸುಖಕ್ಕೂ ಕಾರಣವಾಗಿರುವುದು. ವಿವೇಚನೆ ಮಾಡಿ ನೋಡಿದರೆ ಭಗವಂತನು ಅನುಗ್ರಹಿಸಿಕೊಟ್ಟಿದುದರಲ್ಲಿಯೇ ತೃಪ್ತಿಯಾಗಿರುವಿಕೆಯೇ ಅದೆಂದು ತೋರುತ್ತದೆ. ಈ ಸ್ಥಿತಿಯನ್ನು ಮನಸ್ಸು ಹೊಂದದಿದ್ದರೆ, ಮಹೋನ್ನತಪದವಿಯೂ ಕೂಡ ದುಃಖಕಾರಣವಾಗಿ ಹೋಗುವುದು; ಇಷ್ಟಾರ್ಥವು ಇಚ್ಛೆಪಟ್ಟಹಾಗೆಲ್ಲಾ ಕೈಗೂಡುತ್ತ ಬಂದರೂ, ಸಂಪೂರ್ಣವಾದ ನಿರಾತಂಕವಾದ ಸುಖವು ಎಂದಿಗೂ ಲಭಿಸಲಾರದು. ಆದುದರಿಂದ, ಹೇಗೆ ತೇಜಸ್ಸು ಸ್ವಯಂ ಪ್ರಕಾಶವಾಗಿಯೂ, ಸ್ವೇತರವಸ್ತುಗಳಿಗೆ ಪ್ರಕಾಶಕವೋ—ಹಾಗೆಯೇ, ಇದೂ ಸ್ವಯಂ ಸುಖವಾಗಿಯೂ, ಇತರ ಸುಖಗಳನ್ನು ಸುಖತ್ವೇನ ಗಣಿಸಲು ಕಾರಣವಾಗಿಯೂ ಇರುವುದು. ಹೀಗಿರಲು, ತುಷ್ಟಿಯೆಂಬುದೊಂದನ್ನು ಮಾತ್ರ ನಾವು ಸಂಪಾದಿಸಿ ಇಟ್ಟಿದ್ದರೆ, ಇತರ ಸಂಪತ್ತುಗಳು ಲಭಿಸದಿದ್ದರೂ, ಯಾವ ಕೊರತೆಗೂ ಅವಕಾಶ ಉಂಟಾಗುವುದಿಲ್ಲ; ಮನಸ್ಸೂ ಸ್ವಾಸ್ಥ್ಯವನ್ನು ಹೊಂದಿ ಶಾಂತವಾಗಿರುವುದು.

ಪರಾಶರ ಮಹರ್ಷಿಗಳು ಹೇಳುವಂತೆ—

ಶ್ಲೋ ॥ "ಮನೋರಥಾನಾಂ ನ ಸಮಾಪ್ತಿ ರಸ್ತಿ ವರ್ಷಾಯುತೇನಾಪ್ಯಥ
ವಾಪಿ ಲಕ್ಷೈಃ । ಪೂರ್ಣೇಷು ಪೂರ್ಣೇಷು ಮನೋರಥಾನಾ
ಮುತ್ಪತ್ತಯಸ್ಸಂತಿ ಪುನರ್ನವಾನಾಂ ॥"

ಎಂದರೆ, ಅನೇಕಾನೇಕ ವರ್ಷಗಳು ಅನುಭವಿಸುತ್ತ ಬಂದರೂ, ಆಶೆಗೆ ಪೂರ್ತಿಯೇ ಇರುವುದಿಲ್ಲ; ಮನೋರಥಗಳು ಪೂರ್ತಿಯಾದ ಹಾಗೆಲ್ಲಾ ಹೊಸಹೊಸದಾಗಿ ಮನೋರಥಗಳು ಹುಟ್ಟುತ್ತಲೇ ಬರುವುವು. ಅಹಸ್ಯ ಹಸಿ ಕಾಲಕ್ಷೇಪಮಾಡುವವನು ಕ್ಲಿಷ್ಟವಾದ ಅಲ್ಪವೇತನು ಲಭಿಸಿದರೆ

ನಾಕೆಂದಿರುವನು. ಆ ಇಷ್ಟವು ಕೈಸೇರುತ್ತಲೆ. ಅದರಲ್ಲಿ ತೃಪ್ತಿ ಹುಟ್ಟದೆ, ಅದಕ್ಕಿಂತ ಉತ್ಕೃಷ್ಟವಾದ ಸ್ಥಿತಿಗೆ ಅವನ ದೃಷ್ಟಿಯು ತಿರುಗುವುದು. ಅದೂ ಸಿದ್ಧಿಸಿದರೆ ತನ್ನ ಸ್ಥಿತಿಯಲ್ಲಿ ಅತೃಪ್ತಿಯೂ, ಅಗೌರವವೂ, ಮತ್ತೊಬ್ಬನ ಐಶ್ವರ್ಯದಲ್ಲಿ ಗೌರವವೂ ಅಸೂಯೆಯೂ ಸಹಜವಾಗಿ ಹುಟ್ಟು ವುವು. ಬೆಟ್ಟದ ಮೇಲಕ್ಕೆ ಏರುತ್ತ ಏರುತ್ತ ದೃಷ್ಟಿಪಥವು ಹೆಚ್ಚುತ್ತ ಹೆಚ್ಚುತ್ತ ಬರುವಹಾಗೆ, ಮನುಷ್ಯನ ಸ್ಥಿತಿಯು ಉತ್ತಮೋತ್ತಮವಾದ ಹಾಗೆಲ್ಲಾ ಅತೃಪ್ತಿಯು ಹೆಚ್ಚುತ್ತ ಹೆಚ್ಚುತ್ತ ಬರುವುದು. ಅತೃಪ್ತಿಯು ಹೆಚ್ಚಿದಹಾಗೆಲ್ಲಾ ಅಸೂಯೆಯು ಹೆಚ್ಚುವುದು. ಅಸೂಯೆ ಹೆಚ್ಚಾದಷ್ಟು ದುಃಖವು ಹೆಚ್ಚುವುದು. ಆದುದರಿಂದ "ಮನೋರಥಾನಾಂ ನ ಸಮಾಪ್ತಿ ರಸ್ತಿ" ಎಂಬ ಮಾತು ಪ್ರಚಾರದಲ್ಲಿರುವುದು. ಇಷ್ಟಾರ್ಥವನ್ನು ಹೊಂದಿ ದರೆ ತೃಪ್ತಿಯುಂಟಾಗುವುದೆಂದು ಭಾವಿಸುವವನು ಉರಿಯುತ್ತಿರುವ ಬೆಂಕಿ ಯನ್ನು ಕೆದಕಿ ಕೆದಕಿ ಆಜ್ಯಧಾರೆಯನ್ನು ಬಿಟ್ಟು, ಇಂಧನಭಾರವನ್ನು ಹಾಕಿ ನಂದಿಸುವನು. ಇಷ್ಟಾರ್ಥವು ಕೈಗೂಡಿದರೆ ತೃಪ್ತಿಯುಂಟಾಗಬೇ ಕಲ್ಲ; ಜತೆಯಲ್ಲಿಯೇ ಸೌಖ್ಯವೂ ಉಂಟಾಗಬೇಕಲ್ಲ? ಊಟಮಾಡಿದರೆ ಹಸಿವು ತೀರುವುದಿಲ್ಲವೆ? ನೀರು ಕುಡಿದರೆ ದಾಹವು ಶಾಂತವಾಗುವುದಿಲ್ಲವೆ? ಇಷ್ಟಾಪೂರ್ತಿಯಾದರೂ ಅತೃಪ್ತಿಯೇ ಹೆಚ್ಚುವುದಲ್ಲ! ಅಲ್ಪವಾದ ಆಶೆಯು ಪೂರ್ಣವಾದರೆ, ಹೆಚ್ಚಾದ ಆಶೆಯು ಹುಟ್ಟುವುದಲ್ಲ! ಜತೆಯಲ್ಲಿಯೇ ಅತೃ ಪ್ತಿಯೂ, ಅಸೂಯೆಯೂ, ಚಿಂತೆಯೂ, ಶ್ರಮವೂ ಹುಟ್ಟುವುವಲ್ಲ! ಇದಕ್ಕೆ ಕಾರಣವೇನಿರಬಹುದು, ವಿಚಾರಿಸಬೇಕಲ್ಲವೆ? ಇದಕ್ಕೆ ಕಾರಣ ವನ್ನು ತಿಳಿವುದು ಬಹುಕಷ್ಟವಲ್ಲ. ನಮ್ಮ ಮನಸ್ಸಿನ ಸ್ವಭಾವವನ್ನು ಪರಿಶೀಲನೆ ಮಾಡಿದರೆ ಕಾರಣವು ಗೊತ್ತಾಗುವುದು. ಮನಸ್ಸಿನ ಸ್ವಭಾ ವವೇ ಅಂಥದು. ಮನಸ್ಸು ಪಂಪನು ಹೇಳುವಂತೆ—

"ಎನಿತೆನಿತಂ ಭಂಜಿಸಿದೊಡ |
ಮನಿತನಿತಂ ಮೊಣೆಯಲರಿಯದಣಿಯುರಪುುರಿಗುಂ ||"

ಒಂದು ವಸ್ತುವಿಗೆ ಆಶೆಪಡುತ್ತೇವೆ. ಅದು ನಮ್ಮ ಕೈವಶವಾಗುವವರೆಗೂ, ಅವರಲ್ಲಿ ಒಂದು ವಿಸವಾದ ಮೋಹವು ಇದೆ. ಅದನ್ನು ಪಡೆದ ಒಡನೆಯೇ ಆ ಮೋಹವು ಮಾಯವಾಗುವುದು. ಅದನ್ನು ಬಹಳಸಾಮಾನ್ಯವಾದ ವಸ್ತುವೆಂದು ತಿಳಿವೆವು. ಮೊದಲು ಹತ್ತು ರೂಪಾಯಿ ಸಂಬಳವನ್ನು ಪಡೆವುದೇ ಒಂದು ಗೌರವವೆಂದು ತಿಳಿಯುತ್ತೇವೆ. ಐನೂರು ರೂಪಾಯಿ ಸಂಬಳವಾದ ಮೇಲೆಯೂ-ನಮಗೇನು ಗೌರವ? ನಮ್ಮಂಥವರು, ನಮ ಗಿಂತ ದೊಡ್ಡವರನೇಕರಿರುವರೆಂದು ತೋರುವುದು ಸಹಜ. ಆದುದರಿಂ ದಲೇ, "ಪ್ರಾಣೇಷು ಪೂರ್ಣೇಷು ಮನೋರಥಾನಾಮುತ್ಪತ್ತಯಃ ಸ್ಯಂತಿ ಪುನರ್ನವಾನಾಂ ॥" ಎಂಬುದು ಮನಸ್ಸಿನ ಸ್ವರೂಪಕಥನವ ಮಾತು.

ಆಶೆಯೆಂಬ ಮನಸ್ಸಿನ ಪ್ರವೃತ್ತಿಯು ತಟಶೂನ್ಯವಾದ ಸದಾ ಪ್ರವ ಹಿಸುತ್ತಲಿರುವ ನದಿಯಂತಿರುವುದು. ಅದರಲ್ಲಿ ಒಂದುಕಡೆ ಸ್ವಲ್ಪ ನೀರು ತೆಗೆದುಕೊಂಡರೆ, ಮೇಲಿಂದ ಕೂಡಲೇ ಆ ಸ್ಥಲಕ್ಕೆ ನೀರು ಬಂದು ತುಂಬು ವುದು. ಎಷ್ಟೆಷ್ಟು ನೀರು ಕುಡಿದರೂ, ಆ ನದಿಗೆ ಅಪಾಯವೇನೂ ಇಲ್ಲ. ದಡವಿದ್ದರಲ್ಲವೆ ಅಪಾಯಸಂಭವವು? ಆ ನದಿಗೆ, "ಮನೋರಥಾನಾಮ ತಟಾಃ ಪ್ರವಾಹಾಃ" ಎಂಬಂತೆ ದಡವೇ ಇಲ್ಲ. ಆಶಾಪೂರ್ತಿಯಾದ ಹಾಗೆ ಲ್ಲಾ ಚಿಂತೆಯೂ, ಕಷ್ಟವೂ ಹೆಚ್ಚುವುವು; ನೆಮ್ಮದಿ ಇರದು. ಆದು ದರಿಂದಲೇ, ಹಿರಿಯರು "ತೃಷ್ಣಾಸ್ರೋತೋವಿಭಂಗಃ" ಎಂದರೆ-ಆಶೆ ಯೆಂಬ ತೊರೆಯನ್ನು ಕಟ್ಟಬೇಕು, ಎಂಬುದನ್ನೇ ಕಾರಣವಾಗಿ ನಿರೂಪಿ ಸುವರು. ಆಶೆಯೆಂಬ ತೊರೆಯನ್ನು ಕಟ್ಟದಹೊರತು, ಮನಸ್ಸಿಗೆ ನೆಮ್ಮ ದಿಯುಂಟಾಗದು. ಮನಸ್ಸಿಗೆ ನೆಮ್ಮದಿಯುಂಟಾಗುವತನಕ ಸುಖವೆಲ್ಲಿ ಯದು? ಹೀಗಿರುವುದರಿಂದಲೇ ಸ್ವರ್ಗಲೋಕ ಸುಖವನ್ನು ಈ ಲೋಕದ ಲ್ಲಿಯೇ ಅನುಭವಿಸುತ್ತಿರುವಂತೆ ಕಾಣಿಸಿಕೊಳ್ಳುವರನೇಕರು ಆತ್ಮಹತ್ಯೆ ವನ್ನು ಮಾಡಿಕೊಂಡು ಪ್ರಾಣಬಿಡುವರು. ಇದು ಪಾಶ್ಚಿಮಾತ್ಯರಲ್ಲಿ ಬಲು

ವಾಡಿಕೆಯಾಗಿದೆ. ಆಶೆಯೆಂಬುದೇ ಒಂದು ಕಿಚ್ಚು; ಆ ಕಿಚ್ಚನ್ನು ಧನ ಕನಕವಸ್ತುವಾಹನಾದಿಗಳಿಂದ ಆರಿಸುವುದಕ್ಕಾಗುವುದಿಲ್ಲ. ಧನಕನಕ ವಸ್ತುವಾಹನಾದಿಗಳು ಸೌದೆಯಂತೆ ಉಪಷ್ಟಂಭಕವೇ ಹೊರತು ಭಂಜಕ ಸಾಮಗ್ರಿಯಲ್ಲ. ಆದುದರಿಂದ ಧನಕನಕವಾಹನಾದಿಗಳು ಸುಖಾಭಾಸವೇ ಹೊರತು ಸುಖವೂ ಅಲ್ಲ, ಸುಖಜನಕವೂ ಅಲ್ಲ. ಆಶಾನಿರೋಧಕಸ್ವರೂಪವಾದ ತುಷ್ಟಿಯೇ ಸುಖವು; ಅದೇ ಮನಸ್ಸಿಗೆ ಶಾಂತಿಕಾರಣವು.

ಹೀಗಿರುವುದರಿಂದ ಶಾಂತಿಜನಕವಾದ ತುಷ್ಟಿಯನ್ನು ಸಂಪಾದಿಸಲು ಯತ್ನಿಸಲೇಬೇಕು. ಅಮೂಲ್ಯವಾದ ಅಂಥ ಲಾಭವನ್ನು ಹೊಂದಲು ನಮ್ಮಿಂದಾದೀತೆ? ಆಶೆಯೆಂಬ ಪ್ರಬಲವಾದ ಸುಳಿಯಲ್ಲಿ ಸಿಕ್ಕಿಬಿದ್ದಿರುವ ಮನಸ್ಸನ್ನು ಮೇಲಕ್ಕೆತ್ತಿ ಕಾಪಾಡಲು ನಮ್ಮ ಕೈಯಲ್ಲಿದೆಯೆ? ಎಂದು ಕೇಳಿದರೆ; ಇದು ನಮ್ಮಿಂದ ಸಾಧ್ಯವೆ ಹೌದು ; ಮೊದಲು ಅಸಾಧ್ಯವಾಗಿ ಕಂಡುಬಂದರೂ, ಸುಖಸಾಧ್ಯವಾಗಿಯೇ ಪರಿಣಮಿಸುವುದು.

" ಪರಿಗ್ರಹೇಣಾತ್ಮ ಜಕ ಮುಮಾತಿರಿಷ್ಟಾ– " ( ಪರಿಗ್ರಹದಿಂದಲೇ ಅತ್ಯಾಶೆ ಹುಟ್ಟುವುದು )

" ಸಂಗಾದ್ದೋಷಾಃ ಪ್ರಭವಂತಿ ದೋಷಾಃ– " ( ದೋಷಗಳು ಸಹವಾಸದಿಂದ ಉಂಟಾಗುವುವು )

" ಸಂಗಾತ್ ಸಂಜಾಯತೇ ಕಾಮಃ– " ( ಆಶೆಯು ಸಂಬಂಧದಿಂದಲೆ ಉಂಟಾಗುವುದು. )

ಎಂದು ಈರೀತಿಯಲ್ಲಿ ಆಶೆ ಹುಟ್ಟುವುದಕ್ಕೆ ಕಾರಣವನ್ನು ಹಿರಿಯರು ನಿರೂಪಿಸುವರು. ಇದು ನಮ್ಮ ಅನುಭವದಲ್ಲಿಯೂ ಇರುವುದು.

ಆದರೆ ಈ ಪ್ರಪಂಚದಲ್ಲಿದ್ದುಕೊಂಡು ಸಂಬಂಧವನ್ನು ಬಿಡುವುದು ಹೇಗೆ! ನೀರಿನಲ್ಲಿರುವ ಪ್ರಾಣಿಯು ನೀರನ್ನು ಬಿಟ್ಟಿರುವುದು ಹೇಗೆ? ನಮ್ಮ ಜ್ಞಾನಾದಿಗಳೂ ಕೂಡ ಸಂಬಂಧದಿಂದಲೇ ಉಂಟಾಗುವುವಲ್ಲವೆ?

ಹೀಗಿರಲು ಸಂಬಂಧವನ್ನು ತ್ಯಜಿಸಿ ಆಶಾನಿರೋಧವನ್ನು ಮಾಡುವುದು ಹೇಗೆ? ಎಂದು ಕೇಳಿದರೆ—"ಸ್ಪೃಷ್ಟಾಸ್ಪೃಷ್ಟವತ್" ಎನ್ನುವಹಾಗೆಯೂ, ನಳಿನೀದಳಗತ ಜಲದಂತೆಯೂ, ಸಂಬಂಧವಿದ್ದರೂ ಇಲ್ಲದಹಾಗೆ ಯಾವ ವಸ್ತುವಿನಲ್ಲಿಯೂ ವಿಶೇಷವಾಗಿ ಅಭಿಮಾನವನ್ನಿಡದೆ, ಸುಖ ದುಃಖಗಳಿಗೆ ಮನಗೊಡದೆ ಇದ್ದರೆ, ಆಶೆಯೆಂಬ ತೊರೆಯನ್ನು ಕಟ್ಟಬಹುದು. ಆ ಬ್ರಹ್ಮಪಿಪೀಲಿಕಾಪರ್ಯಂತವಾಗಿ ಪ್ರಾಣಿಗಳೆಲ್ಲವೂ, ಆತ್ಮಸ್ವರೂಪವನ್ನು ನೋಡಿದರೆ, ಸಮವೆಂದೂ; ಶರೀರಭೇದಗಳೂ, ಐಶ್ವರ್ಯಾದಿಗಳೂ, ಸುಖ ದುಃಖಗಳೂ—ಇವೇ ಮುಂತಾದುವೆಲ್ಲವೂ ಪ್ರಾಕ್ತನಕರ್ಮಕ್ಕೆ ಅನುಸಾರವಾಗಿ ಉಂಟಾಗಿವೆಯೆಂದೂ, ಆ ಪ್ರಾಕ್ತನ ಕರ್ಮವನ್ನು ಈ ಜನ್ಮದಲ್ಲಿ ಮನುಷ್ಯನು ತೊಳೆಯಲೇಬೇಕೆಂತಲೂ: ಆಲೋಚಿಸಿಕೊಂಡರೆ ಯಾವ ವಿಧವಾದ ಹೆಮ್ಮೆಗೂ ಕೊರತೆಗೂ ಕಾರಣವಿರುವುದಿಲ್ಲ. ನಮಗೆ ಐಶ್ವರ್ಯಾದಿಗಳೂ, ಅಧಿಕಾರಾದಿಗಳೂ ಬಂದರೆ ಅವುಗಳು ಸ್ವಭೋಗಕ್ಕಲ್ಲ. ಪರೋಪಕಾರಕ್ಕಾಗಿಯೇ ಕೊಡಲ್ಪಟ್ಟುವೆಂದು ತಿಳಿಯಬೇಕು. ದುಃಖಾದಿಗಳುಂಟಾದರೆ ಪೂರ್ವದಲ್ಲಿ ಮಾಡಿದ ಕ್ರೂರಕೃತ್ಯಕ್ಕೆ ಪ್ರಾಯಶ್ಚಿತ್ತವೆಂದು ತಿಳಿಯಬೇಕು. ನಮ್ಮ ಈ ಲೋಕದ ಸ್ಥಿತಿಯು ಖಜಾನಿಯ ಗುಮಾಸ್ತನಂತೆ ಲೆಕ್ಕ ತೀರಿಸುವುದಾಗಿದೆ ಎಂದು ತಿಳಿಯಬೇಕು. ಪುರಂದರದಾಸರೂ ಲೋಕವನ್ನು ಕುರಿತು ಈರೀತಿ ಉಪದೇಶ ಮಾಡುತ್ತಾರೆ :—

* "ಮರೆಯದಿರು ಮರೆಯದಿರು ಎಲೊ ಮಾನವ ನಿನ್ನ ।
ಸಿರಿದು ಹವಣೇನು ಹೇಳೆಲೋ ಮಾನವ ॥"

"ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ ನಿಶ್ಚಯವು ಎಚ್ಚರಿಕೆ ।
ಹೆಚ್ಚದೆ ಹಿಗ್ಗದೆ ಇದ್ದರೆ ರೊಕ್ಕಕೆ ಮೆಚ್ಚು ಕೇಳೆಚ್ಚರಿಕೆ ॥"

ಆದುದರಿಂದ ಇದ್ದುದರಲ್ಲಿಯೇ ತೃಪ್ತಿಯನ್ನು ಹೊಂದಬೇಕು. "ನಾವು

---

* ಪುರಂದರದಾಸರ ಈ ಕೀರ್ತನೆಗಳನ್ನು ಸಂಪೂರ್ಣವಾಗಿ ಓದಿನೋಡಿ.

ಕೇಳಿಕೊಂಡು ಬರಲಿಲ್ಲ ; ನಮಗೆ ಸಿಕ್ಕಲಿಲ್ಲ '' ಎಂಬ ಭಾವವನ್ನು ಅಭ್ಯಾಸಮಾಡಬೇಕು. ನಾವು ಹುಟ್ಟಿರುದು ಈ ಕ್ಷಣಿಕವಾದ, ಎಂದರೆ, ನೀರುಗುಳ್ಳೆಯಹಾಗೆ ಹಾರಿಹೋಗುವ ಈ ಪ್ರಾಪಂಚಿಕಸುಖಕ್ಕಲ್ಲ ; ಶಾಶ್ವತವಾದ ಮೋಕ್ಷಸುಖವನ್ನು ಸಂಪಾದಿಸುವುದಕ್ಕೆಂಬದಾಗಿ ತಿಳಿಯಬೇಕು. ಐಶ್ವರ್ಯವೂ ಅಧಿಕಾರವೂ ಹೆಚ್ಚಿದಹಾಗೆಲ್ಲಾ ನಾಸ್ತಿಕ್ಯವೂ, ಅಹಂಕಾರವೂ, ಸ್ವೋತ್ಕೃಷ್ಟಜ್ಞಾನವೂ ಸ್ವಭಾವಸಿದ್ಧವಾಗಿ ಉಂಟಾಗುವುವು. ಐಹಿಕಸಂಪತ್ತು ಹೆಚ್ಚಿದರೆ, ಜ್ಞಾನಾಭಿವೃದ್ಧಿಗೆ ಹೆಚ್ಚಾಗಿ ಅವಕಾಶ ಸಿಕ್ಕದು. ಆದುದರಿಂದ ದಾರಿದ್ರ್ಯವೂ ಕೂಡ ಕೆಲವರು ಶ್ರೇಷ್ಠವಾದ ಜ್ಞಾನಸಂಪಾದನೆಗೆ ಕಾರಣನೆಂದು ಹೇಳುವುದು ವಾಸ್ತವ ಈ ಭಾವನೆಯನ್ನು ಇಟ್ಟುಕೊಂಡರೆ, ಕೆ ರತೆಗೂ ಅಸೂಯೆಗೂ ವಿಶ್ರಾಂತಿಯನ್ನು ಕೊಡಬಹುದು. ಆದುದರಿಂದ ಯಾವ ವಸ್ತುವಿನಲ್ಲಿಯೂ " ಸ್ವಪ್ರಾಪ್ತಸ್ಸ್ವಪ್ರಾಪ್ತವಿತ '' ಇದ್ದುಕೊಂಡು ಇದ್ದರೆ, ತುಷ್ಟಿಯೆಂಬುದು ಹಸ್ತಗತವಾಯಿತೆಂದೇ ತಿಳಿಯಬೇಕು.

ಈ ಅಭಿಪ್ರಾಯವನ್ನೇ ಸುಲಭವಾಗಿ ಹೇಳಬೇಕಾದರೆ, ನೀತಿಶಾಸ್ತ್ರಕಾರನು ಹೇಳುವಂತೆ—

ಶ್ಲೋ ॥ * " ಅಧೋಧಃ ಪಶ್ಯತಃ ಕಸ್ಯ ಮಹಿಮಾ ನೋಪಚೀಯತೇ ।
ಉಪರ್ಯುಪರಿ ಪಶ್ಯನ್ತಸ್ಸರ್ವ ಏವ ದರಿದ್ರತಿ॥ "

ನಮಗಿಂತ ಮೇಲಣವರನ್ನು ನೋಡಿಕೊಳ್ಳದೆ, ಕೆಳಗಣವರನ್ನೇ

---

* ಟೀಕೆ—ತನಗಿಂತ ಕೆಳಗಣ ಸ್ಥಿತಿಯಲ್ಲಿರುವವನ್ನು ನೋಡುತ್ತ ಬಂದರೆ, ಯಾವನ ಮಹಿಮೆತಾನೆ ಹೆಚ್ಚುವುದಿಲ್ಲ ; ಹಾಗೆಯೇ ಮೇಲೆಮೇಲಿನ ಸ್ಥಿತಿಯಲ್ಲಿರುವವನ್ನು ನೋಡುತ್ತ ಬಂದರೆ ಯಾವನುತಾನೆ ಏನೂ ಇಲ್ಲದ ದರಿದ್ರನಂತೆ ಕಾಣಿಸಿಕೊಳ್ಳುವುದಿಲ್ಲ.

ನೋಡಿಕೊಳ್ಳುತ್ತ ಬಂದರೆ, ಕೊರತೆಗೆ ಅವಕಾಶವಿರುವುದಿಲ್ಲ; ಕೊರತೆಯಿಲ್ಲದಿದ್ದರೆ ಅತ್ಯಾಶೆಯೇ ಹುಟ್ಟುವುದಿಲ್ಲ; ಅತ್ಯಾಶೆಯಿಲ್ಲದಿದ್ದರೆ ಮನಸ್ಸಿಗೆ ಶಾಂತಿಯು ಸಿದ್ಧ; ಮನಸ್ಸು ಶಾಂತವಾಗಿದ್ದರೆ, ಮನುಷ್ಯನು ಸುಖಿಯೇ ಆಗಿರುವನು. ಮೇಲಣವರನ್ನೇ ನೋಡುತ್ತ ಹೋದರೆ, ಕೊರತೆಯೂ, ಜತೆಯಲ್ಲಿಯೇ ಅತ್ಯಾಶೆಯೂ, ಅಸೂಯೆಯೂ, ಅದರೊಡನೆ ದುಃಖವೂ ಇದ್ದೇ ಇದೆ. ಇಂಥ ದುಃಖವು ಚಕ್ರವರ್ತಿಗೂ ಬಿಟ್ಟದುದಲ್ಲ. "ತಿಮಿಂಗಿಲಗಿಲೋಪ್ಯಸ್ತಿ ತದ್ಗಿಲೋಪ್ಯಸ್ತಿ ರಾಘವ" ಎಂಬಂತೆ, ಹಾಗೆ ನೋಡುತ್ತ ಹೋದರೆ, ಒಬ್ಬರನ್ನು ಒಬ್ಬರು ಮೀರಿಸಿಯೇ ಇರುವರು. ಈ ಸ್ಥಿತಿಯು ಕ್ಷುದ್ರಜಂತುವಿನಿಂದ ಆರಂಭಿಸಿ ಚತುರ್ಮುಖನವರೆಗೂ ಇರುವುದು. ಹೀಗಿರುವುದರಿಂದ ನಮಗಿಂತ ಕೆಳಗಣ ಸ್ಥಿತಿಯವರನ್ನೇ ನೋಡಿ ತೃಪ್ತಿಪಡುವ ಅಭ್ಯಾಸವನ್ನು ಮಾಡುತ್ತ ಬರಬೇಕು. ಇದೇ ತುಷ್ಟಿಯನ್ನು ಸಂಪಾದಿಸುವ ಸಾಧನವು.

ಆದರೆ ಎಷ್ಟೆಷ್ಟು ಅಭ್ಯಾಸಮಾಡುತ್ತ ಬಂದರೂ ಮೇಲಣವರನ್ನು ನೋಡದಿರುವುದಕ್ಕಾಗುವುದಿಲ್ಲವಲ್ಲ; ಏನುಮಾಡಬೇಕು! ಎಂದು ಆಕ್ಷೇಪಿಸಬಹುದು. ಮನುಷ್ಯನು ಹೇಗೆಹೇಗಿದ್ದರೂ, ಯಾವಯಾವ ಸ್ಥಿತಿಯಲ್ಲಿದ್ದರೂ, ಇತರರಲ್ಲಿಲ್ಲದ ಕೆಲವು ಕೆಲವು ಸುಖಸಾಧನಗಳನ್ನು ಹೊಂದಿಯೇ ಇರುತ್ತಾನೆ. ಪ್ರೇಮಪಾತ್ರಳಾದ ಪತ್ನಿಯಿರಬಹುದು; ವಿಶ್ವಾಸಾರ್ಹರಾದ ಸ್ನೇಹಿತರಿರಬಹುದು; ವಿಧೇಯರಾದ ಮಕ್ಕಳಿರಬಹುದು; ಶಾರೀರಸಂಪತ್ತಿಯಿರಬಹುದು; ಯಾವುದೋ ಒಂದು ಕಲೆಯಲ್ಲಿ ಕೌಶಲವಿರಬಹುದು; ಕವಿತಾಸಾಮರ್ಥ್ಯವಿರಬಹುದು. ಹೀಗಿರಲು, ಇತರರಲ್ಲಿ ಸ್ಪೃಹಣೀಯವಾದ ತನ್ನಲ್ಲಿಲ್ಲದ ಕೆಲವು ಕೆಲವು ಸುಖಸಾಧನೆಗಳಿಗೆ ಪ್ರತಿಯಾಗಿ, ಅವರಲ್ಲಿಲ್ಲದ ಕೆಲಕೆಲವನ್ನು ತಾನು ಹೊಂದಿರಬಹುದಾದುದರಿಂದ, ಅವುಗಳನ್ನು ನೋಡಿಕೊಂಡು ಅಸೂಯೆಯನ್ನು ಬಿಡಬಹುದು.

ಆದುದರಿಂದಲೇ,

" ಸರ್ವಾ ಸ್ಸಂಪತ್ತಯ ಸ್ತಸ್ಯ ಸಂತುಷ್ಟಂ ಯಸ್ಯ ಮಾನಸಂ ।
ಉಪಾನದ್ಗೂಢಪಾದಸ್ಯ ನನು ಚರ್ಮಾವೃತೇವ ಭೂಃ ॥ "

[ಟೀಕೆ — ಯಾವನ ಮನಸ್ಸು ಸಂತುಷ್ಟವಾಗಿದೆಯೋ, ಅವನಿಗೆ ಸಕಲವಾದ ಸಂಪತ್ತೂ ಉಂಟು. ಹೇಗೆಂದರೆ—ಕಾಲಿಗೆ ಜೋಡುಹಾಕಿಕೊಂಡಿರುವವನಿಗೆ, ನೆಲವು ಚರ್ಮಾವೃತವಾಗಿಯೇ ಇದೆಯಲ್ಲವೆ ?]

## ೧೫. " ಧರ್ಮ ಸರ್ವಸ್ವ. "

" ಧರ್ಮ " ಶಬ್ದವನ್ನು ನಾನಾರ್ಥದಲ್ಲಿ ಉಪಯೋಗಿಸುತ್ತಾರೆ. ಆ ಅರ್ಥಗಳೆಲ್ಲವೂ ಅದರ ಯೌಗಿಕಾರ್ಥದಿಂದಲೇ ಹುಟ್ಟಿದುವಾಗಿವೆ. ಧರ್ಮ ಶಬ್ದವು " ಧಾರ್ಯತೇ ಅನೇನ ಜನಃ ಇತಿ, ಧರ್ಮಃ " ಎಂಬ ವ್ಯುತ್ಪತ್ತಿಯಿಂದ " ಧೃ " ಧಾತುವಿನಿಂದ ಹುಟ್ಟಿರುವುದು. ಲೋಕದಲ್ಲಿ ಜನಗಳು ಪತನದಿಂದ ಅಧೋಗತಿಗೆ ಹೋಗದಹಾಗೆ ಧರಿಸಲ್ಪಡುವರೋ, ಅದಕ್ಕೆ " ಧರ್ಮ " ವೆಂದು ಹೆಸರು. ಅವರೆ ಬಿದ್ದ ಮನುಷ್ಯನು ಕೆಳಗೆ ಬೀಳುವ ಹಾಗೆ ಇದ್ದರೆ, ದೈವವಶದಿಂದ ಯಾವುದೋ ಒಂದು ಅವಲಂಬನವು ಕೈಗೆ ಸಿಕ್ಕಿ, ಅದರಿಂದ ಅವನು ತತ್ಕಾಲದಲ್ಲಿ ತನಗೆ ಸಂಭವಿಸುತ್ತಿದ್ದ ಅಧಃಪತನವನ್ನು ತಪ್ಪಿಸಿಕೊಳ್ಳಬಹುದಾದರೂ, ಆ ಅವಲಂಬನವನ್ನು " ಧರ್ಮ " ಶಬ್ದದಿಂದ ವ್ಯವಹರಿಸಲಾಗುವುದಿಲ್ಲ. " ಧರ್ಮ " ಶಬ್ದದ ಯೌಗಿಕಾರ್ಥವೇನೋ ಅಧೋಗತಿಯಿಂದ ತಪ್ಪಿಸಿಕೊಳ್ಳುವ ಸಾಧನವೆಂಬ ಅರ್ಥವನ್ನು ಕೊಡುವುದು. ಆದರೆ ರೂಢ್ಯರ್ಥವು ಬೇರೆಯಾಗಿರುವುದು. ಕೆಲವರು ಈ ಶಬ್ದವನ್ನು ಗುಣ ಸ್ವಭಾವ, ಆಚಾರ, ಅಹಿಂಸೆ, ಇತ್ಯಾದ್ಯರ್ಥಗಳಲ್ಲಿ ಉಪಯೋಗಿಸುತ್ತಾರೆ. ಈ ಶಬ್ದಕ್ಕೆ ಮುಖ್ಯವಾಗಿ " ಕೃತ್ಯಕರಣ " ವೆಂಬ ಅರ್ಥದಲ್ಲಿಯೇ ಪ್ರಯೋಗವು ಹೆಚ್ಚು. " ಕೃತ್ಯಕರಣ " ವೆಂದರೆ ಮಾಡತಕ್ಕ ಕೆಲಸವನ್ನು ಮಾಡುವುದು. ಆದುದರಿಂದ " ಇದು

ಧರ್ಮ" ವೆಂದರೆ, ಇದು ಮಾಡತಕ್ಕ ಕೆಲಸ, "ಇದು ಅಧರ್ಮ" ವೆಂದರೆ ಇದು ಮಾಡಬಾರದಕೆಲಸವೆಂಬರ್ಥ. ಧರ್ಮಾಧರ್ಮವಿಚಾರಾವಸರದಲ್ಲಿ ಶಾಸ್ತ್ರಕಾರರು, "ಅಹಿಂಸಾಲಕ್ಷಣೋಧರ್ಮಃ, ಹಿಂಸಾಚಾಧರ್ಮಲಕ್ಷಣಾ ॥[1]" "ಯತೋಽಭ್ಯುದಯನಿಶ್ಶ್ರೇಯಸಸಿದ್ಧಿಸ್ಸಧರ್ಮಃ, ಅಧರ್ಮಃ ಪುನರೇತದ್ವಿಪರೀತಫಲಂ[2]" "ಚೋದನಾಲಕ್ಷಣೋಽರ್ಥೋ ಧರ್ಮಃ॥"[3] "ವೇದಪ್ರಣಿಹಿತೋಧರ್ಮೋಽಹ್ಯಧರ್ಮಸ್ತದ್ವಿಪರ್ಯಯಃ ॥[4]" ಏವಂವಿಧವಾಗಿ ಧರ್ಮಶಬ್ದಕ್ಕೆ ನಿರುಕ್ತಿಯನ್ನು ಬೇರೆಬೇರೆಯಾಗಿ ಹೇಳಿದರೂ, ಒಂದು ವಿಷಯದಲ್ಲಿ ಮಾತ್ರ ಎಲ್ಲರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಅದಾವುವೆಂದರೆ: ಈಗಿನ ಜನ್ಮದಲ್ಲಿ ನಾವು ಮಾಡುವ ವ್ಯಾಪಾರಗಳು ಮುಂದೆ ಇದಕ್ಕಿಂತ ನಿಹೀನವಾದ ಜನ್ಮವನ್ನು ಉಂಟುಮಾಡುವುವಾಗಿ ಇರಕೂಡದು—ಎಂಬ ವಿಷಯದಲ್ಲಿ ಯಾವ ವಿವಾದವೂ ಇಲ್ಲ. ಹೀಗಿರಲು ಧರ್ಮಾಧರ್ಮ ವಿಚಾರದಲ್ಲಿ ಆ ಆ ಮತಗಳ ಶಾಸ್ತ್ರಗಳನ್ನೇ ಅವರವರಿಗೆ ಆಧಾರವೆಂದು ತಿಳಿಯಬೇಕು. ಧರ್ಮಾಧರ್ಮಗಳು ಮತತತ್ವಗಳ ಆಧಾರದ ಮೇಲೆಯೇ ನಿಲ್ಲಬೇಕು. ಧರ್ಮಾಧರ್ಮ ಸ್ವರೂಪವಿಚಾರವು ಪ್ರಕೃತ ವಿಷಯವಲ್ಲವಾದುದರಿಂದ, ಅದರ ವಿಚಾರಕ್ಕೆ ಈ ಪ್ರಬಂಧದಲ್ಲಿ ವಿಶೇಷಾವಕಾಶ ಕೊಡಲಾಗುವುದಿಲ್ಲ. ಪ್ರಬಂಧವಿಷಯವು "ಧರ್ಮಸರ್ವಸ್ವ" ವಾದುದರಿಂದ, ಧರ್ಮದ ಸ್ವರೂಪವನ್ನು ದಿಕ್ಪ್ರದರ್ಶನಮಾಡಲಾಯಿತು.

ಶ್ರುತಿಸ್ಮೃತೀತಿಹಾಸಪುರಾಣಾಗಮಾದಿಗಳು ನಮಗೆ ಧರ್ಮಾಧರ್ಮಗಳಿಗೆ ಆಧಾರಗಳು. ಅವುಗಳ ವಿಚಾರವು ಪ್ರಕೃತವಿಷಯವಲ್ಲ. ಅವು

---

1. ಅಹಿಂಸೆಯೇ ಧರ್ಮವು, ಹಿಂಸೆಯೇ ಅಧರ್ಮವು. 2. ಅಭ್ಯುದಯವೆಂದರೆ ಸುಖ; ನಿಶ್ಶ್ರೇಯಸವೆಂದರೆ ಕಲ್ಯಾಣ—ಇವು ಎರಡೂ ಏತರಿಂದ ಸಿದ್ಧಿಸುತ್ತವೆಯೋ, ಅದೇ ಧರ್ಮವು; ಇದಕ್ಕೆ ವಿಪರೀತಫಲವುಳ್ಳದು ಅಧರ್ಮವು. 3. ಹೀಗೆ ಮಾಡು, ಹೀಗೆ ಮಾಡಬೇಡ ಎಂಬದಾಗಿ ಶಾಸ್ತ್ರದಲ್ಲಿ ಹೇಳಿರುವುದೇ ಧರ್ಮವೆಂಬುದು. 4. ವೇದದಲ್ಲಿ ಹೇಳಿರುವುದೇ ಧರ್ಮವು; ಅದಕ್ಕೆ ವ್ಯತ್ಯಾಸವಾಗಿ ನಡೆವುದೇ ಅಧರ್ಮವು.

ಗಳಿಗೆಲ್ಲಾ ಆಧಾರವಾಗಿರುವ ಧರ್ಮಸರ್ವಸ್ವವನ್ನು ವಿಚಾರಮಾಡಿದರೆ ಸಾಕೆಂದು ತೋರುತ್ತದೆ. "ಧರ್ಮಸರ್ವಸ್ವ" ವೆಂದರೆ ಸಕಲ ಸನಾತನ ಧರ್ಮಗಳಿಗೆ "ಸರಸ್ವ"—ಸಾರ ಎಂದರೆ, ಯಾವ ಧರ್ಮಸೂತ್ರದ ಮೇಲೆ ಎಲ್ಲಾ ಧರ್ಮಸೂತ್ರಗಳು ಹುಟ್ಟಿದಂತೆ ಕಾಣಬರುವುವೋ ಆ ಸೂತ್ರ ವಾವುದು? ಎಂಬುದನ್ನು ವಿಚಾರಮಾಡಬೇಕಾಗಿದೆ.

ಧರ್ಮ ವಿಚಾರದಲ್ಲಿ ಹೇಳಿದವರ ಮಾತನ್ನೆಲ್ಲಾ ನಂಬುವುದಕ್ಕಾಗುವುದಿಲ್ಲ. ಒಂದು ವಿಷಯವನ್ನು ಸಿದ್ಧಾಂತವೆಂದು ಭಾವಿಸಬೇಕಾದರೆ—ಅಥವಾ ಬಹುಮಾನಪುರಸ್ಸರವಾಗಿ ಅಚರ್ಚಿತವಾಗಿ ಅಂಗೀಕರಿಸಬೇಕಾದರೆ, ಆ ವಿಷಯದಲ್ಲಿ ಮೂರು ಗುಣಗಳಿರಬೇಕು. ಅವು ಯಾವುವೆಂದರೆ: ವಕ್ತೃವೈಲಕ್ಷಣ್ಯ, ವಿಷಯವೈಲಕ್ಷಣ್ಯ, ಶ್ರೋತೃವೈಲಕ್ಷಣ್ಯ. ವಕ್ತೃವೈಲಕ್ಷಣ್ಯವೆಂದರೆ ಹೇಳುವವನ ಗೌರವ; ಶ್ರೋತೃವೈಲಕ್ಷಣ್ಯವೆಂದರೆ ಕೇಳುವವನ ಯೋಗ್ಯತೆ. ವಿಷಯವೈಲಕ್ಷಣ್ಯವೆಂದರೆ ವಿಷಯದ ಗೌರವ. ಈ ಮೂರು ಗುಣಗಳು ಎಲ್ಲಿವೆಯೋ ಅದನ್ನು ಸಿದ್ಧಾಂತವೆಂದೇ ನಂಬುವರು. ಉದಾಹರಣೆಗಾಗಿ; ವ್ಯಾಕರಣಪ್ರವರ್ತಕನಾದ ಪಾಣಿನ್ಯಾಚಾರ್ಯನಿಗೆ ಒಂದು ಶಬ್ದದ ವ್ಯುತ್ಪತ್ತಿಯಲ್ಲಿ ಅನುಮಾನ ಹುಟ್ಟಿ, ಗುರುವನ್ನು ಕೇಳಿ ಗುರುವು ಹೀಗೆ ಅಭಿಪ್ರಾಯಪಟ್ಟಿದ್ದಾರೆ, ಅದು ಹೀಗೆ ಅದು ಹೀಗೆ, ಎಂದು ಬರೆದಿದ್ದರೆ, ಆ ವ್ಯುತ್ಪತ್ತಿಯಲ್ಲಿ ಸಂದೇಹ ಹುಟ್ಟುವುದೆ? ಇಲ್ಲ. ಭಗವದನುಗ್ರಹಕ್ಕೆ ಪಾತ್ರನಾಗಿ, ದಿವ್ಯಚಕ್ಷುಸ್ಸನ್ನು ಹೊಂದಿದ ಅರ್ಜುನನು ತತ್ತ್ವವಿಷಯವಾಗಿ ಕೇಳಿದ ಪ್ರಶ್ನೆಗೆ ಸಮಾಧಾನರೂಪವಾಗಿ ಹೇಳಿದ ಶ್ರೀಕೃಷ್ಣವಾಕ್ಯದಲ್ಲಿ ಯಾರಿಗೆ ತಾನೆ ಅಸತ್ಯಜ್ಞಾನಭ್ರಾಂತಿಯಾಗುವುದು?

ಹೀಗಿರಲು ಪ್ರಕೃತವಿಚಾರವು ಧರ್ಮಸರ್ವಸ್ವವಾಗಿರುವುದರಿಂದ, ಇದರಲ್ಲಿ ನನ್ನ ನಮ್ಮ ಅಭಿಪ್ರಾಯವು ಕಾರ್ಯಕಾರಿಯಲ್ಲ. ನಾವು ಕಿಂಚಿಜ್ಞರಾದುದರಿಂದ, ನಮ್ಮಲ್ಲಿ ವಿಷಯಕ್ಕೆ ತಕ್ಕ ಶ್ರೋತೃವೈಲಕ್ಷಣ್ಯ

ಮೊದಲೇ ಇಲ್ಲ ವಕ್ತೃವೈಲಕ್ಷಣ್ಯವೆಲ್ಲಿಂದ ಬಂದಿತು ? ಆದುದರಿಂದ ಈ ವಿಚಾರವು ಹಿಂದೆ ಎಲ್ಲಿಯಾದರೂ ನಮ್ಮ ಹಿರಿಯರಲ್ಲಿ ಪ್ರಸಕ್ತವಾಗಿದೆಯೋ ನೋಡಬೇಕು. ಹಾಗೆ ಪ್ರಸಕ್ತವಾಗಿದ್ದರೆ, ಆಕಡೆ ವೈಲಕ್ಷಣ್ಯತ್ರಯವಿದೆಯೋ ನೋಡಬೇಕು. ವೈಲಕ್ಷಣ್ಯತ್ರಯದ ಸಂಭವವಿದ್ದು ಸಿದ್ಧಾಂತವಾಗಿದ್ದರೆ, ಅದನ್ನು ನಾವು ಅಂಗೀಕರಿಸಬೇಕು, ಅದರಂತೆ ನಡೆದುಕೊಳ್ಳಲು ಯತ್ನಿಸಬೇಕು. ಏಕೆಂದರೆ -ಧರ್ಮಸೂಕ್ಷ್ಮಗಳನ್ನು ತಿಳಿವುದು ಬಹುಕಷ್ಟ ; ಅದನ್ನು ತಿಳಿದು ಹೇಳತಕ್ಕವರು ತ್ರಿಕಾಲಜ್ಞರಾದ ಮಹಾತಪಸ್ವಿಗಳಾಗಿರಬೇಕು.

ಹಿಂದೆ ವ್ಯಾಸಮಹರ್ಷಿಗಳು ಧರ್ಮಾರ್ಥಕಾಮಮೋಕ್ಷಸಾಧನೋಪಾಯವಾದ ಮಹಾಭಾರತ ಕಥೆಯನ್ನು ವಿಸ್ತಾರಮಾಡಬೇಕೆಂದು ಬಗೆದು ಬ್ರಹ್ಮವರಪ್ರಸಾದಲಬ್ಧದಿವ್ಯಜ್ಞಾನರಾಗಿ ಸಕಲತತ್ತ್ವಾರ್ಥವನ್ನು ಕರತಲಾಮಲಕದಂತೆ ತಿಳಿವ ವಾಲ್ಮೀಕಿಮಹರ್ಷಿಗಳಲ್ಲಿಗೆ ದಯಮಾಡಿಸಿ, ಅವರ ಅನುಗ್ರಹವನ್ನು ಪಡೆಯಬೇಕೆಂದು ವಿನಿಮಿತೋತ್ತಮಾಂಗರಾಗಿ ಕೈಗಳನ್ನು ಮುಗಿದುಕೊಂಡು ನಿಲ್ಲಲು, ವಾಲ್ಮೀಕಿಮಹರ್ಷಿಗಳು ಪರೀಕ್ಷಾರ್ಥವಾಗಿ “ ಅಯ್ಯಾ, ಕೇವಲ ಧರ್ಮವೆಂಬುದು ಆವುದು ” ? ಎಂದು ಪ್ರಶ್ನೆಮಾಡಿದರು. ಅದಕ್ಕೆ ವ್ಯಾಸಮಹರ್ಷಿಗಳು ಹೇಳಿದುದೇನೆಂದರೆ :—

“ ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾಚೈವಾವಧಾರ್ಯತಾಂ ।
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥ ”

ಅದಕ್ಕೆ ವಾಲ್ಮೀಕಿ ಮಹರ್ಷಿಗಳು ಸಮ್ಮತಿಕೊಟ್ಟರು.

ಈ ಸಂದರ್ಭದಲ್ಲಿ ವಾಲ್ಮೀಕಿಮಹರ್ಷಿಗಳು ಸಮ್ಮತಿಕೊಟ್ಟವರು ; ಹೇಳಿದವರು ವ್ಯಾಸಮಹರ್ಷಿಗಳು ; ವಿಷಯವು ಧರ್ಮಸರ್ವಸ್ವವಾಗಿರುವುದರಿಂದ ಇದು ಸಿದ್ಧಾಂತವೆಂದೇ ತಿಳಿಯಬೇಕು. ವೇದವ್ಯಾಸಮುನಿಮತವಾದುದರಿಂದ ಇದೇ ಸಕಲಧರ್ಮಸಾರವೆಂದೂ ತಿಳಿಯಬೇಕು. ಈ

ಸಿದ್ಧಾಂತಪ್ರಕಾರ ನಮ್ಮ ನಡತೆಯು ಇರಬೇಕು. ಇದನ್ನು ಅನುಸರಿಸ ಬೇಕಾದರೆ, ಇದರ ಅರ್ಥವನ್ನು ಚೆನ್ನಾಗಿ ತಿಳಿಯಬೇಕು ಅದಕ್ಕೋಸ್ಕರ ಈ ಶ್ಲೋಕಾರ್ಥವನ್ನು ಯಥಾಮತಿ ವಿವರಿಸಲು ಯತ್ನಿಸುತ್ತೇನೆ.

ಪ್ರತಿಪದಾರ್ಥ :—ಸಕಲಧರ್ಮದ ತಿರುಳನ್ನು ಕೇಳು, ಕೇಳಿ ಅದರ ಅರ್ಥವನ್ನು ಚೆನ್ನಾಗಿ ಅವಧರಿಸು ಅದೇನೆಂದರೆ. ತನಗೆ ಪ್ರತಿಕೂಲವಾದುದನ್ನು ಪರರಿಗೆ ಮಾಡಲಾಗದು.

ತನಗೆ ಯಾವಾಗಲೂ ಯಾವ ವಿಧವಾದ ಕೇಡೂ ಬರಬಾರದೆಂದಿರುವ ಮನುಷ್ಯನು ಸಕಲ ಪ್ರಾಣಿಯನ್ನು ಆ ಪ್ರಾಣಿಯು ಎಂಥದೇ ಆಗಲಿ ತನ್ನನ್ನು ತಾನು ನೋಡಿ ಕೊಳ್ಳುವಂತೆ ನೋಡಬೇಕು ಎಂಬುದೇ ಈ ಶ್ಲೋಕದ ತಾತ್ಪರ್ಯಾರ್ಥ.

ಈ ಸೂತ್ರದಲ್ಲಿ ಹೇಳಿರುವ ಮೇರೆ ನಮ್ಮ ನಡೆತೆಯು ಇದ್ದರೆ ಸಾಕು, ನಮಗೆ ಸಕಲ ಶ್ರೇಯಸ್ಸೂ ಸಿದ್ಧಿಸುವುದು. ಐಹಿಕಾಮುಷ್ಮಿಕ ಶ್ರೇಯಸ್ಸಿಗೆ ಇದೇ ಮಾರ್ಗವು. ಈ ಸೂತ್ರವು ನಮ್ಮನ್ನು ಸಮಸ್ತವ್ಯಾಪಾರದಲ್ಲಿಯೂ ಸರಿಯಾದ ರೀತಿಯಲ್ಲಿ ನಡೆಸುತ್ತದೆ. ಹೇಗೆಂದರೆ—ಹಸಿವಾದರೆ ಸಂಕಟವಾಗುತ್ತದೆಯಲ್ಲವೆ ; ಆದುದರಿಂದ ಇತರರು ಹಸಿವಿನಿಂದ ಸಂಕಟಪಡುವಂತೆ ಮಾಡಬಾರದು. ಬಾಯಾರಿಕೆಯ ಪೀಡೆಯನ್ನು ತಡೆವುದಕ್ಕಾಗುವುದಿಲ್ಲ; ಆದುದರಿಂದ ಇತರರನ್ನು ಬಾಯಾರಿಕೆಯಿಂದ ಬಳಲಿಸಬಾರದು. ಬಿದ್ದು ಕಾಲು ಮುರಿದುಕೊಂಡರೆ ನೋವಾಗುತ್ತದೆ ; ಆದುದರಿಂದ ಇತರರಿಗೆ ನೋವನ್ನುಂಟುಮಾಡಬಾರದು. ನಮ್ಮ ವಸ್ತುವನ್ನು ಇತರರು ಕದ್ದುಕೊಂಡು ಹೋಗುವುದು ನಮಗೆ ಇಷ್ಟವಾಗಿಲ್ಲ ; ಆದುದರಿಂದ ಇತರರ ವಸ್ತುವನ್ನಪೇಕ್ಷಿಸಬಾರದು. ಯಾರಾದರು ನಮ್ಮನ್ನು ಹೊಡೆವುದು ನಮಗೆ ಇಷ್ಟವಾಗಿಲ್ಲ, ಆದುದರಿಂದ ಯಾರನ್ನೂ ಹೊಡೆಯಬಾರದು. ಯಾರೂ ನಮ್ಮನ್ನು ಬೈಯಬಾರದೆಂದಿದ್ದೇವೆ, ಆದುದರಿಂದ ನಾವು ಯಾರ

ರನ್ನೂ ದೂಷಿಸಬಾರದು. ನಾವು ಕಷ್ಟದಲ್ಲಿ ನರಳುವುದು ನಮಗಿಷ್ಟ ವಾಗಿಲ್ಲ; ಆದುದರಿಂದ ಇತರರನ್ನು ಕಷ್ಟಕ್ಕೆ ಸಿಕ್ಕಿಸಬಾರದು. ಇತರರು ನಮ್ಮ ವಿಷಯದಲ್ಲಿ ನಿರ್ದಯರಾಗಿರುವುದು ನಮಗೆ ಸಹ್ಯವಲ್ಲ; ಆದುದ ರಿಂದ ಯಾರಲ್ಲಿಯೂ ನಿಷ್ಕರುಣರಾಗಿರಬಾರದು. ನಾವು ತೊಂದರೆಯಲ್ಲಿ ದ್ದಾಗ, ಅದರ ನಿವಾರಣೆಗಾಗಿ ಹೇಗೆ ತ್ವರೆಪಡುತ್ತೇವೋ, ಹಾಗೆಯೇ ಇತ ರರ ಕಷ್ಟವನ್ನು ನಿವಾರಿಸುವುದರಲ್ಲಿ ತ್ವರೆಯುಳ್ಳವರಾಗಬೇಕು. ಹಸಿದ ವರಿಗೆ ಅನ್ನ ಹಾಕುವುದರಲ್ಲಿಯೂ, ಬಾಯಾರಿದವರಿಗೆ ನೀರು ಕೊಡುವುದ ರಲ್ಲಿಯೂ, ನೋವುಪಟ್ಟವರ ನೋವನ್ನು ನಿವಾರಿಸುವುದರಲ್ಲಿಯೂ ತ್ವರೆಯು ಳ್ಳವರಾಗಬೇಕು. ದಾರಿ ನಡೆವಾಗ ಎಲ್ಲಿಯಾದರೂ ನೆರಳು ಸಿಕ್ಕಿದರೆ ಅಲ್ಲಿ ವಿಶ್ರಮಿಸಿಕೊಂಡು ಸುಖಿಸುವೆವು ಸಿಕ್ಕದಿದ್ದರೆ ಸಂಕಟಪಡುವೆವು; ಆದು ದರಿಂದ ತೋಪುಗಳನ್ನು ಹಾಕಬೇಕು. ಪ್ರಯಾಣ ಹೋಗುತ್ತಿರುವಾಗ ಕೊಳಗಳಲ್ಲಿ ವಿಶ್ರಮಿಸಿಕೊಂಡು, ಧರ್ಮಸತ್ರಗಳಲ್ಲಿ ಉಂಡು ಸುಖಪಡು ತ್ತೇವೆ, ಧರ್ಮಸತ್ರಗಳೂ, ತೋಪುಗಳೂ, ಕೊಳಗಳೂ ಇಲ್ಲದ ಕಡೆ ನಾವು ಪಡುವ ಪಾಡು ದೇವರಿಗೆ ವೇದ್ಯ ಆದುದರಿಂದ ಅನ್ನಸತ್ರಗಳನ್ನೂ, ತೋಪುಗಳನ್ನೂ, ಕೊಳಗಳನ್ನೂ ಕಟ್ಟಿಸಬೇಕು. ಇಂಥವುಗಳನ್ನು ಕಟ್ಟಿಸುವುದಕ್ಕೆ ಚೈತನ್ಯವಿಲ್ಲದಪಕ್ಷಕ್ಕೆ, ಅಲ್ಲಲ್ಲಿ ದಾರಿಯ ಉದ್ದಕ್ಕೂ ಕುಳಿ ತುಕೊಳ್ಳುವುದಕ್ಕೆ ಕಟ್ಟೆಗಳನ್ನೂ, ನೆಳಲುಕೊಡುವ ಮರಗಳನ್ನೂ, ಫಲವೃಕ್ಷಗಳನ್ನಾದರೂ ಹಾಕಿಸಬೇಕು. ಇದೂ ಸಾಗದಿದ್ದರೆ, ಅಂಥವು ಗಳನ್ನು ಮಾಡಿಸುವ ಪುಣ್ಯಾತ್ಮರನ್ನು ಪ್ರೇರಿಸಬೇಕು. ಪಶು ಪಕ್ಷಿ ಮೃಗಾದಿಗಳೂ ನಮ್ಮಂತೆ ಪ್ರಾಣಿಗಳಾದುದರಿಂದ, ಅವುಗಳ ಕಷ್ಟನಿವಾರ ಣದಲ್ಲಿಯೂ ಯತ್ನಿಸಬೇಕೆಂದು ಹೇಳಬೇಕಾದುದಿಲ್ಲ.§ ಹೀಗೆಯೇ ನೋ ಡುತ್ತ ಹೋದರೆ ನಮ್ಮ ಸಕಲಪ್ರವೃತ್ತಿನಿವೃತ್ತಿಗೂ ಈ ಸೂತ್ರವೇ ಆಧಾರವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

§ ಸ್ಮೃತಿಗಳಲ್ಲಿ ಹೇಳಿರುವ ದಶಧರ್ಮಗಳೊಡನೆ ಹೋಲಿಸಿ ನೋಡಿ.

ಈ ಸೂತ್ರವನ್ನು ಪಾಶ್ಚಿಮಾತ್ಯರಲ್ಲಿ ನೆಲೆಗೊಂಡಿರುವ "ಸ್ವರ್ಣ ಸೂತ್ರ" ದೊಡನೆ ಹೋಲಿಸಿ ನೋಡಬೇಕು. ಆಗಲ್ಲವೆ ನಮ್ಮ ಹಿರಿಯರ ಉದಾರಾಶಯವು ಗೊತ್ತಾಗುವುದು. ನಮ್ಮ ವಿಷಯದಲ್ಲಿ ಇತರರು ಹೇಗೆ ನಡೆದುಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆಯೋ, ಹಾಗೆಯೇ ನಾವೂ ಅವರ ವಿಷಯದಲ್ಲಿ ನಡೆದುಕೊಳ್ಳಬೇಕು ಎಂದು ಪಾಶ್ಚಿಮಾತ್ಯರು ನಿರೂಪಿಸುವರು. ಇವರ ಆಶಯದಲ್ಲಿ ಫಲಾಭಿಸಂಧಿಯು ಅತ್ಯಲ್ಪವಾಗಿಯಾದರೂ ಇರಬೇಕೆಂದು ಸೂಚಿತವಾಗುವುದು. ನಮ್ಮ ಹಿರಿಯರ ಅಭಿಪ್ರಾಯವು ಹಾಗಲ್ಲ. ನಮ್ಮ ಪ್ರವೃತ್ತಿಯು ಫಲಾಭಿಸಂಧಿಯಿಲ್ಲದೆಯೇ ಉಂಟಾಗಬೇಕು. ಅದೇ ಪ್ರವೃತ್ತಿಗೆ ಅದೇ ಫಲವೆಂದು ತಿಳಿದು ಪ್ರವರ್ತಿಸಬೇಕು. ಕಣ್ಣು ನೋಡುವುದಕ್ಕೂ, ಕಾಲು ನಡೆವುದಕ್ಕೂ, ಮೂಗು ವಾಸನೆ ನೋಡುವುದಕ್ಕೂ ಪ್ರತಿಫಲವನ್ನು ಕೇಳುತ್ತವೆಯೆ? ಕಣ್ಣಿಗೆ ನೋಡುವುದೇ ಫಲ; ಕಾಲಿಗೆ ನಡೆವುದೇ ಫಲ, ಮೂಗಿಗೆ ವಾಸನೆನೋಡುವುದೇ ಫಲ. ಹೀಗೆಯೇ ಉಪಕಾರಮಾಡುವುದಕ್ಕೆ ಉಪಕಾರಮಾಡುವುದೇ ಫಲವೆಂದು ಭಾವಿಸಬೇಕು. ಇತರರು ಊಟಮಾಡುವುದು ಅನ್ನಹಾಕುವುದಕ್ಕೆ ಫಲವೆಂದು ಭಾವಿಸಬೇಕು. ಇತರರು ಭೋಗಿಸಲಿ, ಇತರರು ಸಂತೋಷಿಸಲಿ, ಎಲ್ಲರಿಗೂ ಮಂಗಳವುಂಟಾಗಲಿ, ಎಂಬುದೇ ನಮ್ಮ ಪ್ರವೃತ್ತಿ ನಿವೃತ್ತಿಗಳಿಗೆ ಫಲವಾಗಿರಬೇಕು. "ಉದಾರಚರಿತಾನಾಂತು ವಸುಧೈವ ಕುಟುಂಬಕಂ" ಎಂಬಂತೆ ಪ್ರಪಂಚವೇ ನಮ್ಮ ಸಂಸಾರವಾಗಿರಬೇಕು. ಈ ರೀತಿಯಲ್ಲಿ ಫಲಾಭಿಸಂಧಿಯನ್ನು ಬಿಟ್ಟು, ಅದಕ್ಕೆ ಅದೇ ಫಲವೆಂದು ತಿಳಿದು, ನಾವು ನಡೆದುಕೊಳ್ಳಬೇಕು—ಎಂದು ಹಿರಿಯರು ಹೇಳುವರು.

ಸಕಲ ಧರ್ಮಸೂತ್ರಗಳಿಗೂ ಇದೇ ಸರ್ವಸ್ವವೆಂಬುದನ್ನು ದಿಕ್ಪ್ರದರ್ಶನ ಮಾಡುತ್ತೇನೆ. ದಾನವಿಚಾರದಲ್ಲಿ ಹುಟ್ಟಿರುವ ಶ್ರೇಷ್ಠವಾದ ಧರ್ಮಸೂತ್ರವು—

" ದಾತವ್ಯಮಿತಿ ಯದ್ದಾನಂ ದೀಯತೇನುಪಕಾರಿಣೇ |
ದೇಶೇಕಾಲೇಚಪಾತ್ರೇ ಚ ತದ್ದಾನಂ ಸಾತ್ವಿಕಂ ವಿದುಃ ‖ "

ಟೀಕೆ— " ಅನುಪಕಾರಿಣೇ "—ಯಾವನಲ್ಲಿ ಯಾವ ವಿಧವಾದ ಉಪಕಾರವು ದೊರೆವ ಸಂಭವವು ಇಲ್ಲವೋ ಅಂಥವನಿಗೆ. " ದಾತವ್ಯಮಿತಿ "— ಕೊಡಬೇಕು ಎಂಬುದಾಗಿ, ಎಂದರೆ, ಕೊಡುವುದೇ ನಮ್ಮ ಕರ್ತವ್ಯ ಅಥವಾ ಧರ್ಮವೆಂದು ಭಾವಿಸಿ. " ದೇಶೇಕಾಲೇಚಪಾತ್ರೇಚ "—ದೇಶಕಾಲಪಾತ್ರಗಳ ವಿವೇಚನಾಪೂರ್ವಕವಾಗಿ. " ಯದ್ದಾನಂ "—ಕೊಡುವುದು ಯಾವುದುಂಟೋ. " ತದ್ದಾನಂ "—ಆ ದಾನವನ್ನು. " ಸಾತ್ವಿಕಂ ವಿದುಃ "—ಅತ್ಯಂತ ಶ್ರೇಷ್ಠವಾದ ದಾನವೆಂದು ಹೇಳುವರು.

ಇಲ್ಲಿ " ಅನುಪಕಾರಿಣೇ " ಎಂಬುವರಿಂದ ಯಾವವಿಧವಾದ ಪ್ರತಿಫಲಲೇಶವನ್ನೂ ನಿರೀಕ್ಷಿಸದೆ; ಎಂದರೆ ಮುಂದೆಯಾದರೂ ಇವನಿಂದ ಸಹಾಯ ದೊರೆಯುತ್ತದೆ ಎಂಬ ಅಭಿಪ್ರಾಯವೂ ಇರಕೂಡದು ಎಂದು ಹೇಳಿದಂತಾಗುವುದು. " ದಾತವ್ಯಮಿತಿ " ಎಂಬುದರಲ್ಲಿ ದಾನಮಾಡುವುದರಿಂದ ಇತರರ ಗೌರವವು ನಮಗುಂಟಾಗುವುದು, ಎಲ್ಲರೂ ನಮ್ಮನ್ನು ದಾನಿಯೆಂದು ಕರೆವರು ಎಂಬ ಅತ್ಯಲ್ಪವಾದ ಫಲಾಭಿಸಂಧಿಯೂ ಇರಕೂಡದು ; ಇದೇ ನಮ್ಮ ಕರ್ತವ್ಯ, ಇದನ್ನು ಮಾಡದಿದ್ದರೆ ನಮ್ಮ ಸತ್ಕೀರ್ತಿಗೇ ಒಂದು ಕುಂದಕಬರುವುದು ಎಂಬ ಅಭಿಪ್ರಾಯವು ಸೂಚಿತವಾಗಿದೆ. " ಪಾತ್ರೇ " ಎಂಬುದರಿಂದ ಕಳ್ಳನಿಗೆ ಹರಿತವಾದ ಕತ್ತಿಯನ್ನು ಕೊಡಬಾರದು, ಎಂದು ಹೇಳಿದಂತಾಗುವುದು. " ದೇಶೇಕಾಲೇಪಾತ್ರೇ " ಎಂಬುದರಿಂದ ಮದ್ಯಪಾಯಿಗೆ ಹೆಂಡದ ಅಂಗಡಿಯ ಹತ್ತಿರ ಕಾಸು ಕೊಡಬಾರದು; ಮಧ್ಯಾಹ್ನಸಮಯದಲ್ಲಿ ಹಸಿದು ಬಂದ ಮನುಷ್ಯನು ಮದ್ಯಪಾಯಿಯಾದರೂ ಆಹಾರ ಸಿಕ್ಕುವ ಸ್ಥಳವು ಸಮೀಪದಲ್ಲಿದ್ದರೆ ಅಥವಾ ಅವನು ಆಹಾರವನ್ನು ಕೊಳ್ಳುವುದರಲ್ಲಿಯೇ ವ್ಯಯಮಾಡುತ್ತಾನೆ ಎಂಬುದು ಗೊತ್ತಾಗಿದ್ದರೆ, ಅವನಿಗೆ ದ್ರವ್ಯದಾನ ಮಾಡಬಹುದು ; ಅದೇ ಮನುಷ್ಯನು ಸಂಧ್ಯಾಕಾಲದಲ್ಲಿ ಬಂದು ಯಾಚಿಸಿದರೆ, ಅವನಿಗೆ ಸಹಾಯಮಾಡಕೂಡದು ; ಏಕೆಂದರೆ—ಆ ದ್ರವ್ಯವನ್ನು ಅವನು ಮದ್ಯ ಕುಡಿಯುವುದರಲ್ಲಿ ಉಪಯೋಗಿಸುವನು ; ಅದೇ ಮನುಷ್ಯನಿಗೆ ಮಧ್ಯಾಹ್ನಕಾಲದಲ್ಲಿಯೂ ಮದ್ಯವಿಕ್ರಯಶಾಲೆಯ ಹತ್ತಿರ ಕೊಡಕೂಡದು ; ಏಕೆಂದರೆ—ಮದ್ಯಶಾಲೆಯು ಹತ್ತಿರವಿದ್ದರೆ, ಹಸಿವನ್ನು ತಡೆದುಕೊಂಡಾದರೂ ಮದ್ಯವನ್ನು ಕುಡಿಯುವಂತೆ ಮಾಡಿಸುತ್ತದೆ. ಎಂಬ ಈ ಅರ್ಥಗಳೆಲ್ಲವೂ ಸ್ಫುರಿಸುತ್ತವೆ. ಮೇಲೆ ಹೇಳಿದ ಅರ್ಥಗಳೆಲ್ಲವೂ " ಆತ್ಮನಃ ಪ್ರತಿ

ಕೂಲಾಃ" ಎಂಬ ಸೂತ್ರಭಾಗದ ಗೂಢಾಭಿಪ್ರಾಯಗಳಾಗಿರುವುವು. "ದಾತವ್ಯಮಿತಿ ಅನುಪಕಾರಿಣೇ" ಎಂಬುದರಲ್ಲಿ ಫಲಾಭಿಸಂಧಿಯಿಲ್ಲದೆ ದಾನಮಾಡಬೇಕೆಂಬ ಅರ್ಥವೂ ಸ್ಪಷ್ಟವಾಗುವುದು. ಆದುದರಿಂದ ಈ ಶ್ರೇಷ್ಠವಾದ ಧರ್ಮಸೂತ್ರವೂ ಕೂಡ ಧರ್ಮಸರ್ವಸ್ವದಲ್ಲಿಯೇ ಅಂತರ್ಭಾವವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

### ದಯಾವಿಷಯದಲ್ಲಿ ಹುಟ್ಟಿರುವ ಪ್ರಬಲ ಪ್ರಮಾಣ—

### "ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ"

ಟೀಕೆ—ದಯೆ ಎಂದರೆ ಪರದುಃಖಾಸಹಿಷ್ಣುತ್ವ; ಇತರರ ದುಃಖವನ್ನು ನೋಡಿ ಸಹಿಸದೆ ಇರುವಿಕೆ ಎಂಬುದು. ತನ್ನಂತೆ ಸಕಲ ಭೂತಗಳನ್ನೂ ನೋಡುವವನೇ ನೋಡುವವನು ಎಂದರೆ ತಿಳಿದವನು, ಮಹಾನುಭಾವನು ಎಂಬುದೇ ಈ ಸೂತ್ರಾರ್ಥ. ಇಲ್ಲಿ "ಭೂತ" ಶಬ್ದಕ್ಕೆ ಚರಾಚರಾತ್ಮಕವಾದ ಪ್ರಪಂಚವೆಂದರ್ಥ. ಮನುಷ್ಯನು ತನ್ನ ಸುಖಸಂಪಾದನೆಯಲ್ಲಿಯೂ, ದುಃಖನಿವಾರಣೆಯಲ್ಲಿಯೂ ಹೇಗೆ ಆತುರದೊಡನೆಯೂ ಆದರದೊಡನೆಯೂ ಪ್ರಯತ್ನಿಸುತ್ತಾನೆಯೋ, ಹಾಗೆಯೇ ಸಜಾತಿಪ್ರಾಣಿಯಾದ ಮನುಷ್ಯರ ವಿಷಯದಲ್ಲಿಯೂ ವಿಜಾತಿಪ್ರಾಣಿಯಾದ ಪಿಪೀಲಿಕಾದಿ ವಾನರಾಂತವಾದ ಪ್ರಾಣಿಗಳ ವಿಷಯದಲ್ಲಿಯೂ ಮತ್ತು ಸಸ್ಯಾದಿಗಳ ವಿಷಯದಲ್ಲಿಯೂ ಪ್ರಯತ್ನಿಸಬೇಕು, ಎಂದು ತಾತ್ಪರ್ಯಾರ್ಥ. ಈ ಸೂತ್ರವೂ ಕೂಡ ಸಾಮಾನ್ಯಸೂತ್ರವಾದ ಧರ್ಮಸರ್ವಸ್ವದ ಪ್ರಕಾರಾಂತರವಾಗಿರುವುದು.

ಹೀಗಿರುವುದರಿಂದ ಮಹಾಮಹಿಮೆಯುಳ್ಳ ವ್ಯಾಸಮಹರ್ಷಿಪ್ರೋಕ್ತವಾದ ಈ ಧರ್ಮಸೂತ್ರವನ್ನು ಸದಾ ನೆನಪಿಡಬೇಕು; ಅದರಂತೆ ನಡೆದುಕೊಳ್ಳಲು ಯತ್ನಿಸುತ್ತಿರಬೇಕು. ಹಾಗೆ ನಡೆದುಕೊಳ್ಳುತ್ತ ಬಂದರೆ ಭ್ರಮರಕೀಟ ನ್ಯಾಯದಂತೆ ನಮ್ಮ ತ್ರಿಕರಣಗಳ ಪ್ರವೃತ್ತಿಯೂ ಧರ್ಮಾನುಸಾರವಾಗಿಯೇ ಆಗುವುವು; ಸಕಲ ಶ್ರೇಯಸ್ಸೂ ಸಿದ್ಧಿಸುವುದು.

## ೧೬. "ಸುಖಸಾಧನ."

ಲೋಕದಲ್ಲಿ ಸುಖವಾಗಿರುವುದದೇನೆಂದು ತಿಳಿಯುವೆಯಾ? ತಿಳಿದಿದ್ದರೆ, ಅದು ಯಾವ ಉಪಕರಣಗಳಿಂದ ಲಭಿಸುವುದು, ಹೇಳು? ಮಾಡುವುದಕ್ಕೆ ಕೆಲಸವಿಲ್ಲದೆ, ಶ್ರಮಪಡದೆ ಸುಮ್ಮನಿರುವುದು ಸುಖವೆ? "ನ ಸುಖಾಲ್ಲಭ್ಯತೇ ಸ್ಸುಖಂ" ಎಂದರೆ, ಶ್ರಮಪಡದಿದ್ದರೆ ಸುಖವಿಲ್ಲ—ಎಂಬುದರ ತಾತ್ಪರ್ಯವೇನಿರಬಹುದು? ಶ್ರಮಪಡದಹೊರತು ಸುಖೋಪಕರಣಗಳು ಲಭಿಸುವುವೆ? ಶ್ರಮಪಟ್ಟೇ ಸಂಪಾದಿಸಬೇಕಾದ ಸುಖೋಪಕರಣಗಳು ಯಾವುವು? ಅವುಗಳು ಇಷ್ಟೇ ಎಂದು ಎಣಿಸಿ ಹೇಳುವುದಕ್ಕಾದೀತೆ? ಆದರೂ, ಸುಖಸಾಧನಗಳಲ್ಲಿ ಪ್ರಬಲವಾದುವೆಂದು ಗಣಿಸಲ್ಪಡುವ ಕೆಲವನ್ನು ಇಲ್ಲಿ ನಿರೂಪಿಸುವೆನು.

ಆರೋಗ್ಯವು ಸುಖೋಪಕರಣಗಳಲ್ಲಿ ಅತ್ಯಂತಮುಖ್ಯವಾದುದು. ಶರೀರದ ಸ್ವಸ್ಥವಾಗಿರುವ ಸ್ಥಿತಿಯೇ ಆರೋಗ್ಯವೆಂಬುದು. ಇರುವಾಗ ಅದು ಇದೆ ಎಂದು ತಿಳಿದುಬರುವುದಿಲ್ಲ; ಅದು ಕೆಟ್ಟುಹೋದಮೇಲೆಯೇ, ಆರೋಗ್ಯಸ್ಥಿತಿಯೆಂಬುದೂ ಒಂದುಂಟು, ಅದು ನಾಶವಾಯಿತೆಂದು ತಿಳಿದು ಬರುವುದು. ಶರೀರವು ಆರೋಗ್ಯಸ್ಥಿತಿಯಲ್ಲಿರುವ ತನಕ ಯಾವ ಕೊರತೆಯೂ ಇರುವಂತೆ ತೋರಿಬರುವುದಿಲ್ಲ. ನಾವು ಸ್ವಸ್ಥವಾಗಿದ್ದರೆ, ಶಕ್ತಿಯೂ ಉತ್ಸಾಹವೂ ನೆಲೆಗೊಂಡಿರುವುವು; ಅಲ್ಲದೆ, ಯಾವ ಕೆಲಸವನ್ನು ಮಾಡುವುದರಲ್ಲಿಯೂ ಒಂದು ಧೈರ್ಯವಿರುವುದು. ದುಃಖಕ್ಕೆ ಪ್ರಾಯಶಃ ಶರೀರದ ಅನಾರೋಗ್ಯಸ್ಥಿತಿಯೇ ಕಾರಣವಾಗಿರುವುದು. ಶರೀರವು ಸುಸ್ವಸ್ಥವಾಗಿದ್ದರೆ ಮನಸ್ಸೂ ಪ್ರಸನ್ನವಾಗಿರುವುದು; ಮನಸ್ಸು ಸ್ತಿಮಿತವಾಗಿದ್ದರೆ ರಾಗದ್ವೇಷಗಳೂ ಕೋಪತಾಪಗಳೂ ಜಯಪರಾಜಯಗಳೂ ನಮ್ಮನ್ನು ವಿರಸರನ್ನಾಗಿ ಮಾಡಲಾರವು. ಉತ್ಸಾಹಭಂಗವಾದರೂ ಹಿಡಿದ ಕೆಲಸ

ವನ್ನು ಶ್ರಮಪಟ್ಟಾದರೂ ಸಾಧಿಸಬೇಕೆಂಬ ಕುತೂಹಲವು ಹೋಗದು. ಆದುದರಿಂದಲೇ ಆರೋಗ್ಯವೇ ಒಂದು ಅಮೂಲ್ಯವಾದ ಭಾಗ್ಯವೆನ್ನುವರು. ಈ ಭಾಗ್ಯವು ಪೈತೃಕಧನದ ಹಾಗೆ ಸ್ವತಃ ಬರತಕ್ಕುದಲ್ಲ. ಶ್ರಮಪಟ್ಟ ಹೊರತು ಇದು ಸಿಕ್ಕದು. ಯಾವ ಯಾವ ಸ್ಥಿತಿಯಲ್ಲಿದ್ದರೂ ತಾನು ತಾನು ಶ್ರಮಪಡದಿದ್ದರೆ ಈ ಭಾಗ್ಯವು ದೂರವಾಗಿಯೇ ಇರುವುದು. ಇತರ ಸುಖೋಪಕರಣಗಳಾವುವುವಿದ್ದರೂ ಇದೊಂದುಮಾತ್ರವಿಲ್ಲದಿದ್ದರೆ ಸಕಲವೂ ಲುಪ್ತಪ್ರಾಯವಾಗುವುವು. ಹಂಸತೂಲಿಕಾತಲ್ಪದಲ್ಲಿಯೂ ನಿದ್ದೆ ಬಾರದೆ ರಾತ್ರಿಯೆಲ್ಲ ಹೊರಳುತ್ತಿರುವ ರಾಜರು ಬರಿಯ ನೆಲದಮೇಲೆ ಮಲಗಿಕೊಂಡು ಗಾಢನಿದ್ರೆಮಾಡುವ ಬಡ ಒಕ್ಕಲಿಗನನ್ನು ನೋಡಿ ಅಸೂಯೆಪಡುವಂತಾಗುವುದು. ಆದುದರಿಂದ ಆರೋಗ್ಯವೇ ಸುಖವು; ಅನಾರೋಗ್ಯವೇ ದುಃಖವು. ಐಹಿಕಸುಖವೇ ಪರಮಪುರುಷಾರ್ಥವೆಂದು ತಿಳಿವವರಂತೂ ಆರೋಗ್ಯವನ್ನೇ ಸುಖಸಾಧನಗಳಲ್ಲಿ ಪ್ರಬಲವೆಂದು ಹೇಳುವುದು ಸಹಜ. ಮನುಷ್ಯನು ಹುಟ್ಟಿರುವುದು ವ್ರತೋಪವಾಸಾದಿಗಳಿಂದ ಕಾಯಕ್ಲೇಶಮಾಡಿಯಾದರೂ ಮೋಕ್ಷಸಂಪಾದಿಸುವುದಕ್ಕಾಗಿಯೇ ಎಂದು ಹೇಳುವವರೂ ಕೂಡ ಆರೋಗ್ಯಭಾಗ್ಯವನ್ನು ಸರ್ವಾತ್ಮನಾ ಕಳೆದುಕೊಳ್ಳಕೂಡದೆಂದು ಹೇಳುವರು. ಅವರು "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂದು ಹೇಳಿ,—ಆರೋಗ್ಯ ಹೋದರೆ ಯಾವ ಧರ್ಮವನ್ನೂ ಸಾಧಿಸುವುದಕ್ಕಾಗುವುದಿಲ್ಲ; ಪುರುಷಾರ್ಥಗಳು ನಾಶವಾಗುವುವು; ಶರೀರಾರೋಗ್ಯವನ್ನೇ ಮುಂದಿಟ್ಟುಕೊಂಡು ಸಕಲ ಧರ್ಮಗಳನ್ನೂ ಸಂಪಾದಿಸಬೇಕಾಗಿರುವುದು; ಆದುದರಿಂದ ಶರೀರಾರೋಗ್ಯವನ್ನು ನೋಡಿಕೊಳ್ಳುವುದೇ ಪ್ರಥಮಧರ್ಮವೆಂದು ನಿರೂಪಿಸುವರು.

ಐಶ್ವರ್ಯವು ಸುಖೋಪಕರಣಗಳಲ್ಲಿ ಮತ್ತೊಂದಾಗಿರುವುದು. ಐಶ್ವರ್ಯದ ಮಾಹಾತ್ಮ್ಯವನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ.

ದರಿದ್ರನಿಗೂ ಮೃತನಿಗೂ ವಿಶೇಷವಾದ ವ್ಯತ್ಯಾಸವು ಕಾಣಬರುವುದಿಲ್ಲ. ಮನುಷ್ಯನಿಗೆ ಮನುಷ್ಯನು ಎಂದಿಗೂ ಅಡಿಯಾಳಲ್ಲ; ಎಲ್ಲರೂ ಹಣಕ್ಕೆ ಅಡಿಯಾಳಾಗಿರುವರು. ಗೌರವಲಾಘವವು ಸಾಧಾರಣವಾಗಿ ಐಶ್ವರ್ಯನಿಬಂಧನವಾಗಿರುವುದು. ಅಲ್ಲದೆ "ಅರ್ಥೋಹಿ ಲೋಕೇ ಪುರುಷಸ್ಯಬಂಧುಃ" ಎನ್ನುವ ಹಾಗೆ ಧನವಿದ್ದರೆ ಎಲ್ಲರೂ ಬಂಧುಬಳಗವಾಗುವರು; ಧನವಿಲ್ಲದಿದ್ದರೆ ಇದ್ದ ಬಂಧುಗಳೂ ದೂರವಾಗುವರು. ಐಶ್ವರ್ಯವು ಸುಖವನ್ನು ಹೆಚ್ಚಾಗಿ ಒದಗಿಸಿಕೊಡುವುದು. ದ್ರವ್ಯದಿಂದ ಸಕಲವನ್ನೂ ವಶಮಾಡಿಕೊಳ್ಳಬಹುದು. ಧನಿಕನೇ ಲೋಕದಲ್ಲಿ ಬಲವಂತನು. ಪ್ರಭುತ್ವವೂ ಕೂಡ ಧನಮೂಲವಾಗಿರುವುದು. ವಯೋವೃದ್ಧರೂ, ತಪೋವೃದ್ಧರೂ, ಜ್ಞಾನವೃದ್ಧರೂ, ವೀರವೃದ್ಧರೂ, ಧನವೃದ್ಧರ ಬಾಗಿಲಲ್ಲಿ ಕಿಂಕರರಂತೆ ಕಾದಿರುವರು. ಧನಿಕರು ಕೊಂಡಾಡದ ವಿದ್ಯೆಯು ವಿದ್ಯೆಯಾಗುವುದಿಲ್ಲ; ಶೀಲವು ಶೀಲವಾಗುವುದಿಲ್ಲ; ನೈಪುಣ್ಯವು ನೈಪುಣ್ಯವಾಗುವುದಿಲ್ಲ; ಶೌರ್ಯವು ಶೌರ್ಯವಾಗುವುದಿಲ್ಲ: ಕುಲ ವಿದ್ಯೆ ಆಚಾರ ನೈಪುಣ್ಯ ಮೊದಲಾದುವುಗಳು ಚಿನ್ನದ ಒರತೆಯನ್ನು ಹೊಂದಿ ಹೆಚ್ಚಾದ ಪ್ರಕಾಶವನ್ನು ಹೊಂದುವುವು. ಆ ಒರತೆಯನ್ನು ಬಿಟ್ಟಿದ್ದರೆ ಅವುಗಳಿಗೆ ಸಹಜವಾದ ಕಾಂತಿಯು ಮಾಸಿಹೋಗುವುದು. ದರಿದ್ರನ ಹೇತುಪ್ರಮಾಣಯುಕ್ತವಾದ ವಾಕ್ಯವೂ ಕೂಡ ಆದರಿಸಲ್ಪಡುವುದಿಲ್ಲ; ಧನಿಕನ ಅತಿಪರುಷವಾಗಿಯೂ ಅಸತ್ಯವಾಗಿಯೂ ಇರುವ ವಾಕ್ಯವೂ ಕೂಡ ಆದರಿಸಲ್ಪಡುವುದು. ಆದುದರಿಂದ ವಿದ್ಯೆಯೂ ಪ್ರಯೋಜನವಲ್ಲ; ಸೌಜನ್ಯವೂ ಕಾರ್ಯಕಾರಿಯಲ್ಲ; ವಯಸ್ಸು ರೂಪ ಶೌರ್ಯ ಮುಂತಾದುವುಗಳೇನೇನಿದ್ದರೂ ಕೇಳುವವರಿಲ್ಲ. ಸಂಪತ್ತೊಂದು ಮಾತ್ರವಿದ್ದರೆ ಯಾವಯಾವ ಗುಣಗಳಿಲ್ಲದಿದ್ದರೂ ಕಡಮೆಯಿಲ್ಲ. ಏಕೆಂದರೆ—ಧನಿಕರ ಬಾಗಿಲಲ್ಲಿ, ಒಬ್ಬ ಕವಿಯು ಹೇಳುವಂತೆ, ಗುಣಿಗಳು ತೃಣಲವಸದೃಶರಾಗಿ ನಿಲ್ಲುವರು. ಧನದಿಂದ ಉಂಟಾಗುವ ಸೌಕರ್ಯವೂ ಸಾಮರ್ಥ್ಯವೂ ಅಪರಿಮಿತ

ವಾಗಿರುವುವು. ಧನವು ಮನಸ್ಸ್ವಾಸ್ಥ್ಯವನ್ನು ಕೊಡುವುದು; ಧನರಾಹಿತ್ಯವು ಮನಸ್ಸನ್ನು ವ್ಯಾಕುಲತೆಯೆಂಬ ಚಿತಿಯಲ್ಲಿ ಸುಡುವುದು. "ಕೈಕಾಲು ತಪ್ಪಿತ್ತು ಮುದುಕನಾದ ಮೇಲೆ ಹೇಗೆ ಬದುಕುವುದು? ನಾನು ಕಾಲವಾದ ಮೇಲೆ ನನ್ನ ಹೆಂಡಿರುಮಕ್ಕಳ ಗತಿಯೇನಾಗುವುದು?" ಎಂಬ ಚಿಂತೆಯು ದರಿದ್ರನಿಗೆ ಸಹಜವಾಗಿ ಹುಟ್ಟುವುದು. ಆದುದರಿಂದ ಐಶ್ವರ್ಯವು ಮನುಷ್ಯನಿಗೆ ಶಾಂತಿಯನ್ನೂ ಸೌಖ್ಯವನ್ನೂ ಕೊಡುವುದು. ಧನಿಕನಿಗೆ ತಾನೇ ದೊಡ್ಡವನೆಂಬ ಶಕ್ತಿಗ್ರಹವಿರುವುದು; ಆದುದರಿಂದಲೇ ಅವನು ಸುಖಿಯಾಗಿರುವನು. ನಿರ್ಧನನಿಗೆ "ನನ್ನನ್ನು ಯಾರೂ ಲಕ್ಷ್ಯ ಮಾಡುವುದಿಲ್ಲ, ನನಗೇನು ದೊಡ್ಡಸ್ತಿಕೆ ಇರುವುದು," ಎಂಬ ಕೊರತೆಯು ಆಗಾಗ ಹುಟ್ಟುವುದು; ಆದುದರಿಂದ ಅವನು ದುಃಖಿಯೇ ಆಗಿರುವನು. ಹೀಗಿರಲು ಧನವೇ ಎಲ್ಲಾದಕ್ಕಿಂತ ಮೇಲಾದುದೆಂದು ಹೇಳಬೇಕಾದುದಿಲ್ಲ. ಆದರೂ ಧನವೆಂಬುದು ಎರಡು ಕಡೆ ಅಲಗುಳ್ಳ ಕತ್ತಿಯಂತಿರುವುದು. ಅದನ್ನು ಸರಿಯಾಗಿ ವಿನಿಯೋಗಿಸದಿದ್ದರೆ, ಇತರರನ್ನು ಕೊಲ್ಲುವುದಲ್ಲದೆ ತನ್ನನ್ನೂ ಸಹ ಕೊಲ್ಲುವುದು. ಆದುದರಿಂದ ಒಬ್ಬ ಕವಿಯು ಹೀಗೆ ಹೇಳುತ್ತಾನೆ:— "ಧನವು ಈಶ್ವರಾನುಗ್ರಹದಿಂದ ಬಂದ ಒಂದು ಶಕ್ತಿವಿಶೇಷವು. ಅದನ್ನು ಈಶ್ವರನು ನಮ್ಮ ಸುಖಕ್ಕಾಗಿಯೇ ನಮಗೆ ಕೊಡಲಿಲ್ಲ. ಅದು ಯಾರಲ್ಲಿ ಇಲ್ಲವೋ ಅಂಥ ಬಡಜನರ ಉಪಯೋಗಕ್ಕಾಗಿಯೂ ಕೊಟ್ಟಿರುವನು. ಆದುದರಿಂದ ಧನವನ್ನು ಅನುಭವಿಸುವಾಗಲೆಲ್ಲಾ—ನೀನು ನಿನ್ನ ಜತೆಯ ಜನಗಳಿಗೆ ಏನು ಸಹಾಯ ಮಾಡಿದೆ?, ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುತ್ತಿರಬೇಕು." ಈ ಕವಿಯ ಹಿತೋಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ, "ಧನಂ ಮೂಲಮನರ್ಥಾಯ" ಎಂಬ ಮಾತು ನಮ್ಮಲ್ಲಿ ವ್ಯವಹಾರಕ್ಕೆ ಬರುವುದಿಲ್ಲ; ಧನವು ಸುಖಹೇತುವಾಗಿಯೇ ಪರಿಣಮಿಸುವುದು.

ಜ್ಞಾನ ವ್ಯವಸಾಯವು ಸುಖಸಾಧನೆಗಳಲ್ಲಿ ಮತ್ತೊಂದಾಗಿರುವುದು. ಜ್ಞಾನವೇ ಮನುಷ್ಯತ್ವಸಿದ್ಧಿಗೆ ಮುಖ್ಯಕಾರಣವು. ಜ್ಞಾನದಿಂದಲೆಯು

ಲ್ಲವೆ ಪ್ರಾಣಿಗಳನ್ನು ಮೆಟ್ಟಿರುವುದು? ಮನುಷ್ಯರಲ್ಲಿ ತಾರತಮ್ಯವುಂಟಾಗಿರುವುದು ಜ್ಞಾನವ್ಯತ್ಯಾಸದಿಂದಲೇ. ತಾರತಮ್ಯಜ್ಞಾನವೇ ಸುಖದುಃಖಕಾರಣವು. ಜ್ಞಾನವ್ಯವಸಾಯವು ಇತರ ವ್ಯವಸಾಯಗಳಂತೆ, ಫಲಾನುಭವಕಾಲದಲ್ಲಿ ಮಾತ್ರವೆ ಸುಖರೂಪವಾಗಿರದೆ ಸಾಧನಕಾಲದಲ್ಲಿಯೂ ಸುಖರೂಪವಾಗಿರುವುದು. ಇದು ಪಿತ್ತಬಾಧೆಯುಳ್ಳವನು ಸಕ್ಕರೆ ತುಪ್ಪವನ್ನು ಬೆರಸಿದ ಹಾಲನ್ನು ಕುಡಿವಹಾಗಿರುವುದು. ಜ್ಞಾನಜನ್ಯವಾದ ಸಂತೋಷವು ವಿಷಯಜನ್ಯವಾದ ಸುಖಕ್ಕಿಂತ ಪ್ರಬಲವಾಗಿಯೂ ಶುದ್ಧವಾಗಿಯೂ ಸಮೃದ್ಧವಾಗಿಯೂ ಇರುವುದಂತು ತಿಳಿದೇ ಇದೆ. ಜ್ಞಾನವ್ಯವಸಾಯವು ನಮ್ಮ ದಯಾಗುಣವನ್ನು ವಿಸ್ತರಿಸುವುದು, ದುರಭಿಮಾನವನ್ನು ಹೋಗಲಾಡಿಸುವುದು. ಮತ್ತು ಯಾವುದು ಸತ್ಯವಾದುದೋ, ಯಾವುದು ಹಿತವಾದುದೋ, ಯಾವುದು ಶ್ರೇಷ್ಠವಾದುದೋ, ಅದನ್ನು ಅಂಗೀಕರಿಸುವಹಾಗೆ ಮನಸ್ಸನ್ನು ಸಂಸ್ಕರಿಸುವುದು. ಈ ವ್ಯವಸಾಯವು ಗ್ರಂಥಾವಲೋಕನ ಸ್ವಾನುಭವವೆಂದು ಎರಡು ಪ್ರಕಾರವಾಗಿರುವುದು. ಪುಸ್ತಕಪಠನವನ್ನು ಮಾಡಿ ಲೋಕಪರಿಚಯ ಮಾಡುತ್ತ ಬಂದರೆ ಪ್ರಪಂಚದ ಆಶ್ಚರ್ಯವ್ಯಾಪಾರವೂ, ಮಾನುಷಹೃದಯದ ವಿಚಿತ್ರಸೃಷ್ಟಿಯೂ, ಜನಾಂಗವೆಂಬ ಮಹಾಯಂತ್ರದ ಸೌಕರ್ಯವೂ, ಪುರಾತನರ ಬುದ್ಧಿಪ್ರಭಾವಸಮೃದ್ಧಿಯೂ ಗೋಚರವಾಗುವುವು. ಪುಸ್ತಕಗಳು ಪುರಾತನರಿಗೂ ನಮಗೂ ಒಂದು ಸಂಬಂಧವನ್ನು ಕಟ್ಟಿ, ಅವರನ್ನು ಗೌರವಿಸುವಂತೆ ಮಾಡುವುವು. ಸದಾ ಬುದ್ಧಿಗೆ ವ್ಯವಸಾಯವನ್ನು ಕೊಡುತ್ತಿರಬೇಕು. ಹಾಗೆ ಕೊಡದಿದ್ದರೆ ಉಪಯೋಗಿಸದೆ ಕಟ್ಟಿಬಿಟ್ಟ ಕೈಯಂತೆ ಅದು ಬತ್ತಿಹೋಗುವುದು. ವಿಕಾಸವೇ ಸುಖವು; ಸಂಕೋಚವೇ ದುಃಖವಾಗಿರುವುದರಿಂದ ಜ್ಞಾನವ್ಯವಸಾಯವು ಅತಿಶಯಾನಂದಜನಕವಾಗಿರುವುದು. ಜ್ಞಾನವ್ಯವಸಾಯದಲ್ಲಿ ಹೇಳಬೇಕಾದ ಅಂತರ ವಿಷಯಗಳಿಗೆ ೬, ೮, ೧೦, ೧೧ ನೆಯ ಪ್ರಬಂಧಗಳನ್ನು ನೋಡಿ.

ಕಲೆಗಳಲ್ಲಿ ಪ್ರಧಾನವಾದ ಸಂಗೀತ, ನೃತ್ಯ, ನಾಟ್ಯ, ಚಿತ್ರ, ಶಿಲ್ಪ ಮೊದಲಾದುವುಗಳ ವ್ಯವಸಾಯುವು ಜ್ಞಾನವ್ಯವಸಾಯುದಲ್ಲಿಯೇ ಅಂತ ರ್ಭೂತವಾಗಿದ್ದರೂ ಅವುಗಳ ವ್ಯವಸಾಯುವನ್ನು ಸುಖಸಾಧನಗಳಲ್ಲಿ ಬೇರೊಂದಾಗಿ ಎಣಿಸಬೇಕು. ಅವುಗಳಿಗೆ ಇಂದ್ರಿಯು ಸಂಬಂಧವು ಹೆಚ್ಚಾ ಗಿರಬೇಕು. ಆದುದರಿಂದ ಸುಖವು ಜ್ಞಾನವ್ಯವಸಾಯುದಲ್ಲುಂಟಾಗುವುದ ಕ್ಕಿಂತ ಕಡಮೆಯಾಗಿರುವುದು ಅವುಗಳಲ್ಲಿ ನೈಪುಣ್ಯವು, ಗ್ರಂಥಗಳಲ್ಲಿ ಹೇಗೋಹಾಗೆ ಆಧಿವ್ಯಾಧಿಗಳನ್ನು ಮರೆವುದಕ್ಕೆ ಬಹಳವಟ್ಟಿಗೆ ಸಹಾಯ ಮಾಡುವುವು. ಹೀಗಿರುವುದರಿಂದ ಕಲೆಗಳೂ ಪುಸ್ತಕಗಳಹಾಗೆ ಸುಖ ಜನಕವಾಗಿಯೂ ದುಃಖನಿವೃತ್ತಕವಾಗಿಯೂ ಇರುವುವು.

ಪುಸ್ತಕಭಂಡಾರವು ಸಂಗೀತಗಾರನಿಗೆ ವೀಣೆಯಂತೆ ವಿದ್ಯಾವಂತನಿಗೆ ಸುಖಸಾಧನವಾಗಿರುವುದು ಗೊತ್ತೇ ಇದೆ. ಈ ವಿಷಯದಲ್ಲಿ ೭ ನೆಯ ಪ್ರಬಂಧವನ್ನು ನೋಡಿ )

ಸಂಸಾರವೂ ಒಂದು ಮುಖ್ಯವಾದ ಸುಖೋಪಕರಣವಾಗಿರುವುದು. ಈ ಲೋಕದ ಅತ್ಯುತ್ತಮವಾದ ಶುದ್ಧವಾದ ಸುಖವನ್ನು ಅನುಭವಿಸಬೇ ಕೆಂದಿರುವವನು ಸಂಸಾರಿಯಾಗಿಯೇ ಇರಬೇಕು. ಸಂಸಾರವೆಂಬುದು ಒಂದು ಶಿಕ್ಷಾಸ್ಥಾನವಾಗಿರುವುದು. ಅದರಲ್ಲಿ ಕಾಮಕ್ರೋಧಾದಿಗಳು ಮಗ್ಗಿ ಸಲ್ಪಡುವುವು; ಇಂದ್ರಿಯುಗಳ ಸ್ವೇಚ್ಛಾಪ್ರವೃತ್ತಿಯು ತಡೆಯಲ್ಪಡುವುದು. ಅದು ತಾನನುಭವಿಸಬೇಕೆಂದಿದ್ದುದನ್ನು ಕೂಡ ತನಗೆ ಸೇರಿದವರಿಗೆ ಕೊಟ್ಟು ಸಂತೋಷಹೊಂದಿ ಸುಖಿಸುಂಬು ತಿಳಿವಹಾಗೆ ಮಾಡಿಸುವುದು. ದಯೆ, ದಾಕ್ಷಿಣ್ಯ, ಪರೋಪಕಾರ ಮುಂತಾದ ಸದ್ಗುಣಗಳನ್ನು ಕಲಿ ವುದಕ್ಕೆ ಭೂಮಿಯಾಗಿರುವುದು. ಗೃಹಿಯಾಗದೆ ಏಕಾಕಿಯಾಗಿದ್ದರೆ ಮನು ಷ್ಯನಿಗೆ ಕಾಮಕ್ರೋಧಾದಿಗಳ ನಿರೋಧಕ್ಕೂ ಅನುಕಂಪಾದಿ ಸುಗುಣ ಗಳ ಪ್ರವೃತ್ತಿಗೂ ಬಹುಶಃ ಅವಕಾಶವು ಇರುವುದಿಲ್ಲ; ಏತರಲ್ಲಿಯೂ ಅಭಿ

ಮಾನವಿರುವುದಿಲ್ಲ; ಯಾವುದೊಂದು ಉದ್ದೇಶವೂ ಇರುವುದಿಲ್ಲ. ಅಭಿವೃದ್ಧಿಗೆ ಕಾರಣವಿಲ್ಲದೆ ಇದ್ದಹಾಗೆಯೇ ಇರುವನು ಅಥವಾ ಕ್ರಮೇಣ ಕ್ಷಯಿಸಿ ಹೋಗುವುದೂ ಉಂಟು ; ಅಥವಾ ಸ್ವೇಚ್ಛಾವಿಹಾರದಲ್ಲಿ ತೃಪ್ತನಾಗಿ ತನ್ನ ವಿಹಾರಕ್ಕೆ ಪ್ರತಿಬಂಧಕವಾದುವುಗಳನ್ನು ನಾಶಮಾಡುವುದರಲ್ಲಿ ಪ್ರವೃತ್ತಿಸುವನು. ಅಥವಾ ಕೊನೆಗೆ “ ಬಂಟು ಬಡುಕ ಸುಂಟರಗಾಳಿ ” ಎಂಬಂತೆ ಲೋಕಕಂಟಕನಾಗಿಯೂ ಆಗುವನು. ಆದುದರಿಂದ ಸಾಮಾನ್ಯನಾದವನಿಗೆ ಲೋಕೋಪಕಾರಮಾಡಲಿಚ್ಛೆ ಹುಟ್ಟಬೇಕಾದರೆ ಮೊಟ್ಟಮೊದಲು ಕುಟುಂಬಭರಣ ಮೂಲಕವಾಗಿಯೇ ಆ ಬುದ್ಧಿಯನ್ನು ಕಲಿಯಬೇಕು. ಆದರೆ ಅಂಶಪುರುಷರಾದ ಬೌದ್ಧ ಶಂಕರ ರಾಮಾನುಜ ಪ್ರಭೃತಿಗಳಿಗೂ, ಇಂದ್ರಿಯಗಳನ್ನು ಜಯಿಸುವ ಸಾಮರ್ಥ್ಯವನ್ನು ಸಹಜವಾಗಿ ಉಳ್ಳ ಅವರ ಛಾಯಾನುವರ್ತಿಗಳಾದ ಮಹಾತ್ಮರಿಗೂ ಕೂಡ ಹಾಗಲ್ಲ. ಅಂಥವರ ಉದಾರ ವೃತ್ತಿಗೆ ಸಂಸಾರವು ಪ್ರತಿಬಂಧವಾಗುವುದು. ಮೋಕ್ಷಾಪೇಕ್ಷೆಯುಳ್ಳವನಿಗೂ ಕೂಡ ಸಂಸಾರಿಯಾಗಿದ್ದರೆ ಒಳ್ಳೆಯದು. ಇಂದ್ರಿಯಗಳನ್ನು ಜಯಿಸುವುದು ಬಹುಕಷ್ಟ. ದುರ್ವಿಷಯಗಳಲ್ಲಿ ಇಂದ್ರಿಯಗಳು ಹೋಗಿ ಅನರ್ಥಗಳನ್ನುಂಟುಮಾಡದಿರುವುದಕ್ಕೆ ಕುಟುಂಬಭರಣವು ತಕ್ಕ ಸಾಮಗ್ರಿಯು. ಸುಖಾಪೇಕ್ಷೆಯುಳ್ಳ ನಮ್ಮಂಥವರಿಗಂತು ಸಂಸಾರವು ಬಹಳ ಅವಕಾಶವನ್ನು ಕೊಡುತ್ತದೆ. ಸುಶೀಲಳಾದ ಪತ್ನಿಯೂ, ಬುದ್ಧಿವಂತರಾಗಿ ವಿಧೇಯರಾದ ಮಕ್ಕಳೂ, ಹಿತಚಿಂತಕನಾದ ತಂದೆಯೂ, ಪ್ರಿಯ ಜನಕಳಾದ ತಾಯಿಯೂ, ಅನುಕೂಲರಾದ ಅಣ್ಣ ತಮ್ಮಂದಿರೂ ಅಕ್ಕತಂಗಿಯರೂ ನಿರಂತರಸುಖವನ್ನು ಕೊಡುವ ಸ್ಥಾನವಾಗಿರುವರು. ಬಾಲಲೀಲಾನುಭವಮೋದವೂ, ಸಾಧುಸಮಾಗಮಸುಖವೂ, ಅತಿಥಿಸತ್ಕಾರ ತೃಪ್ತಿಯೂ, ಈಶ್ವರಪೂಜಾನಂದವೂ ಕುಟುಂಬದಲ್ಲಿಯಲ್ಲದೆ ಮತ್ತೆಲ್ಲಿಯೂ ದೊರೆಯಲಾರವು. ಇವುಗಳಿಂದುಂಟಾಗುವ ಸುಖವನ್ನು ಅನುಭವಿಸಿಯೇ

ತಿಳಿಯಬೇಕು. ಆದುದರಿಂದ “ಸತತಂ ಧನಿಭ್ಯೋ ಗೃಹಸ್ಥಾಶ್ರಮಃ” ಎಂದು ಒಬ್ಬ ಕವಿಯು ಕೊಂಡಾಡುವನು. ಇಂಥ ಅಮೃತರೂಪವಾದ ಸಂಸಾರವೃಕ್ಷದ ಋಣಸಂಬಂಧದಿಂದ ವಿಷವಾಗಿ ಪರಿಣಮಿಸುವುದು. ಸಾಲವು ಶೂಲವಾಗಿ ನಮ್ಮ ಅಂತರಂಗವನ್ನು ಕೊರೆಯುತ್ತ ಪೀಡಿಸುತ್ತಿರುವುದು. “ಅನೃಣೋ ಹ್ಯಪರಪ್ರೇಷ್ಯಃ ಸ ರಾತ್ರಿಂಚರ ಮೋದತೇ” ಎಂಬಂತೆ ಋಣವಿಲ್ಲದಿರುವುದೇ ಸುಖವು, ಅದೇ ಸುಖೋತ್ತೇಜಕವು. (೬ನೆಯ ಪ್ರಬಂಧವನ್ನು ನೋಡು.)

ಎಲ್ಲರಿಗೂ ಬೇಕಾದವನಾಗಿ, ಎಲ್ಲರ ಆದರಕ್ಕೂ ಪಾತ್ರನಾಗಿರುವುದು ಸುಖೋಪಕರಣಗಳಲ್ಲಿ ಒಂದಾಗಿರುವುದು ಎಲ್ಲರಿಗೂ ಬೇಕಾಗಿದ್ದೇನೆ ಎಂಬುದೇ ಒಂದು ಸುಖವು. ಅಂಥ ಶಕ್ತಿಯು ತನ್ನಲ್ಲಿ ಉಂಟೆಂದು ತಿಳಿವುದು ಆ ಸುಖವನ್ನು ಮತ್ತಷ್ಟು ಹೆಚ್ಚಿಸುವುದು. ಎಲ್ಲರ ಆದರವನ್ನು ಹೊಂದಬೇಕಾದರೆ ನಾಡು ಒಳ್ಳೆಯದಾಗಿರಬೇಕು. ನಾಡು ಒಳ್ಳೆಯದಾಗ ಬೇಕಾದರೆ, ನಾಲಗೆಯು ಒಳ್ಳೆಯ ದಾಗಿ ಬೇಕು. ನಾಲಗೆಯು ಒಳ್ಳೆಯದಾಗಬೇಕಾದರೆ ಅದನ್ನು ನಮ್ಮ ಅಧೀನದಲ್ಲಿ ಇಟ್ಟುಕೊಳ್ಳಬೇಕು. “ನಾಲಗೆಯಿಂದಲೇ ಸಂಪತ್ತು; ನಾಲಗೆಯಿಂದಲೇ ಮೃತ್ಯುವು, ನಾಲಗೆಯಿಂದಲೇ ಸಂತೋಷವು; ನಾಲಗೆಯಿಂದಲೇ ದುಃಖವು” ಎಂದು ಹೇಳಬೇಕಾದುದಿಲ್ಲ. ಆದುದರಿಂದ ನಾಲಗೆಯ ಉಪಯೋಗವನ್ನು ಕಲಿತುಕೊಳ್ಳಬೇಕು. ಅದರ ಸರಿಯಾದ ಉಪಯೋಗವೇ ಸುಖವು, ದುರುಪಯೋಗವೇ ದುಃಖವು. (೯ ನೆಯ ಪ್ರಬಂಧವನ್ನು ನೋಡು.)

ಸನ್ಮಿತ್ರಸಮ್ಮೇಳನದಿಂದ ಉಂಟಾಗುವ ಸುಖಕ್ಕೆ ಎಣೆಯೇ ಇಲ್ಲ. ಐಹಿಕ ಸುಖಗಳನ್ನೆಲ್ಲಾ ಒಂದುಗೂಡಿಸಿ, ಮಥನಮಾಡಿ, ತೆಗೆದ ಸಾರವೇ ಇದೆಂದು ಹೇಳಬಹುದು. ಮಿತ್ರನಿಲ್ಲದವನು ಹೊಟ್ಟೆಲ್ಲದ ಬತ್ತದಂತೆ ಅಭಿವೃದ್ಧಿಯನ್ನು ಹೊಂದುವುದಿಲ್ಲ. ಕ್ರಮೇಣ ಸಕಲ ವಿಷಯಗಳಲ್ಲಿಯೂ

ಕ್ಷಯಿಸಿಹೋಗುವನು. ವೃದ್ಧಿಯೇ ಸುಖವು ; ಕ್ಷಯವೇ ದುಃಖವು ಎನ್ನುವುದು ತಿಳಿದೇ ಇದೆ. ಈ ಸುಖವೂ ಕೂಡ ಸಂಸಾರಸುಖದಲ್ಲೇ ಅಂತರ್ಭಾಗವಾಗಿದ್ದರೂ ಪ್ರಬಲವಾದ ಅಂಗವಾದುದರಿಂದ ಬೇರೊಂದು ಸುಖೋಪಕರಣವಾಗಿ ಗಣಿಸಲ್ಪಡಬೇಕು. (೧೩ ನೆಯ ಪ್ರಬಂಧವನ್ನು ನೋಡು.)

ತುಷ್ಟಿಯು ಇತರ ಸುಖೋಪಕರಣಗಳಿಗೆ ಆಧಾರವಾಗಿರುವುದು. ಇದು ಅಂತರಂಗದ ಹುಣ್ಣನ್ನು ಆರಿಸುವುದು. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ," ಎಂದರೆ—ಸುಖದುಃಖಗಳಿಗೆ ಮನಸ್ಸೇ ಕಾರಣವಾಗಿರುವುದರಿಂದ ಸ್ವರ್ಗವನ್ನು ನರಕವಾಗಿಯೂ ನರಕವನ್ನು ಸ್ವರ್ಗವಾಗಿಯೂ ಮಾಡುವುದು ಮನಸ್ಸೇ. ಇಂಥ ಅದ್ಭುತ ಸಾಮರ್ಥ್ಯವನ್ನು ಮನಸ್ಸು ಪಡೆದುದು ತುಷ್ಟಿಯಿಂದಲೇ. ಆದುದರಿಂದ ತುಷ್ಟಿಯು ಪ್ರಬಲವಾದ ಸುಖಸಾಮಗ್ರಿಯಾಗಿರುವುದು. (೧೪ ನೆಯ ಪ್ರಬಂಧವನ್ನು ಓದು.)

ಕಾಲವೆಂಬುದು ಒಂದು ದೊಡ್ಡ ವಸ್ತು ; ಬಹಳ ಬೆಲೆಯುಳ್ಳದು ; ಅದನ್ನು ಸರಿಯಾದ ಕ್ರಮದಲ್ಲಿ ಕಳೆವುದು ಬಲು ದೊಡ್ಡ ಕೆಲಸ. ಅದರ ಸರಿಯಾದ ಉಪಯೋಗವನ್ನು ತಿಳಿದು ಸಾರ್ಥಕಮಾಡುವವನೇ ಸುಖಿ, ತಿಳಿದುಕೊಳ್ಳದೆ ವ್ಯರ್ಥ ಮಾಡುವವನೇ ದುಃಖಿ. ಕಾಲವಿನಿಯೋಗವನ್ನು ತಿಳಿದು ಅದನ್ನು ಸಾಧಿಸುವವನಂತೂ ಪುರುಷಶ್ರೇಷ್ಠನಾಗಿರುವನು. ಕಾಲವನ್ನು ಯಥಾಯೋಗ್ಯವಾಗಿ ಸಾಧಿಸಲರಿಯದವನು ಜೀವಿಸಿದ್ದರೂ ಸತ್ತ ಕಟವೇ. ಅವನನ್ನು ಸತ್ತ ಕೂಟವೆಂದು ಹೇಳುವುದೂ ಸರಿಯಲ್ಲ. ಹೆಣಕ್ಕಿಂತಲೂ ನಿಕೃಷ್ಟನೆಂದು ಹೇಳಬೇಕು. ಹೆಣದ ಬಾಧೆಯು ಅನುಬಂಧಿಗಳಿಗೆ ಕೂಡಲೇ ನಿವೃತ್ತವಾಗುವುದು ; ಇವನ ಬಾಧೆಯಾದರೋ ನಿರಂತರವೂ ಹೆಚ್ಚುತ್ತಿರುವುದು. "ಸೋಮಾರಿಯು ನೋಣದಹಾಗಿರುವ" ನೆಂದು

ಒಬ್ಬ ಕವಿಯು ಹೇಳುವನು. ಈ ವಾಕ್ಯದಲ್ಲಿ ಬಹುತಾತ್ಪರ್ಯವುಂಟು. ನೊಣವು ಪಾಯಿಸದಮೇಲೆ ಹಾರಾಡುತ್ತಿದ್ದು ಅದರಲ್ಲಿ ಬಿದ್ದು ತಾನು ಸಾಯುವುದೂ ಅಲ್ಲದೆ ಆ ಪಾಯಿಸವನ್ನು ಕುಡಿದವನಿಗೆ ವಮನವನ್ನೂ ಮಾಡಿಸುವುದು. ಹಾಗೆಯೇ ಸೋಮಾರಿಯು ಸೋಮಾರಿತನದಲ್ಲಿಯೇ ಕಾಲಕಳೆಯುತ್ತಿದ್ದು, ಕೊನೆಗೆ ತನ್ನ ಬದುಕಿನಲ್ಲಿಯೇ ತನಗೆ ಜಿಗುಪ್ಸೆ ಹುಟ್ಟಿ "ತಾನೇಕೆ ಬದುಕಿರಬೇಕು ! ಸತ್ತರೂವಾಸಿ" ಎಂದು ತಿಳಿವುದೂ ಅಲ್ಲದೆ ತನಗೆ ಸೇರಿದವರೂ ತನ್ನಂತೆ ಅಭಿಪ್ರಾಯಪಡುವಹಾಗೆ ಮಾಡುವನು. ಇಂಥ ಸೋಮಾರಿಗಳನ್ನು ನೋಡಿಯಲ್ಲವೆ "ಹಸ್ತಪಾದಾದಿ ಸಂಯುಕ್ತಾಯೂಯಂ ಕಿಮು ಸೀದಥ" (ಕೈಕಾಲುಗಳನ್ನು ಹೊಂದಿಯೂ ಏಕೆ ಹೀಗೆ ಸಾಯುತ್ತಿರುವಿರಿ ?) ಎಂದು ಶಾರಿಕಾದಿಗಳೂ ಕೂಡ ಜರಿವುವು. ದೀರ್ಘಕಾಲವು ಅಲ್ಪಕಾಲದಂತೆಯೂ ಅಲ್ಪಕಾಲವು ದೀರ್ಘಕಾಲದಂತೆಯೂ ಕಾಣಬರುವುದು ಸುಖದುಃಖಗಳಿಗೆ ಕಾರಣವು. ಆದುದರಿಂದ ಕಾಲದ ಬೆಲೆಯನ್ನು ತಿಳಿದು ಅವಸ್ಥಾಭೇದಗಳಿಗೆ ಅನುಗುಣವಾಗಿ ಕಾಲಕ್ಕೆ (೫, ೧೧ ಪ್ರಬಂಧಗಳಲ್ಲಿ ತಿಳಿಸಿದಮೇರೆ) ವಿನಿಯೋಗಮಾಡುತ್ತ ಬಂದರೆ ದೀರ್ಘಕಾಲವು ಅಲ್ಪಕಾಲವಾಗಿ ಕಂಡುಬಂದು ಅದರ ವಿನಿಯೋಗವು ಸುಖಹೇತುವಾಗುವುದು. ಹಾಗೆ ವಿನಿಯೋಗಿಸದೆ ಕಾಲವು ವ್ಯರ್ಥವಾಗುವುದಾದರೆ ಅದೇ ದೀರ್ಘವಾಗಿ ಕಂಡುಬಂದು ದುಃಖಕಾರಣವಾಗಿ ಪರಿಣಮಿಸುವುದು. ಹೀಗಿರುವುದರಿಂದ ಕಾಲಯಾಪನವು ಸುಖಸಾಧನಗಳಲ್ಲಿ ಒಂದೆಂಬುದು ಸಿದ್ಧ.

ಧರ್ಮಾನುಷ್ಠಾನವು ಪ್ರಬಲಸುಖಸಾಧನವು. ಸ್ವಾಮಿಯು ಭೃತ್ಯನಿಗೂ ಯಂತ್ರ ನಡೆಸುವವನು ಯಂತ್ರಕ್ಕೂ ಹೇಗೋ, ಹಾಗೆಯೇ ಧರ್ಮಬುದ್ಧಿಯು ಮನುಷ್ಯನಿಗೆ ಸತ್ಪ್ರವೃತ್ತಿಯನ್ನು ಕೊಡುವುದಲ್ಲದೆ ದುಷ್ಪ್ರವೃತ್ತಿಗೆ ಬೀಳದಂತೆ ನೋಡಿಕೊಳ್ಳುವುದು. ಆದುದರಿಂದ ಧಾರ್ಮಿಕತ್ವವು

ಮನುಷ್ಯನ ಶ್ರೇಷ್ಠತೆಗೆ ಆವಶ್ಯಕವಾದ ಗುಣವೆಂದು ಎಲ್ಲರೂ ತಿಳಿವರು. ಮನುಷ್ಯನು ಬುದ್ಧಿವಂತನಾಗಿರಬಹುದು ; ಬಲಿಷ್ಠನಾಗಿರಬಹುದು ; ಯಶಸ್ವಿಯಾಗಿರಬಹುದು. ಆದರೂ ಅವನಲ್ಲಿ ಧಾರ್ಮಿಕತ್ವವೊಂದಿಲ್ಲದಿದ್ದರೆ ತುಚ್ಛನಾಗಿಯೇ ಇರುವನು. ಅವನು ತನ್ನ ಸಾಮರ್ಥ್ಯದ ತುದಿಯನ್ನು ಮುಟ್ಟಿದವನಾಗಿದ್ದರೂ ಅದೆಲ್ಲವೂ ದೌಷ್ಟ್ಯದ ರೂಪಾಂತರವಾಗಿಯೇ ಪರಿಣಮಿಸುವುದು. ಬಲಿಷ್ಠನು ಬಲಿಷ್ಠನಾಗುವುದೂ ಕವಿಯು ಕವಿಯಾಗುವುದೂ ಒಂದತಿಶಯವಾದ ಕೆಲಸವಲ್ಲ. ಅದು ಅವರಿಗೆ ಸಹಜ. ಅದಕ್ಕೆ ಅವರು ಕಷ್ಟಪಡಬೇಕಾಗಿಲ್ಲ. ಇತರರು ಅವರಂತೆ ಆಗುವುದಕ್ಕೆ ಕಷ್ಟಪಟ್ಟರೂ ಅದು ಆಗುವುದಿಲ್ಲ. ಅವರಿಗೆ ಅದು ಅಲ್ಪಶ್ರಮದಿಂದಲೇ ಸಿದ್ಧಿಸುವುದು. ದುಂಬಿಗೆ ರೆಕ್ಕೆ ಇದೆ, ಅದು ಹಾರಾಡುತ್ತದೆ. ಅದು ಅದಕ್ಕೆ ಅತಿಶಯವಲ್ಲ. ಧಾರ್ಮಿಕತ್ವದ ರೀತಿಯು ಬೇರೆ. ಅದು ಸಹಜವಾದುದಲ್ಲ. ಅದು ಅಭಿವೃದ್ಧಿಗೆ ಬರಬೇಕಾದರೆ ವಿಶೇಷ ವ್ಯವಸಾಯವು ಬೇಕು. ಮನಸ್ಸು ವಾಯುವಿನಹಾಗೆ ಚಂಚಲವಾಗಿಯೂ ತಡೆವುದಕ್ಕೆ ದುಷ್ಕರವಾಗಿಯೂ ಇರುವುದು. ಕೃತ್ಯಗಳು ಮನಃಪ್ರವೃತ್ತಿಗಧೀನವಾಗಿರುವುವು ಆದುದರಿಂದ ಧಾರ್ಮಿಕತ್ವಸ್ಥಿತಿಯು ಸುಲಭವಾದ ಕೆಲಸವಲ್ಲ. ಧರ್ಮವ್ಯವಸಾಯದಲ್ಲಿ ಎಷ್ಟೆಷ್ಟು ಅಂತಸ್ತುಗಳನ್ನು ಏರುವನೋ ಅಷ್ಟಷ್ಟು ಹೆಚ್ಚಾಗಿ ಶ್ರಮಪಟ್ಟೇ ಇರುವನು. ಇಂದ್ರಿಯಗಳ ಸ್ವೇಚ್ಛಾಪ್ರವೃತ್ತಿಯನ್ನು ತಡೆದು ಸರಿಯಾದ ಮಾರ್ಗದಲ್ಲಿ ಬಿಡುವುದೀಗ ಅತಿಶಯವಾದ ಮಹಿಮಾಧಾಯಕವಾದ ಸಂಪಾದನೆಯು. ನಾರದಮಹರ್ಷಿಯು ಇಂದ್ರಪ್ರಸ್ಥದಲ್ಲಿ ರಾಜ್ಯವಾಳಲುಪಕ್ರಮಿಸಿದ ಧರ್ಮರಾಜನನ್ನು ಕುರಿತು—" ನೀನು ರಾಜನಾದೆ, ಇತರರನ್ನು ಆಳುವವನಾಗಿದ್ದೀಯೆ ; ನಿನ್ನ ಇಂದ್ರಿಯಗಳನ್ನು ನಿನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದೀಯೋ ? " ಎಂದು ಕೇಳಿದನು. ಆದುದರಿಂದ ಒಬ್ಬನು ಹೀಗೆ ಹೇಳುತ್ತಾನೆ:

"ಮನುಷ್ಯನಿಗೆ ಧನವೂ ಅವಶ್ಯಕವಲ್ಲ; ಪದವಿಯೂ ಅವಶ್ಯಕವಲ್ಲ; ಬುದ್ಧಿಯೂ ಅವಶ್ಯಕವಲ್ಲ; ಆರೋಗ್ಯವೂಕೂಡ ಅವಶ್ಯಕವಾಗಿ ಬೇಕಾದುದೊಂದಲ್ಲ; ಧರ್ಮಬುದ್ಧಿ—ಎಂದರೆ ಚೆನ್ನಾಗಿ ವ್ಯವಸಾಯವಮಾಡಿ ಸ್ವೇಚ್ಛೆಯಾಗಿ ಬಿಟ್ಟರೂ ಸನ್ಮಾರ್ಗದಲ್ಲಿಯೇ ಪ್ರವರ್ತಿಸುವ ಅಭಿನಿವೇಶವೊಂದೇ ಬೇಕು. ಅದೇ ಮನುಷ್ಯನನ್ನು ಕಾಪಾಡುವುದು. ಅಂಥ ಅಭಿನಿವೇಶವಿಲ್ಲದಿದ್ದರೆ ನಾವು ಭ್ರಷ್ಟರಾಗಿ ಹೋಗುವುದು ನಿಜ." ಅಂಥ ಧರ್ಮಬುದ್ಧಿಯಿಲ್ಲದಿದ್ದರೆ ನಾವು ಖಂಡಿತವಾಗಿ ನಿಹೀನರಾಗಿ ಹೋಗುವೆವು. ಆ ಅಭಿನಿವೇಶವೆಂಬ ಸಸ್ಯಕ್ಕೆ ಗೊಬ್ಬರ ಹಾಕಿ ಆಗತೆಮಾಡದೆ ಬಿಟ್ಟರೆ ಅದು ಬತ್ತಿ ಹೋಗುತ್ತ ಬರುವುದೇ ಹೊರತು ಸೊಂಪಾಗಿ ಬೆಳೆದು ವೃಕ್ಷವಾಗುವುದಿಲ್ಲ. ಆದುದರಿಂದ ಧರ್ಮವ್ಯವಸಾಯವು ಅವಶ್ಯಕವಾಗಿ ಬೇಕು. ಧರ್ಮಾನುಷ್ಠಾನವು ಸುಖಹೇತುವೆಂದು ಹೇಳತಕ್ಕುದೇನಿದೆ? ಪ್ರತಿ ಮನುಷ್ಯನಿಗೂ ಧರ್ಮದಲ್ಲಿ ಆಸಕ್ತಿಯೂ ಅಧರ್ಮದಲ್ಲಿ ದ್ವೇಷವೂ ಸಹಜವಾಗಿದೆ. ಇದ್ದ ಸೌಕರ್ಯಗಳು ಹೋಗಿ ಕಷ್ಟಪ್ರಾಪ್ತಿಯುಂಟಾಗುವಹಾಗಿದ್ದರೂ ಧರ್ಮಮಾರ್ಗವನ್ನೇ ಅವಲಂಬಿಸಿದುದೇಆದರೆ ಒಂದು ದೊಡ್ಡ ಜಯವನ್ನು ಹೊಂದಿದೆವೆಂಬ ಜ್ಞಾನವು ಹುಟ್ಟುವುದು. ಅದರಿಂದ ತನ್ನಲ್ಲಿ ತನಗೆ ಗೌರವಜ್ಞಾನ ಹೆಚ್ಚುವುದು, ಸುಖವು ವಿಶಾರುವುದು. ಅಧರ್ಮಮಾರ್ಗದಲ್ಲಿ ಪ್ರವರ್ತಿಸಿದರೆ, ಕಾಲಾನುಕಾಲದಲ್ಲಿಯಾದರೂ "ಅಧರ್ಮಕ್ಕೆ ಬಳಗಾದೆವಲ್ಲಾ? ಕಾಮಕ್ರೋಧಾದಿಗಳನ್ನು ಜಯಿಸದೆ ಅವುಗಳಿಂದ ಪರಾಜಿತರಾದೆವಲ್ಲಾ?" ಎಂಬ ಕೊರತೆಯು ಹುಟ್ಟುವುದು; ಅದರಿಂದ ತನ್ನಲ್ಲಿ ಅಗೌರವವು ಹುಟ್ಟುವುದು, ದುಃಖವು ಹೆಚ್ಚುವುದು. ತಾನು ಸುಖಪಡುವುದಕ್ಕಿಂತ ಇತರರು ಸುಖಪಡುವುದನ್ನು ನೋಡುವುದು ಮೇಲು. ತಾನು ದುಃಖಿಸುವುದಕ್ಕಿಂತ ಇತರರು ತನ್ನಿಂದ ದುಃಖಪಡುವುದನ್ನು ನೋಡುವುದು ಹೆಚ್ಚಾದ ದುಃಖವು. ಸುಖಪಡುವುದಕ್ಕಿಂತ ಸುಖಪಡುತ್ತೇನೆಂಬ

ಸ್ಥಿತಿಯು ಹೆಚ್ಚಾದ ಸುಖವನ್ನು ಕೊಡುವುದು. ಧರ್ಮಪ್ರವೃತ್ತಿಯು ಮುಂದೆ ಶ್ರೇಯಸ್ಸುಂಟಾಗುತ್ತದೆಯೆಂಬ ಸ್ಥಿತಿಯೇ ಆಗಿರುವುದರಿಂದ ಮುಂದೆ ಲಭಿಸುವ ಶ್ರೇಯಸ್ಸಿಗಿಂತ ಹೆಚ್ಚಾದ ಸುಖವನ್ನು ಕೊಡುವುದು. ಆದುದರಿಂದ, ಸನ್ಮಾರ್ಗಪ್ರವರ್ತಕನಾಗಿರುವ ಸ್ಥಿತಿಯೇ ಇರಲಿ; ಸ್ವರ್ಗಾದಿ ಸ್ಥಿತಿಯು ಬೇಡವೆಂದು ಧರ್ಮವೃದ್ಧರು ಹಾರೈಸುವರು. ದುರ್ಮಾರ್ಗಿಯ ಸ್ಥಿತಿಯು ನರಕವಾಸಕ್ಕಿಂತ ಹೆಚ್ಚಾದ ದುಃಖವನ್ನು ಕೊಡುವುದು. ಆದುದರಿಂದ ದುರ್ಮಾರ್ಗಿಯು ಮರಣವೆಂದರೆ ತಲ್ಲಣಿಸಿಹೋಗುವನು. ಮರಣವು ಅವನಿಗೆ ನರಕದ ಬಾಗಿಲನ್ನು ತೋರಿಸುವುದು. ಅದೇ ದುಃಖದ ಪರಾಕಾಷ್ಠೆಯು. ಸನ್ಮಾರ್ಗಿಗೆ ಮರಣವು ಸುಖದ ಬಾಗಿಲನ್ನು ತೋರಿಸುವುದು. ಆ ಸ್ಥಿತಿಯೇ ಸುಖದ ಪರಾಕಾಷ್ಠೆಯು. ಆದುದರಿಂದ ಸನ್ಮಾರ್ಗಿಯು "ಕೃತಕೃತ್ಯಾಃ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಂ" ಎನ್ನುವ ಹಾಗೆ ಮರಣವನ್ನು ಪ್ರಿಯನಾದ ಅತಿಥಿಯಂತೆ ಭಾವಿಸಿ ಅದರ ಆಗಮನವನ್ನು ಸಂತೋಷದೊಡನೆ ನಿರೀಕ್ಷಿಸುತ್ತಿರುವನು. ಹೀಗಿರುವುದರಿಂದ ಮನುಷ್ಯನು ಧರ್ಮಾನುಷ್ಠಾನಪರನಾಗಬೇಕು. ಅಲ್ಲದಿದ್ದರೆ ಮರಣಕ್ಕೆ ಸದಾ ಅಂಜುತ್ತಿರುವನು. ಸರ್ವಸಹಜವಾದ ಮರಣಭೀತಿಯನ್ನು ಕೂಡ ಮಿತ್ರಸಮಾಗಮವೋದದಂತೆ ಮಾಡುವುದು ಧರ್ಮಾನುಷ್ಠಾನವೇ. ಏವಂಚ, ಧರ್ಮಾನುಷ್ಠಾನವು ಸಾಧನಾನುಭವೋಭಯವೇಳೆಗಳಲ್ಲಿಯೂ ಪ್ರಬಲ ಸುಖಸಾಧನವು. (ಧರ್ಮಾನುಷ್ಠಾನದಲ್ಲಿ ಪ್ರಬಲವಾದುದು ತ್ರಿಕರಣಶುದ್ಧಿಯೆಂಬುದು. ಅದೇ ಪ್ರಾಮಾಣಿಕತೆಯೆಂಬುದು. ಆ ವಿಷಯವನ್ನು ೩ ನೆಯ ಪ್ರಬಂಧದಲ್ಲಿ ಹೇಳಿರುವೆನು. ತ್ರಿಕರಣಗಳ ದುಷ್ಪ್ರವೃತ್ತಿರೂಪವಾದ ದುಷ್ಕೃತ್ಯತ್ರಯಗಳ ನಿರೋಧಪ್ರಕಾರವನ್ನು ೪ ನೆಯ ಪ್ರಬಂಧದಲ್ಲಿ ಹೇಳಿರುವೆನು. ಧರ್ಮಾನುಷ್ಠಾನದಲ್ಲಿ ಪ್ರವೃತ್ತಿಮಾರ್ಗವು ಅವಶ್ಯವಾಗಿ ತಿಳಿಯಬೇಕಾದುದರಿಂದ ಧರ್ಮಸೂತ್ರಗಳಿಗೆಲ್ಲಾ ಸಾರಭೂತವಾದ ಧರ್ಮಸರ್ವಸ್ವವನ್ನು ೧೨ ನೆಯ ಪ್ರಬಂಧದಲ್ಲಿ ತಿಳಿಸಿರುವೆನು.)

ಈಶ್ವರಭಕ್ತಿಗೆ ಮೇಲಾದ ಸೌಖ್ಯವೇ ಇಲ್ಲ. ಈಶ್ವರಭಕ್ತಿಯೊಂದನ್ನೇ ಸೌಖ್ಯವೆನ್ನಬೇಕು; ಉಳಿದುವುಗಳನ್ನು ಸೌಖ್ಯವೆನ್ನುವುದಕ್ಕಾಗುವುದಿಲ್ಲ. ಭಕ್ತಿಸುಖವನ್ನನುಭವಿಸುತ್ತಿರುವಾಗ, ಇತರಸುಖಗಳೆಲ್ಲವೂ ಹೇಯವಾಗಿಯೂ ದುಃಖವಾಗಿಯೂ ಕಾಣಬರುವುವು. ಈಶ್ವರಭಕ್ತಿಯುಳ್ಳವನಿಗೆ ಬಂಧುವಿಯೋಗ ಚಿತ್ರವಧೆ ಮೊದಲಾದ ಎಂಥ ಕಷ್ಟಗಳೂ ಸಹ್ಯವಾಗುವುವು; ಸ್ವರ್ಗಾದಿಸುಖಗಳೂ ಕೂಡ ತುಚ್ಛವಾಗಿ ಕಾಣುವುವು. ಆದುದರಿಂದ ಭಕ್ತಾಗ್ರಗಣ್ಯರಾದ ಕುಲಶೇಖರಾಳ್ವಾರೆಂಬವರು,

"ದಿವಿ ವಾ ಭುವಿ ವಾ ಮಮಾಸ್ತು ವಾಸೋ ನರಕೇ ವಾ ನರಕಾಂತಕ ಪ್ರಕಾಮಮ್ | ಅವಧೀರಿತಶಾರದಾರವಿಂದೌ ಚರಣೌ ತೇ ಮರಣೇಪಿ ಚಿಂತಯಾಮಿ ||"

[ಟೀಕೆ—ನರಕಾಂತಕನಾದ ಸ್ವಾಮಿಯೇ, ಸುಖಸ್ಥಾನವಾದ ಸ್ವರ್ಗದಲ್ಲಿಯೇ ಆಗಲಿ, ದುಃಖಸ್ಥಾನವಾದ ನರಕದಲ್ಲಿಯೇ ಆಗಲಿ, ಸುಖ ದುಃಖ ಮಿಶ್ರವಾದ ಭೂಲೋಕದಲ್ಲಿಯೇ ಆಗಲಿ, ನನಗೆ ವಾಸವನ್ನು ಕಲ್ಪಿಸು, ಕೊರತೆಯಿಲ್ಲ; ಶರದಂಬುಜವನ್ನು ಸ್ವಭೋಗ್ಯತೆಯಿಂದ ಅಲೆಗಳೆವ ನಿನ್ನ ಪಾದಾರವಿಂದ ಸ್ಮರಣವೊಂದು ಮಾತ್ರ ಅಂತಿಮ ಕಾಲದಲ್ಲಿಯಾದರೂ ಉಂಟಾದರೆ ಸಾಕು.]

ಎಂದು ಹೇಳಿರುವರು. ಇವರಂತೆಯೇ ಮತ್ತೊಬ್ಬ ಭಕ್ತಾಗ್ರಗಣ್ಯರು, "ನಿನ್ನನ್ನು ನೋಡಿದ ಕಣ್ಣುಗಳು ಮತ್ತೊಂದನ್ನೂ ನೋಡಲಾರವು" ಎಂದು ಹೇಳಿರುತ್ತಾರೆ. ಈಶ್ವರನಲ್ಲಿ ದೃಢಭಕ್ತಿಯುಳ್ಳವರನೇಕರು ವಿರೋಧಿಗಳ ಮಧ್ಯದಲ್ಲಿ ಹಿಂಸಾದಿಗಳನ್ನು ಅನುಭವಿಸಿ, ಅವರ ಹೃದಯ ಶಿಲಾಭಿತ್ತಿಯಲ್ಲಿ "ಈಶ್ವರಭಕ್ತಿಗೆ ಮೇಲಾದುದಾವುದೂ ಇಲ್ಲ" ವೆಂಬ ಅಕ್ಷರಗಳನ್ನು ಕೆತ್ತಿರುವರೆಂದು ಚರಿತ್ರೆಗಳು ಉದ್ಘೋಷಿಸುತ್ತವೆ. ಪ್ರಪಂಚವನ್ನೆಲ್ಲಾ ತಮ್ಮ ಪ್ರತಾಪದಿಂದ ಬೆಳಗಿದ ಚಕ್ರವರ್ತಿಗಳ ಹೆಸರನ್ನು ಒಂದುಸಲವಾದರೂ ಸ್ಮರಿಸದೆ ಇರುವವರೂ ಕೂಡ ಸಾಮಾನ್ಯರಂತೆಯೇ ಹುಟ್ಟಿ ಬಳೆದು ಈಶ್ವರಭಕ್ತಿಯ ಮಹಿಮೆಯನ್ನು ಲೋಕದಲ್ಲಿ

ಮೆರೆಯಿಸಿದ ಮಹಾತ್ಮರ ಹೆಸರನ್ನು ಸದಾ ಸ್ಮರಿಸುತ್ತಿರುವರೂ ಅಲ್ಲದೆ ಅವರ ಪಾದಸೇವೆಯನ್ನು ಅದೇ ಉಜ್ಜೀವನಹೇತುವೆಂದು ನಂಬಿ ಮಾಡುತ್ತಿರುವರು. ಇದರಿಂದ ಪುರುಷಾರ್ಥಗಳಲ್ಲಿ ಆಶೆಪಡತಕ್ಕುದು ಭಕ್ತಿಯೊಂದೇ ಎಂಬುದು ಸಿದ್ಧವಾಯಿತು. ಈಶ್ವರಭಕ್ತಿಯೆಂಬುದೇ ಒಂದು ತೇಜಸ್ಸು; ಆ ತೇಜಸ್ಸಿನಿಂದ ಅಜ್ಞಾನಾಂಧಕಾರವು ತೊಲಗಿಹೋಗುವುದು. ಅಜ್ಞಾನಾಂಧಕಾರವು ನಿವೃತ್ತವಾದರೆ ಪ್ರವೃತ್ತಿಯೆಲ್ಲವೂ ಧರ್ಮಾವಿರುದ್ಧವಾಗಿಯೇ ಆಗುವುದು. ಈಶ್ವರಭಕ್ತಿಯೇ ಒಂದಮೃತವು; ಆ ಅಮೃತದಿಂದ ಪ್ರಸೂತಿಮರಣವ್ಯಾಧಿಗಳು ನಿವೃತ್ತವಾಗುವುವು. ಹೇಗೆ ತೇಜಸ್ಸು ಸರ್ವತ್ರ ಏಕರೀತಿಯಾಗಿರುವುದೋ ಹಾಗೆಯೇ ಭಕ್ತಿಯೆಂಬ ಅಂತರ್ಜ್ಯೋತಿಯನ್ನುಳ್ಳವರ ನಡೆನಡಿಗಳು ಏಕರೀತಿಯಾಗಿರುವುವೆಂಬುದಕ್ಕೆ ಭಕ್ತರ ಚರಿತ್ರೆಗಳೇ ಸಾಕ್ಷಿಗಳಾಗಿರುವುವು. ಸುಖದುಃಖವನ್ನು ಅನುಭವಿಸುವುದು ಶರೀರವೂ ಅಲ್ಲ, ಇಂದ್ರಿಯಗಳೂ ಅಲ್ಲ ಆತ್ಮನೇ. ಇಂದ್ರಿಯಾದಿಗಳು ನಿಮಿತ್ತಗಳು. ನಿಮಿತ್ತವು ಉತ್ತಮವಾದ ಹಾಗೆಲ್ಲಾ ಸುಖವು ಉತ್ತಮವಾಗಿರುವುದು. ಆದುದರಿಂದ ಕರ್ಮೇಂದ್ರಿಯದ್ವಾರಾ ಉಂಟಾಗುವ ಸುಖಕ್ಕಿಂತ ಜ್ಞಾನೇಂದ್ರಿಯದ್ವಾರಾ ಉಂಟಾಗುವ ಸುಖವು ಹೆಚ್ಚು. ಅದಕ್ಕಿಂತ ಮಾನಸವೆಂಬ ಅಂತರಿಂದ್ರಿಯದ್ವಾರಾ ಉಂಟಾಗುವ ಸುಖವು ಇನ್ನೂ ಹೆಚ್ಚು. ಇವುಗಳೇ ಪ್ರಾಪಂಚಿಕಸುಖವೆನ್ನುವುವು. ಇವುಗಳಿಗೂ ಮೇಲೆ ಆತ್ಮನು ಇಂದ್ರಿಯಸಂಬಂಧವಿಲ್ಲದೆ ತನ್ನಲ್ಲಿ ತಾನೇ ಅನುಭವಿಸುವುದೊಂದು ಸುಖವುಂಟು. ಅದೇ ಆತ್ಮಾರಾಮವೆನ್ನುವ ಶ್ರೇಷ್ಠವಾದ ಸುಖವು. ಇವೆಲ್ಲಕ್ಕಿಂತಲೂ ಮೇಲೆ, ಆತ್ಮನು ತನಗೆ ಸತ್ತಾಧಾಯಕನಾದ ಸರ್ವೇಶ್ವರನನ್ನು ಸೇರಿ ಆನಂದಪಡುವುದೆಂಬುದೊಂದುಂಟು. ಅದೇ ಭಕ್ತಿಯೆನ್ನುವುದು. ಭಕ್ತಿಭಾವದಿಂದ ಭಗವಂತನನ್ನು ಕಟ್ಟಿ ಆಸ್ವಾದಿಸುವುದೇ ಭಕ್ತಿರಸವೆನ್ನುವುದು. ಇದಕ್ಕೆ ಮೇಲಾದ ಸುಖವೇ

ಇಲ್ಲ. ಪ್ರಪಂಚದಲ್ಲಿ ಭಕ್ತಿರಸವೊಂದೇ ಪಾನಮಾಡಿದವರನ್ನು ಪರವಶರನ್ನಾಗಿಸಿ, "ಧ್ಯಾನಾಮೃತಾಸ್ವಾದಿನಾಮಸ್ಮಾಕಂ ಸಂಸ್ಫುರದ್ಭಾಕ್ಷ ಸತತಂ ಸಂಪದ್ಯತಾಂ ಜೀವಿತಂ" ಎನ್ನುವಂತೆ ಆ ಸ್ಥಿತಿಯನ್ನೇ ಅಪೇಕ್ಷಿಸುವಂತೆ ಮಾಡುತ್ತಿರುವುದು. ಸ್ವರ್ಗದಲ್ಲಿರುವ ಅಮೃತದಂತಲ್ಲ ಈ ಅಮೃತಪಾನವು. ಆ ಅಮೃತದಲ್ಲಿ ತೃಪ್ತಿಯುಂಟು; ಈ ಅಮೃತದಲ್ಲಿಯಾದರೋ ತೃಪ್ತಿಯೇ ಇಲ್ಲ. ಈ ಅಮೃತವನ್ನು ಪಾನಮಾಡುತ ಮಾಡುತ, ಇನ್ನೂ ಪಾನಮಾಡಬೇಕು, ಪಾನಮಾಡಬೇಕು ಎಂಬ ಆಶೆಯೇ ಹೆಚ್ಚುತ್ತಿರುವುದು. ಆದ್ದರಿಂದ ಭಕ್ತಾಗ್ರಗಣ್ಯರೊಬ್ಬರು ಭಗವಂತನನ್ನು "ಆರಾಮಮುದೇ—" ಎಂದರೆ ಆರಿಹೋಗದೆ ಹೊಸಹೊಸದಾಗಿಯೇ ಕಾಣಬರುವ ಅಮೃತವೇ ಎಂದು ವರ್ಣಿಸಿರುವರು. ಆತ್ಮನಿಗೂ ಈಶ್ವರನಿಗೂ ಇರುವ ಸಂಬಂಧವು ನಿತ್ಯವು, ಸಹಜವು. ಆತ್ಮನು ಈಶ್ವರನನ್ನು ಬಿಟ್ಟಿರಲಾರನು. ಆದುದರಿಂದ ಆತ್ಮನೆಂಬ ಮೀನು ಈಶ್ವರನೆಂಬ ಹ್ರದವನ್ನು ಸೇರಿ, ಭಕ್ತಿರಸವೆಂಬ ನೀರಿನಲ್ಲಿ ಓಲಾಡುತ್ತಿರದಿದ್ದರೆ, ಅದಕ್ಕೆ ಸತ್ತ್ವವೂ, ಸ್ವಾಸ್ಥ್ಯವೂ, ಆನಂದವೂ ಹೇಗೆ ಉಂಟಾದೀತು? ಬಟ್ಟೇನು, ಈಶ್ವರನ ವ್ಯಾಪ್ತಿಯು ಸರ್ವತ್ರ ಪ್ರಾಣಿಗತವಾದುದರಿಂದ ಪ್ರಾಣಿಗಳ ವಿಷಯದಲ್ಲಿ ಅಪರಾಧವು, ಈಶ್ವರಾಪರಾಧವು, ಅದೇ ಭಗವನ್ನಿಗ್ರಹವು ಎಂಬ ಭಾವವನ್ನೂ, ಪ್ರಾಣಿಗಳಿಗೆ ಸಂತೋಷವನ್ನುಂಟುಮಾಡುವುದು ಅವಾಪ್ತಸಮಸ್ತಕಾಮನಾದ ಭಗವಂತನ ಮುಖೋಲ್ಲಾಸವು, ಅದೇ ನಮ್ಮ ಕರ್ತವ್ಯವು ಎಂಬ ಭಾವವನ್ನೂ ಹುಟ್ಟಿಸಿಯೂ, ಈಶ್ವರನ ಸದ್ಭಾವವನ್ನೂ ಕಲ್ಯಾಣಗುಣಗಳನ್ನೂ ಸರ್ವತ್ರ ಕಾಣಿಸುತ್ತ, ಆನಂದಸಮುದ್ರದಲ್ಲಿ ನಮ್ಮನ್ನು ತೇಲಾಡಿಸುವಂಥದು ಭಕ್ತಿಯೊಂದೇ. ಆದುದರಿಂದ ಭಕ್ತರೇ ಪುರುಷಶ್ರೇಷ್ಠರು; ಅವರೇ ಪೂಜ್ಯರು. ಜ್ಯೋತಿಯು ಎಲ್ಲಿದ್ದರೂ ಜ್ಯೋತಿಯೇ ಆಗಿರುವುದರಿಂದ ಅವರುಗಳಲ್ಲಿ ಕುಲ ಜಾತಿ ಮುಂತಾದುವು

ಗಳನ್ನು ವಿಚಾರಿಸಕೂಡದು. ಅವರ ಅವತಾರವೆಂಬ ಸೂರ್ಯೋದಯವು

"ಪುಣ್ಯಾಂಭೋಜವಿಕಾಸಾಯ ಪಾಪಧ್ವಾಂತಕ್ಷಯಾಯ ಚ"

ಎಂದರೆ–ಲೋಕದ ಜನಗಳ ಪುಣ್ಯವೆಂಬ ಕಮಲವನ್ನು ವಿಕಾಸಿಸುವುದಕ್ಕಾಗಿಯೂ, ಅವರ ಪಾಪವೆಂಬ ಅಂಧಕಾರವನ್ನು ತೊಲಗಿಸುವುದಕ್ಕಾಗಿಯೂ ಉಂಟಾಗುವುದೆಂದು ಹಿರಿಯರು ಸ್ಮರಿಸುವರು.

---

"ಸಂತೋಷಂ ಜನಯೇತ್ ಪ್ರಾಜ್ಞ ಸ್ತದೇವೇಶ್ವರಪೂಜನಂ"

ಎಂಬ ನಮ್ಮ ಹಿರಿಯರ ಅನುಶಾಸನದಂತೆ, ಈ ನನ್ನ ಪ್ರಯತ್ನವು ಪಾಠಕರ ಉದಾರವಾದ ಹೃದಯದಲ್ಲಿ ಸಂತೋಷಲೇಶವನ್ನುಂಟುಮಾಡಿದುದೇ ಆದರೆ, ಅದೇ ನನಗೆ ಪರಮಸುಖವು.

→ಸಂಪೂರ್ಣಂ.←